ಪ್ರಚಾರ ಪುಸ್ತಕ ಮಾಲೆ

144

ನಿಕೊಲೊ ಮೆಕಿಯಾವೆಲ್ಲಿ

ಹೆಚ್. ಆರ್. ದಾಸೇಗೌಡ

ಪ್ರಸಾರಾಂಗ * ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ–೧೪೪

ನಿಕೊಲೊ ಮೆಕಿಯಾವೆಲ್ಲಿ

ಹೆಚ್. ಆರ್. ದಾಸೇಗೌಡ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

೧೯೮೮

ಮೊದಲನೆಯ ಮುದ್ರಣ : ೧೯೬೬
ಎರಡನೆಯ ಮುದ್ರಣ : ೧೯೮೮

೧೦,೦೦೦ ಪ್ರತಿಗಳು

[illegible]

ಬೆಲೆ : ರೂ. ೧-೦೦

ಪ್ರಕಾಶಕರು
ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬

ಮುದ್ರಕರು
ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು-೬

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವದ ಸಮಯದಲ್ಲಿಯೂ, ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿ, ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ, ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಹಿರಿದಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನತೆ ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲೆಸಿ, ಸಾಮಾನ್ಯ ಜನರಂತೆಯೇ ಇದ್ದು

ಕೊಂಡು, ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯ ದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸ ಗಳು ವಿಶ್ವವಿದ್ಯಾನಿಲಯದ ಮೆಟ್ಟಿಲನ್ನು ಹತ್ತಲು ಅವಕಾಶವಿಲ್ಲ ದವರಿಗೆ ವಿಶ್ವವಿದ್ಯಾನಿಲಯ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ. ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ, ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ. ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆ ಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ. ವಿಶ್ವವಿದ್ಯಾ ನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ಅವರ ದುಃಖಕ್ಕೆ ಮೂಲ ಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲ ಭಾವನೆಯು ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಿಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು ಓದಿ ತಿಳುವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆ ಯಲ್ಲಿ ಈಗಾಗಲೇ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿ ವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ ಮುಂತಾದ

ವಿಷಯಂಗಳನ್ನು ಕುರಿತ ನೂರಹದಿನಾರು ಪುಸ್ತಕಗಳು ಪ್ರಕಟ ವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗಿದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಶ್ರೀಯುತ ಎಚ್. ಆರ್. ದಾಸೇಗೌಡ ಅವರ 'ನಿಕೊಲೊ ಮೆಕಿಯಾವೆಲ್ಲಿ' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

೧-೧೦-೧೯೬೬

ಕೆ. ಎಲ್. ಶ್ರೀಮಾಲಿ
ಕುಲಪತಿಗಳು

ಅರಿಕೆ

ಪಾಶ್ಚಾತ್ಯ ಕೌಟಿಲ್ಯ ಮೆಕಿಯಾವೆಲ್ಲಿಯ ವಿಷಯವಾಗಿ ಮೈಸೂರು ವಿಶ್ವವಿದ್ಯಾನಿಲಯದ 'ಪ್ರಸಾರಾಂಗ'ದ ಆಶ್ರಯದಲ್ಲಿ ಗೋರಿಬಿದನೂರಿನಲ್ಲಿ ಮಾಡಿದ ಉಪನ್ಯಾಸವನ್ನು ಇಲ್ಲಿ ಪುಸ್ತಕ ರೂಪದಲ್ಲಿ ವಿಸ್ತರಿಸಿದ್ದೇನೆ. ವಿವಾದಾಸ್ಪದ ವ್ಯಕ್ತಿಯೆನಿಸಿದ ಮೆಕಿಯಾವೆಲ್ಲಿಯ ಸ್ವೈಜಪರಿಚಯವನ್ನೂ, ಅವನು ಪ್ರತಿಪಾದಿಸಿದ ರಾಜ್ಯಾಡಳಿತದ ವಿವಿಧ ಧರ್ಮಗಳನ್ನೂ ಜನಸಾಮಾನ್ಯರಿಗೆ ಪರಿಚಯ ಮಾಡಿಕೊಡುವುದೇ ಈ ಪುಟ್ಟ ಪುಸ್ತಕದ ಉದ್ದೇಶ.

ಈ ಕಾರ್ಯದಲ್ಲಿ ಅನೇಕ ಉಪಯುಕ್ತ ಸಲಹೆಗಳನ್ನು ಕೊಟ್ಟು ನೆರವಾದ ಶ್ರೀಮತಿ ವಿ. ಅನ್ನಪೂರ್ಣ, ಎಂ.ಎ., ಅವರಿಗೆ ನಾನು ಚಿರಋಣಿ. ಇದನ್ನು ಅತಿಶೀಘ್ರವಾಗಿ ಪ್ರತಿಮಾಡಿ ಮುದ್ರಣಕ್ಕೆ ಸಿದ್ಧಪಡಿಸಿಕೊಟ್ಟ ನನ್ನ ವಿದ್ಯಾರ್ಥಿಮಿತ್ರ ಶ್ರೀ ಜಿ. ಅಶ್ವತ್ಥ ನಾರಾಯಣ, ಎಂ. ಎ., ಅವರಿಗೂ, ಇದನ್ನು ಪ್ರಕಟಿಸಿದ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನ ಶಾಖೆಗೂ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಬೆಂಗಳೂರು. **ಹೆಚ್. ಆರ್. ದಾಸೇಗೌಡ**

೨೪-೯-೧೯೬೬.

ವಿಷಯ ಸೂಚಿಕೆ

ವ್ಯಕ್ತಿ ಪರಿಚಯ

ಪಾರಿಜಾತವ ಕಂಡು ನಿಡುಸುಯ್ದು ಪದಗಳಿಂ।
ಶೌರಿಕಥೆಯನು ಹೆಣೆದು ತೃಪ್ತನಹನು ಕವಿ॥
ಊರಿನುದ್ಯಾನಕದ ತರಿಸಿ ಬೆಳಸುವ ಕಾರ್ಯ–।
ಧೀರನಲ ರಾಜ್ಯಕನು – ಮಂಕುತಿಮ್ಮ ॥

—ಮಂಕುತಿಮ್ಮನ ಕಗ್ಗ

ಕವಿಯು ಜನತೆಯ ಆದರ್ಶ ಬಾಳ್ವೆಯನ್ನು ಕಲ್ಪನಾ ಜಗತ್ತಿನಲ್ಲಿ ಕಾವ್ಯಸತ್ಯವಾಗಿ ಕಾಣಿಸಬಲ್ಲ. ಆದರೆ ನಿತ್ಯಜೀವನದಲ್ಲಿ ವಾಸ್ತವಿಕ ಸತ್ಯವಾಗಿ ಕಾಣಿಸಲಾರ. ಅವನ ಕಲ್ಪನಾ ಜಗತ್ತಿನ ಆದರ್ಶ ಪಾರಿಜಾತವನ್ನು ವಾಸ್ತವಿಕ ಜೀವನದ ಉದ್ಯಾನವನಕ್ಕೆ ತರಿಸಿ, ಅದನ್ನು ಬೆಳೆಸುವ ಕಾರ್ಯಧೀರನೆಂದರೆ 'ರಾಜ್ಯಕ' (ರಾಜ್ಯ ನಡೆಸುವವನು, ರಾಜಕಾರಣಿ). ಹೀಗೆ ಆದರ್ಶಬಾಳ್ವೆಯ ಭಾಗೀರಥಿಯನ್ನು ನಿತ್ಯ ಜೀವನಕ್ಷೇತ್ರಕ್ಕೆ ಕರೆತರಬಲ್ಲವರೆಂದರೆ ಭಗೀರಥ ರಾಜ್ಯಕರು,[1] ಇಂತಹ ಭಗೀರಥ ರಾಜ್ಯಕರು ಜಗತ್ತಿನ ಇತಿಹಾಸದಲ್ಲಿ ಒಂದಿಬ್ಬರು ಮಾತ್ರ ಎಂದರೆ ಅತಿಶಯೋಕ್ತಿ ಎನಿಸಲಾರದು.

ಇಂತಹ ಒಬ್ಬಿಬ್ಬರು ಮಾತ್ರ ನಿಪುಣ ರಾಜನೀತಿಜ್ಞರಲ್ಲಿ ಎಲ್ಲರಿಗೂ ಚಿರಪರಿಚಿತನಾದ ಸುಪ್ರಸಿದ್ಧ ಕೌಟಿಲ್ಯ ಒಬ್ಬನಾದರೆ, ಪಾಶ್ಚಾತ್ಯ ಇತಿಹಾಸದಲ್ಲಿ ಬೆಳಗಿದ ವಿಶಿಷ್ಟ ರಾಜನೀತಿಜ್ಞ ನಿಕೊಲೊ ಮೆಕಿಯಾವೆಲ್ಲಿಯು ಮತ್ತೊಬ್ಬ. ಕೌಟಿಲ್ಯನ ಅರ್ಥಶಾಸ್ತ್ರದಂತೆಯೇ ಮೆಕಿಯಾವೆಲ್ಲಿಯ "ದಿ ಪ್ರಿನ್ಸ್" ಗ್ರಂಥವು ಪಾಶ್ಚಾತ್ಯ ಜಗತ್ತಿನಲ್ಲಿ ಪ್ರಭಾವಯುತ, ಪ್ರಸಿದ್ಧ ರಾಜ್ಯಶಾಸ್ತ್ರ ಗ್ರಂಥವಾಗಿದೆ.

---

1. ಭಗೀರಥ ರಾಜ್ಯಕರು–ದೇವಗಂಗೆಯನ್ನು ಭೂಮಿಗೆ ಕರೆತಂದ ಭಗೀರಥನಂತಹ ರಾಜಕಾರಣಿಗಳು.

ರಾಜ್ಯಶಾಸ್ತ್ರದ ಬೈಬಲ್ಲಿನಂತಿರುವ ಮೆಕಿಯಾವೆಲ್ಲಿಯ ಗ್ರಂಥಗಳೂ, ಅವನ ಜೀವಿತ ಕಥನಸಾಧನಗಳೂ ಪಾಶ್ಚಾತ್ಯ ರಾಜನೀತಿ ಇತಿಹಾಸದ ಪ್ರತಿಯೊಬ್ಬ ಅಧ್ಯಯನಕಾರನೂ, ರಾಜ್ಯಶಾಸ್ತ್ರದ ಪ್ರತಿಯೊಬ್ಬ ವಿದ್ಯಾರ್ಥಿಯೂ ಹಾಗೂ ಪ್ರತಿಯೊಬ್ಬ ಇತಿಹಾಸ ಪ್ರೇಮಿಯೂ ಅತ್ಯಗತ್ಯವಾಗಿ ತಿಳಿಯಬೇಕಾದುದಾಗಿವೆ.

ಮೆಕಿಯಾವೆಲ್ಲಿಯ ರಾಜನೀತಿಯನ್ನು ವಿಮರ್ಶಾದೃಷ್ಟಿಯಿಂದ ಪರಿಶೀಲಿಸಬೇಕಾದರೆ, ಮುಖ್ಯವಾಗಿ ನಾಲ್ಕು ಅಂಶಗಳನ್ನು ಗಮನಿಸಬೇಕು. ಅವಾವುವೆಂದರೆ: (೧) ಮೆಕಿಯಾವೆಲ್ಲಿಯ ಜೀವಿತ ಚಿತ್ರಣ, (೨) ಅವನ ಕಾಲದ ರಾಜಕೀಯ ಸ್ಥಿತಿಗತಿಗಳು, (೩) ಅವನ ಗ್ರಂಥಗಳ ಪರಿಚಯ ಮತ್ತು (೪) ಅವನ ಕೃತಿಗಳ ಹಾಗೂ ತತ್ವ ಸಿದ್ಧಾಂತಗಳ ಬಗ್ಗೆ, ಮುಖ್ಯವಾಗಿ 'ದಿ ಪ್ರಿನ್ಸ್' ಗ್ರಂಥದ ಬಗ್ಗೆ ಇತಿಹಾಸಜ್ಞರ ವಿಮರ್ಶಕರ ಟೀಕೆ ಟಿಪ್ಪಣಿಗಳು.

ಮೆಕಿಯಾವೆಲ್ಲಿಯು ಮಂಡಿಸಿರುವ ಅನೇಕ ತತ್ವಸಿದ್ಧಾಂತಗಳಿಗೆ ಅವನ ಜೀವನ ಚರಿತ್ರೆ ಮತ್ತು ಇಟಲಿಯ ಅಂದಿನ ರಾಜಕೀಯ ಸ್ಥಿತಿಗತಿಗಳು ಹೇಗೆ ಮೂಲ ಪ್ರೇರಕ ಪೋಷಕಗಳಾಗಿವೆಯೋ ಅಂತೆಯೇ, ಅವನ ಗ್ರಂಥಗಳ ಸತ್ವ, ಅಲ್ಲಿ ಪ್ರತಿಪಾದಿತವಾದ ತತ್ವ ಸತ್ಯಗಳ ಹೆಗ್ಗಳಿಕೆಯ ಪ್ರತಿಪಾದನೆಗಳಿಗೆ ಇತಿಹಾಸಜ್ಞರ, ವಿಮರ್ಶಕ ವಿಚಕ್ಷಣರ ಪರ ಹಾಗೂ ವಿರೋಧವಾದ ವಿವಾದಗಳ ವಿಚಾರಣೆ ಆಧಾರವಾಗಿದೆ.

ಮೆಕಿಯಾವೆಲ್ಲಿಯು ಕ್ರಿ.ಶ. ೧೪೬೯ರಲ್ಲಿ ಇಟಲಿಯ ಫ್ಲಾರೆನ್ಸ್ ನಗರದಲ್ಲಿ ಟುಸ್ಕನ್ ಎಂಬ ಶ್ರೀಮಂತ ಕುಲದಲ್ಲಿ ಜನಿಸಿದನು. ಇವನ ತಂದೆ ಪ್ರಸಿದ್ಧ ನ್ಯಾಯವಾದಿಯಾಗಿದ್ದನು. ಬಾಲ್ಯದಲ್ಲಿ ತಕ್ಕಮಟ್ಟಿಗೆ ಗ್ರೀಕ್ ಮತ್ತು ಲ್ಯಾಟಿನ್ ಗ್ರಂಥಗಳ ಅಧ್ಯಯನ ಮಾಡಿದ ಮೆಕಿಯಾವೆಲ್ಲಿಯು ಕ್ರಿ.ಶ. ೧೪೯೪ ರಲ್ಲಿ ಪ್ರಧಾನ

ನ್ಯಾಯಾಲಯವೊಂದರಲ್ಲಿ ಗುಮಾಸ್ತೆಯ ಕೆಲಸಕ್ಕೆ ಸೇರಿದನು. ಕ್ರಮಾಕ್ರಮವಾಗಿ ಅಭಿವೃದ್ಧಿ ಹೊಂದುತ್ತಾ ಕ್ರಿ.ಶ. ೧೪೯೮ರಲ್ಲಿ ಸ್ವತಂತ್ರ ನಗರ ಸಂಸ್ಥಾನಗಳಲ್ಲಿ ಒಂದಾಗಿದ್ದ ಫ್ಲಾರೆನ್ಸಿನ ಛಾನ್ಸೆರಿಯ ಕಾರ್ಯದರ್ಶಿಯಾದನು. ಆಸ್ಥಾನದಲ್ಲಿ ಕ್ರಿ.ಶ. ೧೫೧೨ ರವರೆಗೂ ಇದ್ದನು. ತನ್ನ ಮಧ್ಯವಯಸ್ಸಿನಲ್ಲಿ, ರಿಪಬ್ಲಿಕನ್ನರ ಆಡಳಿತ ಕಾಲದಲ್ಲಿ ಸಮರಶಾಖೆಯ ಹಾಗೂ ಆಂತರಿಕ ಆಡಳಿತ ಇಲಾಖೆಗಳ ನಿರ್ವಾಹಕನಾದನು. ಈ ಅವಧಿಯಲ್ಲಿ ಹಲವಾರು ದೇಶಗಳಿಗೆ ರಾಯಭಾರಿಯಾಗಿ ಹೋಗಿದ್ದನು. ಫ್ರಾನ್ಸಿನ ೧೨ ನೆಯ ಲೂಯಿ, ಎರಡನೆಯ ಪೋಪ್ ಜೂಲಿಯಸ್, ಡ್ಯೂಕ್ ಆಫ್ ವ್ಯಾಲೆಂಟಿನೋ ಶಿಬಿರಗಳಿಗೆ ರಾಜದೂತನಾಗಿ ಹೋಗಿದ್ದನು. ಡ್ಯೂಕ್ ಆಫ್ ವ್ಯಾಲೆಂಟಿನೋ ಪರಿಚಯದಿಂದ ಮೆಕಿಯಾವೆಲ್ಲಿಗೆ ರಾಜಕಾರಣದ ಬಗ್ಗೆ ಕಲ್ಪನೆ ಮೂಡಿತು ಎಂದು ಹಲವರ ಅಭಿಪ್ರಾಯ. ಆದರೆ ಸೀಸರ್ ಬೋರ್ಜಿಯಾ ಮೆಕಿಯಾವೆಲ್ಲಿಯ ಆದರ್ಶ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದನು. ಅಲ್ಲದೆ ಅವನು ಚಿತ್ರಿಸಿದ ವಾಸ್ತವಿಕವಾದದ ಮೂಲಪ್ರೇರಕಪ್ರತಿನಿಧಿಯೂ ಆಗಿದ್ದನು. ಆರನೆಯ ಪೋಪ್ ಅಲೆಗ್ಸಾಂಡರನ ಮರಣಾನಂತರದಲ್ಲಿ ರಾಜನೀತಿಯನ್ನು ಬದಿಗೊತ್ತಲು ಸ್ಥಾಪಿತವಾದ ಪವಿತ್ರ ಸಂಘಕ್ಕೆ ಸೀಸರ್ ಬೋರ್ಜಿಯಾ ಫ್ಲಾರೆನ್ಸ್ ನಗರದ ಪರವಾಗಿ ಪ್ರತಿನಿಧಿಯಾಗಿದ್ದನು.

ಇದೇ ಕಾಲದಲ್ಲಿ, ಕೆಲವಾರು ವರುಷಗಳಿಂದ ಪದಚ್ಯುತರಾಗಿದ್ದ ಮೆಡಿಚಿ ಸಂತತಿಯವರು ಸ್ಪೆಯಿನ್ ರಾಜನೊಡನೆ ಪಿತೂರಿಮಾಡಿ ರಿಪಬ್ಲಿಕನ್ನರನ್ನು ಅಧಿಕಾರದಿಂದ ಹೊರದೂಡಿ ಮತ್ತೆ ಆಳ್ವಿಕೆಗೆ ಬಂದರು. ಆಗ ರಿಪಬ್ಲಿಕನ್ ಪಕ್ಷದೊಡನಿದ್ದ ಮೆಕಿಯಾವೆಲ್ಲಿಯನ್ನು ರಾಜಕೀಯ ಕ್ಷೇತ್ರದಿಂದ ಹೊರಹಾಕಿದರು. ಅಲ್ಲದೆ ಮೆಡಿಚಿ

ಪ್ರಭುತ್ವದ ವಿರುದ್ಧ ಸಂಚುಗಾರನೆಂದು ಸೆರೆಮನೆಗೂ ದೂಡಿದರು. ಒಂದು ವರ್ಷದ ನಂತರ ಸಾರ್ವಜನಿಕ ಹಾಗೂ ರಾಜಕೀಯ ಕ್ಷೇತ್ರಗಳಿಗೆ ಮತ್ತೆ ಕಾಲಿಡಬಾರದು ಎಂಬ ಷರತ್ತಿನ ಮೇಲೆ ಬಿಡುಗಡೆ ಹೊಂದಿದನು. ನಂತರ ಸ್ಯಾನ್‌ಕ್ಯಾಸಿಯೋನೋದಲ್ಲಿ ಹಗಲೆಲ್ಲಾ ವ್ಯವಸಾಯದ ಮೇಲ್ವಿಚಾರಣೆ; ರಾತ್ರಿಯೆಲ್ಲಾ ವ್ಯಾಸಂಗ. ಹೀಗೆ ದ್ವಿಮುಖಜೀವನವನ್ನು ನಡೆಸಿದನು.

ಈ ಅವಧಿಯಲ್ಲಿ ಅವನ ಅನೇಕ ಕೃತಿಗಳು ಹೊರ ಬಂದುವು. ಇವುಗಳಲ್ಲಿ ಕೃತಿರತ್ನವಾದ 'ದಿ ಪ್ರಿನ್ಸ್' ಗ್ರಂಥವನ್ನು ಕ್ರಿ.ಶ. ೧೫೧೩ ರ ಜುಲೈ–ಡಿಸೆಂಬರ್ ಅವಧಿಯಲ್ಲಿ ರಚಿಸಿದನು. ಅಷ್ಟೇ ಅಲ್ಲದೆ ಉತ್ತಮ ಕಾವ್ಯಗಳೆನಿಸಿರುವ 'ಪ್ರಕರಣಗಳು,' 'ಕೆಲವು ಐತಿಹಾಸಿಕ ರಾಜಕೀಯ ಪ್ರಬಂಧಗಳು,' 'ಯುದ್ಧಕಲಾ ಸಂಭಾಷಣಾ ಸಂಹಿತೆ,' 'ಮ್ಯಾನ್ ಬ್ರಸಲ್' ಎಂಬ ಲಘುನಾಟಕ ಮೊದಲಾದುವನ್ನು ರಚಿಸಿದನು. ಅವನ ಲಘುನಾಟಕ ೧೬ ನೆಯ ಶತಮಾನದ ಇಟಾಲಿಯನ್ ನಾಟಕ ಸಾಹಿತ್ಯದಲ್ಲಿ ಶ್ರೇಷ್ಠವಾದುದಾಗಿದೆ. ಹೀಗೆ ಮೆಕಿಯಾವೆಲ್ಲಿಯು ಒಬ್ಬ ಉತ್ತಮ ಸಾಹಿತಿಯೂ ಆಗಿದ್ದನು.

ಮೆಡಿಚಿ ಮನೆತನದವರ ಪ್ರಾಬಲ್ಯ ಕಾಲಕ್ರಮೇಣ ಇಳಿಮುಖವಾಗುತ್ತ ಬರಲಾಗಿ ಕ್ರಿ. ಶ. ೧೫೨೧ ರ ನಂತರ ಮೆಕಿಯಾವೆಲ್ಲಿಯು ಮತ್ತೆ ಫ್ಲಾರೆನ್ಸ್ ನಗರದ ರಾಜಕೀಯ ಕ್ಷೇತ್ರದಲ್ಲಿಯೂ, ಅಂತರ ರಾಷ್ಟ್ರೀಯ ರಂಗದಲ್ಲಿಯೂ ಪ್ರವೇಶಿಸಿ ಯಶಸ್ಸಾಧನೆಗೆ ತೀವ್ರ ಪ್ರಯತ್ನಗಳನ್ನು ನಡೆಸುತ್ತಿದ್ದನು. ಕ್ರಿ. ಶ. ೧೫೨೫ ರಲ್ಲಿ ಇಟಲಿಯಲ್ಲಿ ಯುದ್ಧದ ಭೀತಿ ತಲೆದೋರಿತು. ಸ್ಪೆಯಿನ್ ದೊರೆ ಮತ್ತು ಜರ್ಮನಿಯ ಐದನೆಯ ಚಾರ್ಲ್ಸ್ ಇಬ್ಬರೂ ಇಟಲಿಯ ಮೇಲೆ ದಂಡೆತ್ತಿ ಬಂದರು. ಇಟಲಿಯ ರಾಜ್ಯಗಳು ಹಲ್ಲೆ

ಲೂಟಿಗಳಿಗೆ ಒಳಗಾಗಿ ಫ್ಲಾರೆನ್ಸ್ ನಗರವು ಮತ್ತೆ ರಿಪಬ್ಲಿಕನ್ನರ ಆಳ್ವಿಕೆಗೆ ಒಳಗಾಯಿತು.

ಮೆಕಿಯಾವೆಲ್ಲಿಯು ತನ್ನ ಹಿಂದಿನ ಉನ್ನತ ಉದ್ಯೋಗ ಮತ್ತೆ ದೊರೆಯಬಹುದೆಂದು ಆಶಿಸಿದ್ದನು. ಆದರೆ ಮೆಡಿಚಿಯವರ ಆಶ್ರಿತನಾಗಿದ್ದನೆಂಬ ಕಾರಣದಿಂದ ಯಾವ ಉನ್ನತ ಹುದ್ದೆಯೂ ದೊರೆಯಲಿಲ್ಲ. ನಂತರ ಆಕಸ್ಮಿಕ ಮಾರಕ ರೋಗವೊಂದಕ್ಕೆ ಬಲಿಯಾಗಿ ಕ್ರಿ. ಶ. ೧೫೨೭ ನೆಯ ಜೂನ್ ೨೦ ರಂದು ದೈವಾಧೀನನಾದನು. ಇವನ ಮರಣಕಾಲಕ್ಕೆ ಸ್ವಲ್ಪ ಮುನ್ನ ಇಟಲಿಯ ವಿಶ್ವವಿದ್ಯಾನಿಲಯವು ಫ್ಲಾರೆನ್ಸಿನ ಇತಿಹಾಸವನ್ನು ಬರೆಯುವ ಕಾರ್ಯವನ್ನು ಇವನಿಗೆ ಹೊರಿಸಿತ್ತು.

೨. ಅಂದಿನ ಇಟಲಿಯ ಪರಿಸ್ಥಿತಿ

ಮೆಕಿಯಾವೆಲ್ಲಿಯ ಕಾಲದ ಸ್ಥಿತಿಗತಿಗಳ ಹಿನ್ನೆಲೆಯನ್ನು ತಿಳಿದರೆ, ಅವನ ತತ್ತ್ವ ಸಿದ್ಧಾಂತಗಳ ಅಂತರಾರ್ಥ ಹಾಗೂ ಅವನ ವ್ಯಕ್ತಿತ್ವ-ಪ್ರತಿಭೆಗಳ ಪರಿಚಯವಾಗುತ್ತದೆ.

ಮಧ್ಯಯುಗದ ಊಳಿಗಮಾನಪದ್ಧತಿ ಯುರೋಪಿನಲ್ಲಿ ಬಹುಕಾಲ ಹಾಗೆಯೇ ಉಳಿಯಲು ಸಾಧ್ಯವಾಗಲಿಲ್ಲ. ಆರ್ಥಿಕ ಪ್ರಗತಿ, ತಾಂತ್ರಿಕಾಭಿವೃದ್ಧಿ, ವ್ಯಾಪಾರಾಭಿವೃದ್ಧಿ, ನಗರಾಭಿವೃದ್ಧಿಗಳು ಹೆಚ್ಚು ಹೆಚ್ಚು ಮುಂದುವರಿದುವು. ಅಧಿಕಾರ ಹರಿದು ಹಂಚಿಹೋಗಿ ಪುನರ್ವ್ಯವಸ್ಥೆ ಅಗತ್ಯವಾಯಿತು. ಪರಿಣಾಮವಾಗಿ ಯುರೋಪಿನಲ್ಲಿ ನಿರಂಕುಶಾಧಿಕಾರ ತಲೆಯೆತ್ತುವಂತಾಯಿತು. ಪ್ರಾದೇಶಿಕ ಅಧಿಕಾರ ಬಹು ವ್ಯಾಪ್ತವಾಗಿ ಫ್ಯೂಡಲ್ ಪದ್ಧತಿಯು ಹಂದರವೇ ಬದಲಾಗುವಂತಾಯಿತು. ಇಟಲಿಯೂ ತನ್ನ ಪುನರುಜ್ಜೀವನ ಕಾರ್ಯ ಮತ್ತು ಆಧುನಿಕ ಜಗತ್ತಿನ ಪ್ರಗತಿ

ಇವೆರಡರ ನಡುವೆ ಜೋಕಾಲಿಯಾಡಿತು. ಇಟಲಿಯು ಛಿನ್ನ ವಿಚ್ಛಿನ್ನವಾಗಿ ಒಂದುಕಡೆ ರಾಜನಿಷ್ಠೆಯ ಹಿಡಿತದಲ್ಲೂ, ಮತ್ತೊಂದುಕಡೆ ಪೋಪರ ಆಳ್ವಿಕೆಯ ಮುಷ್ಟಿಯಲ್ಲಿಯೂ ಸಿಲುಕಿತ್ತು. ಅಂತಃಕಲಹಗಳ ತವರೂರಾಗಿ ಜರ್ಮನಿ, ಸ್ಪೈಯಿನ್, ಫ್ರಾನ್ಸ್‌ಗಳ ಧಾಳಿಗಳಿಗೆ ಪದೇ ಪದೇ ಆಹುತಿಯಾಗುತ್ತಿತ್ತು. ಹೀಗಾಗಿ ಛಿದ್ರಗೊಂಡ ಇಟಲಿಯನ್ನು ಐಕ್ಯಗೊಳಿಸಿ ಆಳಬಲ್ಲ ಏಕೈಕ ಶಕ್ತಿವಂತನೊಬ್ಬನ ಕೊರತೆ ಉಂಟಾಗಿತ್ತು ಅಂದಿನ ಇಟಲಿಗೆ. ಏಕ ವ್ಯಕ್ತಿಯ–ಏಕ ಶಕ್ತಿಯ ಅಡಿದಾವರೆಗಳಲ್ಲಿ ಸಮಗ್ರ ಇಟಲಿ ಒಂದಾಗಿ ಬಾಳಬೇಕೆಂಬ ಹೊಂಗನಸನ್ನು ಕಾಣುತ್ತಿದ್ದ ಮೆಕಿಯಾ ವೆಲ್ಲಿಯು ತನ್ನ ಕನಸು ನನಸಾಗುವ ಮೊದಲೇ ಕಣ್ಮುಚ್ಚಿದನು.

ಇಟಲಿಯ ಪುನರುಜ್ಜೀವನ ಕಾಲವು ಕಲಿಸಿದ ಪಾಠ, ದೊರಕಿಸಿದ ಅನುಭವ ಹಿಂದೆಂದೂ ಇಟಲಿಗೆ ದೊರೆತಿರಲಿಲ್ಲ. ಸಾಂಸ್ಕೃತಿಕ ಹಿನ್ನೆಲೆಯಲ್ಲಿಯೂ, ಭೌತಿಕ ಪ್ರಗತಿಯ ದೃಷ್ಟಿಕೋನದಲ್ಲಿಯೂ ಮಹದಂತರಗಳು ಉಂಟಾದುವು. ಇದರಿಂದ ಇಟಲಿಯು ತನ್ನ ಬಾಳಿನ ಅಸ್ತಿತ್ವವನ್ನು ತಾನೇ ರೂಪಿಸಿಕೊಳ್ಳುವಂತಾಯಿತು. ಫಲಿತವಾಗಿ ಇಟಲಿಯ ನವಜ್ಞಾನದ ಉತ್ಕ್ರಾಂತಿಯು ಗ್ರೀಕ್ ರೋಮನ್ ಸಂಸ್ಕೃತಿಗಳಿಗೆ ಹಿರಿಯ ಸ್ಥಾನವನ್ನೂ, ಕ್ರಿಶ್ಚಿಯನ್ ವಿಚಾರ ಸಂಸ್ಕೃತಿಗಳಿಗೆ ಕನಿಷ್ಠಸ್ಥಾನವನ್ನೂ ದೊರಕಿಸಿತು. ಜೊತೆಗೆ ವ್ಯಕ್ತಿತ್ವ ಮುಖ್ಯವಾಗಿ 'ವ್ಯಕ್ತಿಶೋಧ' ಪ್ರಾರಂಭವಾಗಿ. ಪ್ರತಿಯೊಬ್ಬನೂ, ಪ್ರತಿಪಕ್ಷವೂ ತನ್ನ ಅಸ್ತಿತ್ವಕ್ಕಾಗಿ ಪ್ರಯತ್ನಿಸ ತೊಡಗಿದವು. ಅಧಿಕಾರಷಾಹಿ–ಜನತಾವರ್ಗಗಳು ಸ್ವಾರ್ಥದ ಅಮಲಿನಿಂದ ವರ್ತಿಸತೊಡಗಿದವು. ಭ್ರಷ್ಟಾಚಾರ, ನಿರ್ದಯತೆ, ಅಹಂಪ್ರವೃತ್ತಿ, ಆಕ್ರಮಣಶೀಲತೆಗಳು ಉಂಟಾದುವು. ರಾಜ ಕೀಯ ಭವಿಷ್ಯವನ್ನು ಪ್ರತಿಯೊಬ್ಬರೂ ವೈಯಕ್ತಿಕವಾಗಿ ರೂಪಿಸಿ

ಕೊಳ್ಳಬೇಕಾಯಿತು. ಅಂತೆಯೇ ಸಾರ್ವತ್ರಿಕವಾಗಿ ರೂಪಿಸ ಬೇಕಾಯಿತು. ವೈಚಾರಿಕತೆ-ವಾಸ್ತವಿಕತೆಗಳನ್ನು, ಸಂಪ್ರದಾಯ-ಆದರ್ಶಗಳನ್ನು ಒರೆಹಚ್ಚಿ ನೋಡುವ ಕಾಲ ಬಂದಿತು. ಮೆಕಿಯಾವೆಲ್ಲಿಯು ಬದುಕಿ ಬಾಳಿದ್ದು ಈ ಸಂಘರ್ಷಣೆಯ ಕಾಲದಲ್ಲಿ. ಇದರ ಹಿನ್ನೆಲೆಯಲ್ಲಿ ಅವನ ಬರಹಗಳು, ಮುಖ್ಯವಾಗಿ "ದಿ ಪ್ರಿನ್ಸ್" ಆಗಿನ ಪರಿಸ್ಥಿತಿಯ ಪ್ರತಿಬಿಂಬವಾಗಿ ರೂಪತಾಳಿತು. ಈ ಮೂಲಕ ಮೆಕಿಯಾವೆಲ್ಲಿಯು ಕ್ರಿ. ಶ. ೧೫ ನೆಯ ಶತಮಾನದ ಉತ್ತರಾರ್ಧ ಹಾಗೂ ಕ್ರಿ. ಶ. ೧೬ ನೆಯ ಶತಮಾನದ ಪೂರ್ವಾರ್ಧದ ಇಟಲಿಯ ರಾಜಕೀಯದ ಸತ್ಯಚಿತ್ರಣ ನೀಡಿದ್ದಾನೆ.

೩. "ದಿ ಪ್ರಿನ್ಸ್"-ಮೆಕಿಯಾವೆಲ್ಲಿಯ ರಾಜನೀತಿ ಕೈಪಿಡಿ

"ಮಹಾಪ್ರಭು ! ರಾಜಾನುಗ್ರಹಾಪೇಕ್ಷಿಗಳು ಅಮೂಲ್ಯವಾದ ಅಪೂರ್ವ ವಸ್ತುವಿಶೇಷಗಳನ್ನು ತಮಗೆ ಸಮರ್ಪಿಸಿ, ಪ್ರತಿಫಲವಾಗಿ ತಮ್ಮಿಂದ ಉತ್ತಮ ಜಾತ್ಯಶ್ವಗಳನ್ನೋ, ಅನುಪಮ ಶಸ್ತ್ರಾಸ್ತ್ರಗಳನ್ನೊ, ಬೆಲೆಬಾಳುವ ಕಿಂಕಾಪುಗಳನ್ನೊ, ನಗನಾಣ್ಯಗಳನ್ನೋ ಪಡೆಯುತ್ತಾರೆ. ಆದರೆ ನಾನು ತಮ್ಮ ಪಾದಪದ್ಮಗಳಿಗೆ ಸಮರ್ಪಿಸಲು ನನ್ನ ಬೊಕ್ಕಸವನ್ನೆಲ್ಲಾ ಶೋಧಿಸಿದಾಗ ನನಗೆ ಸಿಕ್ಕಿದ್ದು, ನನ್ನ ವಸ್ತುಗಳಲ್ಲೆಲ್ಲಾ ಅಸದೃಶವೆನಿಸಿದ ಈ ಪ್ರಬಂಧಗಳ ಪುಂಜ, 'ದಿ ಪ್ರಿನ್ಸ್' ಗ್ರಂಥ," ಎಂದು ಅದನ್ನು ಪೀರೋ. ಡಿ. ಮೆಡಿಚಿ ಪ್ರಭುವಿನ ಪುತ್ರ ಲೊರೆಂಜೋವಿನ ಸನ್ನಿಧಿಗೆ ಮೆಕಿಯಾವೆಲ್ಲಿಯು ಸಮರ್ಪಿಸಿದ್ದಾನೆ.

"ಆಧುನಿಕ ರಾಜಕಾರ್ಯಗಳ ನಿರ್ವಹಣೆಯ ಅನುಭವವನ್ನೂ, ಪುರಾತನ ರಾಜನೀತಿಯ ಐತಿಹಾಸಿಕ ಮಹಾಪುರುಷರ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ರೀತಿ ನೀತಿಗಳ ಛಟ್ಟಿಯನ್ನೂ

ಇಳಿಸಿ, ಚಿಕ್ಕದಾದರೂ ಅರ್ಥಗರ್ಭಿತವಾದ 'ದಿ ಪ್ರಿನ್ಸ್' ಗ್ರಂಥವನ್ನು ಮುಂದಿಟ್ಟಿದ್ದೇನೆ. ಇದರಲ್ಲಿ ಅಲಂಕಾರದ ಆಡಂಬರವಿಲ್ಲ, ವಚೋವೈಖರಿಗಳಿಗೆ ಎಡೆಯಿಲ್ಲ, ಇಲ್ಲಿ ಸತ್ಯ ಸಮಂಜಸತೆಗಳೇ ಅತಿಮುಖ್ಯ. ಇವುಗಳನ್ನು ಅಂಗೈನೆಲ್ಲಿ ಮಾಡಲು ಅಸಾಧ್ಯ ಶ್ರಮಪಟ್ಟಿದ್ದೇನೆ ಎಂದು ಸಾರಿಕೊಂಡು, ಪ್ರಭುವಿನ ಕೃಪಾಕಟಾಕ್ಷಕ್ಕಾಗಿ ಪ್ರಾರ್ಥಿಸಿಕೊಂಡಿದ್ದಾನೆ.

"ದಿ ಪ್ರಿನ್ಸ್" ಗ್ರಂಥವು ಇಪ್ಪತ್ತಾರು ಅಧ್ಯಾಯಗಳಿಂದ ಕೂಡಿದೆ. ರಾಜನ ಸ್ಥಾನದಲ್ಲಿ ನಿಂತು ಪ್ರಜೆಯನ್ನೂ, ಪ್ರಜೆಯ ಸ್ಥಾನದಲ್ಲಿ ನಿಂತು ರಾಜನನ್ನೂ ವಿಮರ್ಶಿಸಿ, ರಾಜ-ಪ್ರಜೆ, ಪ್ರಜೆ-ರಾಜರ ದೃಷ್ಟಿಯಲ್ಲಿ ಸಮರಸದ ರಾಜಕೀಯ ಜೀವನ ಹೇಗೆ ಸಾಧ್ಯ ಎಂಬುದನ್ನು ಮೆಕಿಯಾವೆಲ್ಲಿಯು ಈ ಗ್ರಂಥದಲ್ಲಿ ನೈಜವಾಗಿ ನಿರೂಪಿಸಿ, ರಾಜನೀತಿಯನ್ನು ಪ್ರತಿಪಾದಿಸಿದ್ದಾನೆ.

ಪರ ಪ್ರಾಂತಗಳ ಆಕ್ರಮಣ ಮತ್ತು ಆಡಳಿತದ ವಿಧಾನಗಳು, ರಾಜ್ಯಗಳಿಗೆ ಬಂದೊದಗುವ ವಿಪತ್ಪರಂಪರೆಗಳು ಮತ್ತು ಅವುಗಳ ಪರಿಹಾರ, ಪ್ರಜೆಗಳು ಮತ್ತು ಸೈನಿಕರ ಬಗ್ಗೆ ರಾಜನ ಕರ್ತವ್ಯಗಳು, ಪ್ರಗತಿಪಥದಲ್ಲಿ ರಾಜ್ಯರಥವನ್ನು ಮುನ್ನಡೆಸಬೇಕಾದರೆ ರಾಜನು ಎಂಥವನಾಗಿರಬೇಕು ಎಂಬ ವಿಷಯ, ಅದೃಷ್ಟ-ದೇವಿಯ ಪವಾಡ ಹಾಗೂ ಪುರುಷ ಪ್ರಯತ್ನಗಳ ಕೈವಾಡ ಚಿತ್ರಣ, ಇವೇ ಮೊದಲಾದ ಅನೇಕ ಸಂಗತಿಗಳನ್ನೊಳಗೊಂಡಿದೆ ಮೆಕಿಯಾವೆಲ್ಲಿಯ "ದಿ ಪ್ರಿನ್ಸ್" ಗ್ರಂಥ.

ಈ ಗ್ರಂಥವು ಹೊರಬಂದ ಸುಮಾರು ೩೫೦ ವರ್ಷಗಳ ನಂತರ ಛಿದ್ರಗೊಂಡಿದ್ದ ಇಟಲಿಯು ಒಂದುಗೂಡಿತು. ಈ ದಿಶೆಯಲ್ಲಿ ಶ್ರಮಿಸಿದ ಕೆವ್ಹೂರ್, ಗ್ಯಾರಿಬಾಲ್ಡಿ, ವಿಕ್ಟರ್ ಇಮ್ಯಾನ್ಯುಯಲ್ ಇವರುಗಳು ಅನುಸರಿಸಿದ ಕಾರ್ಯವಿಧಾನಗಳು ಮೆಕಿಯಾವೆಲ್ಲಿಯು

ಗ್ರಂಥದಲ್ಲಿ ಪ್ರತಿಪಾದಿತವಾದ ವಿಧಾನಗಳೇ ಆಗಿದ್ದುವು. ಇದಕ್ಕೆ ಅವನ ಗ್ರಂಥದಲ್ಲಿ ಕಂಡುಬರುವ ಐತಿಹ್ಯ, ಯಥಾರ್ಥವಾದ ಅನುಭವ, ಹಾಗೂ ತಿಳಿವಳಿಕೆಗಳ ಸಾಮರಸ್ಯವೇ ಕಾರಣವೆಂದರೆ ತಪ್ಪಾಗಲಾರದು. ಆದರೂ ಅವನು ಮಂಡಿಸಿರುವ ಅಭಿಪ್ರಾಯ ಗಳ ಬಗ್ಗೆ ಭೇದಗಳಿವೆ.

ಈ ಗ್ರಂಥ ಗಹನ ತತ್ವಗಳ ಕಗ್ಗವಲ್ಲ. ಸಂಕ್ಷಿಪ್ತ ರಾಜನೀತಿಯ ಕೈಪಿಡಿ. ಈ ಗ್ರಂಥದ ಪ್ರಭಾವಕ್ಕೆ ಒಳಗಾದ, ಇದರಿಂದ ಪ್ರಯೋಜನ ಹೊಂದಿದ ಜನರ ಸಂಖ್ಯೆ ಕಡಿಮೆಯೇನಿಲ್ಲ. ಹಾಗೆ ಪ್ರಭಾವ ಹೊಂದಿದ ಜನ ಸಾಮಾನ್ಯರೇನಲ್ಲ. ಇಟಲಿಯ ರಿಚ್‌ಲ್ಯೂ, ಸ್ವೀಡನ್ನಿನ ಕ್ರಿಶ್ಚಿಯನ್, ಪ್ರಷ್ಯಾದ ಫ್ರೆಡರಿಕ್, ಜರ್ಮನಿಯ ಬಿಸ್ಮಾರ್ಕ್ ಮತ್ತು ಕ್ಲೆಮೆಂಕ್ಯೂ ಮೊದಲಾದವ ರೆಲ್ಲರೂ ತಮ್ಮ ರಾಜನೈಪುಣ್ಯತೆಯಲ್ಲಿ ಈ ಗ್ರಂಥವನ್ನು ಅನುಸರಿಸಿದ್ದಾರೆ; ಇಲ್ಲವೇ, ಇದರಿಂದ ಸ್ಫೂರ್ತಿಹೊಂದಿದ್ದಾರೆ. ಮುಸೋಲಿನಿ ತನ್ನ ವಿದ್ಯಾರ್ಥಿದೆಶೆಯಲ್ಲಿ ಈ ಗ್ರಂಥದ ಮೇಲೆ ವಿಶೇಷ ಪ್ರಬಂಧವನ್ನೂ ರಚಿಸಿ ಡಾಕ್ಟರೇಟ್ ಪದವಿ ಗಳಿಸಿದರೆ, ಹಿಟ್ಲರನಿಗೆ ಈ ಗ್ರಂಥ ಪ್ರಾಣ ಸಮಾನವಾಗಿತ್ತು. 'ದಿ ಪ್ರಿನ್ಸ್' ಮತ್ತು 'ಡಿಸ್ಕೋರ್ಸಸ್' ಗ್ರಂಥಗಳ ಮುನ್ನುಡಿಕಾರ ಮ್ಯಾಕ್ಸರ್‌ನು "ಮೆಕಿಯಾವೆಲ್ಲಿಯ ಗ್ರಂಥಗಳು ಆಧುನಿಕ ರಷ್ಯಾ ನಿರ್ಮಾಪಕ ನೆನಿಸಿರುವ ಲೆನಿನ್-ಸ್ಟಾಲಿನ್ನರಿಗೆ ರಾಜಕೀಯ ಪಾಠಗಳ ಮೂಲ ಶಿಕ್ಷಣ ಗ್ರಂಥವಾಗಿತ್ತು" ಎಂದು ಸಾರಿದ್ದಾನೆ. ಜರ್ಮನಿಯ ಇತಿ ಹಾಸಕಾರರಾದ ರ್‍ಯಾಂಕೆ ಮತ್ತು ಮ್ಯಾಂಕೆ, ಹಾಗೂ ಇಂಗ್ಲೆಂಡಿನ ಲಾರ್ಡ್ ಆ್ಯಕ್ಟನ್ನರ ದೃಷ್ಟಿಯಲ್ಲಿ ಮೆಕಿಯಾವೆಲ್ಲಿಯು ಆಧುನಿಕ ರಾಜಕೀಯ ಇತಿಹಾಸ ಸ್ಥಾಪಕನಾಗಿದ್ದಾನೆ. ಅವನ ಗ್ರಂಥಗಳು

ನಮ್ಮ ಕಾಲದ ರಾಜಕೀಯ ಸಮಸ್ಯೆಗಳಿಗೆ ಪರಿಹಾರಗಳನ್ನಲ್ಲದಿದ್ದರೂ, ಕಾರಣಗಳನ್ನಾದರೂ ಎತ್ತಿ ತೋರಿಸುತ್ತವೆ.

'ದಿ ಪ್ರಿನ್ಸ್' ಗ್ರಂಥವು ತನ್ನ ೨೦ನೆಯ ವರ್ಷದಲ್ಲಿಯೇ ೨೫ ಮುದ್ರಣಗಳನ್ನು ಕಂಡಿತು. ಹಸ್ತಪ್ರತಿಯ ಸ್ವರೂಪದಲ್ಲಿದ್ದಾಗಲೇ, ಅದರ ಇಂಗ್ಲಿಷ್ ಅನುವಾದವು ಸಾಕಷ್ಟು ಪ್ರಸಿದ್ಧಿ ಹೊಂದಿತ್ತು. ಈಗ ಲ್ಯಾಟಿನ್, ಫ್ರೆಂಚ್ ಮೊದಲಾದ ನಾನಾ ಭಾಷೆಗಳಲ್ಲಿ ಅನುವಾದವಾಗಿದೆ. ಭಾರತದ ಅಧಿಕೃತ ರಾಜ್ಯ ಭಾಷೆಗಳಲ್ಲಿ ಅನುವಾದಿಸುವ ಯೋಜನೆಯ ಅಂಗವಾಗಿ ಸಾಹಿತ್ಯ ಅಕ್ಯಾಡೆಮಿಯವರು ಕನ್ನಡದಲ್ಲಿ ಪ್ರಕಟಿಸಿದ್ದಾರೆ. ದಿವಂಗತ ನವರತ್ನ ರಾಮರಾಯರು, "ಮೆಕಿಯಾವೆಲ್ಲಿಯ ರಾಜನೀತಿ" ಎಂಬ ಹೆಸರಿನಲ್ಲಿ ಈ ಗ್ರಂಥವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ.

೪. ಮೆಕಿಯಾವೆಲ್ಲಿ ಮತ್ತು ಅವನ ಬರಹಗಳು

ಮೆಕಿಯಾವೆಲ್ಲಿಯ ಅತಿಮುಖ್ಯ ಬರಹಗಳೆಂದರೆ "ಯುದ್ಧ ಕಲೆಯ ಸಂಭಾಷಣಾ ಸಂಹಿತೆ" ಮತ್ತು 'ದಿ ಪ್ರಿನ್ಸ್'. ಅವನ ಕೃತಿಗಳು ಹೊಗಳಿಕೆಗಳನ್ನೇ ಅಲ್ಲದೆ ಸಾಕಷ್ಟು ತೆಗಳಿಕೆಗಳನ್ನೂ ಗಳಿಸಿವೆ. ಅವನ ಪ್ರತಿಪಾದನೆಗಳ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ, ಅವನ ಗ್ರಂಥಗಳಿಗೆ ಪ್ರಾಶಸ್ತ್ಯವಿತ್ತಿದ್ದಾರೆ. ಕಾರಣ, ಅವನ ಗ್ರಂಥ ವೈಶಿಷ್ಟ್ಯ ಮತ್ತು ಮಹತ್ವ. ಅವನ ಕೃತಿಯಲ್ಲಿನ ಧ್ಯೇಯನೀತಿಗಳಿಗೂ, ಅವನ ಕಾಲದ ವಸ್ತುಪರಿಸ್ಥಿತಿಯ ಬಗ್ಗೆ ಇದ್ದ ಜನತೆಯ ಮನೋಭಾವಗಳಿಗೂ ತೀರಾ ಭಿನ್ನತೆ ಇದ್ದುದೇ ಅವನ ಕೃತಿಗಳ ಬಗ್ಗೆ ಇರುವ ಭಿನ್ನಾಭಿಪ್ರಾಯಗಳಿಗೆ ಕಾರಣವಾಗಿದೆ.

"ದಿ ಪ್ರಿನ್ಸ್" ಗ್ರಂಥವು ಏಕಚಕ್ರಾಧಿಪತ್ಯ-ನಿರಂಕುಶ ಪ್ರಭುತ್ವಗಳನ್ನು ಸಾರಿದರೆ, "ದಿ ಡಿಸ್ಕೋರ್ಸಸ್" ಗ್ರಂಥವು ರೋಮನ್ ಪ್ರಜಾಪ್ರಭುತ್ವದ ವಿಚಾರವನ್ನು ತಿಳಿಸುತ್ತದೆ. ವಿಲ್ಲರಿಯು ಹೇಳುವಂತೆ, 'ದಿ ಪ್ರಿನ್ಸ್' ಗ್ರಂಥವನ್ನು ಚೆನ್ನಾಗಿ ತಿಳಿಯಬಯಸುವವರಿಗೆ "ದಿ ಡಿಸ್ಕೋರ್ಸಸ್" ಗ್ರಂಥವು ಕೈಪಿಡಿಯಾಗಿದೆ.

ಮೆಕಿಯಾವೆಲ್ಲಿಯು ಪ್ರಜಾಪ್ರಭುತ್ವದ ಅನುರಾಗಿಯಾದರೂ, ಆ ಬಗ್ಗೆ ಹೆಚ್ಚಿಗೆ ಹೇಳದೆ, ಅಲ್ಪಜನರಾಳ್ವಿಕೆ-ಗುಣಸತ್ವ ವರ್ಗವನ್ನು ವಿವರಿಸುತ್ತಾನೆ. ಕಾರಣ ನಿಜಸ್ಥಿತಿಯಲ್ಲಿ ಉಪಯುಕ್ತವಾಗಬಲ್ಲುದನ್ನೇ ಹೇಳಹೊರಟ ಲೇಖಕ ಆತ. ವಾಸ್ತವಿಕತೆ ಅವನ ವಾದ ಸರಣಿಗಳ ನೆಲೆಗಟ್ಟು.

ಅವನ ಬರಹಗಳಲ್ಲಿನ ರಾಜನೀತಿ ಇಂದಿನ ಅಂತರರಾಷ್ಟ್ರೀಯ ನೀತಿನಿರೂಪಣೆಗಳನ್ನು ಹೆಚ್ಚಾಗಿ ಹೋಲುತ್ತದೆ. ರಾಷ್ಟ್ರಗಳ ನಡುವಣ ವ್ಯವಹಾರಗಳಲ್ಲಿ ಹೇಗೆ ರಾಯಭಾರ ಮಾಡಬೇಕು ಎಂಬ ವಿಚಾರ, ಯುದ್ಧಗಳು ಸಂಭವಿಸಿದಾಗ ರಾಜ್ಯರಕ್ಷಣೆ ಮಾಡುವ ಬಗೆ, ಒಪ್ಪಂದಗಳನ್ನು ಮಾಡಿಕೊಳ್ಳುವ ವಿಧಾನಗಳು, ಆಕ್ರಮಣ ಸಂಧಾನಗಳ ರೀತಿ ನೀತಿಗಳು ಮೊದಲಾದ ವಿಚಾರಗಳನ್ನು ಅವನ ಕೃತಿಗಳಲ್ಲಿ ಕಾಣಬಹುದು.

ಅವನ ರಾಜನೀತಿಯ ಮುಖ್ಯಾಂಶಗಳಾವುವೆಂದರೆ; ರಾಜ್ಯಭಾರ ಸೂತ್ರಗಳು, ರಾಜ್ಯವನ್ನು ವೃದ್ಧಿಗೊಳಿಸುವ ಮಾರ್ಗಗಳು, ರಾಜಾಧಿಕಾರ ವಿಸ್ತರಣೆ, ರಾಜ್ಯಗಳ ಪತನ-ಅಭ್ಯುತ್ಥಾನಗಳಿಗೆ ಕಾರಣ ಹಾಗೂ ಸಾಧನಗಳು, ಸೈನಿಕರ ಕರ್ತವ್ಯಗಳು ಸ್ವದೇಶಿ ಪರದೇಶೀ ಸೇನೆಗಳಿಂದ ಉಂಟಾಗುವ ಲಾಭನಷ್ಟಗಳು, ರಾಜನ ಮತ್ತು ಪ್ರಜೆಗಳ ಕರ್ತವ್ಯಾಧಿಕಾರಗಳು, ಮಾನವ ಸಹಜ

ಪ್ರವೃತ್ತಿಗಳಿಂದ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಆಗುವ ಪರಿಣಾಮಗಳು, ಚಾರಿತ್ರಿಕ ಮತ್ತು ಮನೋವೈಜ್ಞಾನಿಕ ವ್ಯಕ್ತಿತ್ವಗಳ ಅಸ್ತಿತ್ವ, ರಾಜಕೀಯ ನೈತಿಕತೆ ಸಾಧ್ಯವೇ? ಸಾಮಾನ್ಯ ಜನತೆಯ ಕೃತಜ್ಞತೆ ಎಂಥದ್ದು? ಅವರ ಮತಧರ್ಮ-ಸಂಪ್ರದಾಯಗಳ ಸ್ವರೂಪಗಳು ಯಾವುವು? ಅವುಗಳನ್ನು ರಾಜನಾದವನು ಬಳಸಿಕೊಳ್ಳುವ ಬಗೆ ಹೇಗೆ? ಎಂಬಿವೇ ಮೊದಲಾದ ವಿಚಾರಗಳು.

ರಾಜ್ಯದ ಉದ್ದೇಶ ಸಾಧನೆಯಲ್ಲಿ ರಾಜನು ನೀತಿ ವಿರೋಧಿಯಾದಲ್ಲಿ ಅದು ತಪ್ಪಾಗಲಾರದೆಂದು ಹೇಳಿದ ಕಾರಣ ಮೆಕಿಯಾವೆಲ್ಲಿಯು ಅನೇಕರ ತೀಕ್ಷ್ಣಟೀಕೆಗಳಿಗೆ ಗುರಿಯಾಗಿ ಅಪಖ್ಯಾತಿಗೆ ಒಳಗಾಗಬೇಕಾಯಿತು. ವ್ಯಕ್ತಿಗಿಂತ ರಾಜ್ಯ ಮುಖ್ಯ. ಆಳುವ ದೊರೆ ಬಹುಜನರ ಸುಖಕ್ಕಾಗಿ ಅನಿವಾರ್ಯವಾಗಿ ಅಲ್ಪ ಜನರನ್ನು ಮರ್ದನಗೈದುದೇ ಆದರೆ ಅದು ಅನೀತಿಯೂ ಅಲ್ಲ. ಅಪರಾಧವೂ ಅಲ್ಲ ಎಂಬುದು ಅವನ ತತ್ವ. ಆದರೆ ಮೆಕಿಯಾವೆಲ್ಲಿಯು ಸ್ವತಃ ಅನೀತಿವಂತನಾಗಲೀ, ಅನೀತಿ ಪ್ರತಿಪಾದಕನಾಗಲೀ ಆಗಿರಲಿಲ್ಲ. ತನ್ನ ಕೃತಿಗಳಲ್ಲಿ ಅನೇಕಕಡೆ ನ್ಯಾಯ, ಸತ್ಯ, ಧರ್ಮಗಳ ಪ್ರತಿಪಾದನೆಗಾಗಿ ರಾಜನು ಉನ್ನತ ಮನೋಧರ್ಮವನ್ನು ಪಡೆದಿರಬೇಕೆಂದು ಸಾರಿದ್ದಾನೆ. ಸಾಮಾನ್ಯ ನೈತಿಕತೆಯಿಂದ ರಾಜಕೀಯ ನೈತಿಕತೆಯನ್ನು ಬೇರ್ಪಡಿಸಿದ್ದಾನೆ ಅಷ್ಟೆ.

ಮೆಕಿಯಾವೆಲ್ಲಿಯ ಗ್ರಂಥಗಳ ಮೌಲ್ಯವನ್ನು ನಿರ್ಧರಿಸಿ ನ್ಯಾಯಯುತ ತೀರ್ಮಾನಕ್ಕೆ ಬಂದ ನಾಂದಿಪುರುಷನೆಂದರೆ ಇಟಾಲಿಯನ್ ಸಾಹಿತ್ಯಕ್ಷೇತ್ರದ ವಿಮರ್ಶಾ ಚಕ್ರವರ್ತಿ ಫ್ರಾನ್ಸಿಸ್ಕೋ ಡಿ ಸ್ಯಾಂಕ್ಟಿಸ್. ಅವನು "ಮೆಕಿಯಾವೆಲ್ಲಿಯ ಬರಹಗಳು ಆಧುನಿಕ

ಜಗತ್ತಿಗೆ ದೊರೆತಿರುವ ಶ್ರೇಷ್ಠ ಕೊಡುಗೆಗಳಲ್ಲೊಂದು" ಎಂದಿದ್ದಾನೆ.

ಪ್ರಪಂಚದಲ್ಲಿ ಬಾಳಬೇಕಾದರೆ ಮೊದಲು ಬದುಕಿನಲ್ಲಿ ನಂಬಿಕೆ ಬೇಕು. ಪ್ರಾಪಂಚಿಕ ಜೀವನದ ಧ್ಯೇಯಗಳನ್ನು ನೈಸರ್ಗಿಕ ಶಕ್ತಿ ಸಾಧನಗಳ ಮೂಲಕ ಸಾಧಿಸಬೇಕು. ಮಾನವ ಜೀವನ ಮತ್ತು ಮಾನವನ ಕರ್ಮ ಎರಡೂ ಅತಿಗಣ್ಯವಸ್ತುಗಳಾಗಿವೆ ಎಂದು, ಮೆಕಿಯಾವೆಲ್ಲಿ ದರ್ಶನದ ತೀರ್ಪನ್ನು ಡಿ ಸ್ಯಾಂಕ್ಟಿಸ್ ಕೊಡುತ್ತಾನೆ.

ನಮ್ಮ ಪ್ರಪಂಚ ನಮ್ಮ ಅನುಭವದಂತೆ ನಮಗೆ ಕಾಣುತ್ತದೆ. ಪ್ರತಿಯೊಬ್ಬರೂ ತಮಗೆ ತಾವೇ ದೈವ, ವಿಧಿ, ಶಕ್ತಿ ಎಲ್ಲವೂ ಆಗಿದ್ದಾರೆ ಅವರಿಗೆ ಅವರೇ ಸರ್ವಸ್ವ ಎಂಬ ಅವನ ಮಾತು ಸಮಂಜಸವಾಗಿದೆ.

ಡಬ್ಲ್ಯು. ಹೆಚ್. ಡನ್ನಂಗ್, "ಭೌಗೋಳಿಕ ಶಾಸ್ತ್ರದಲ್ಲಿ ಕೊಲಂಬಸ್ಸನ ಅಮೆರಿಕಾದ ಅನ್ವೇಷಣೆಯನ್ನು ಯಾವ ರೀತಿ ಪರಿಗಣಿಸುತ್ತೇವೋ ಅದೇರೀತಿ ರಾಜಕೀಯಶಾಸ್ತ್ರದಲ್ಲಿ ಮೆಕಿಯಾವೆಲ್ಲಿಯ ಗ್ರಂಥಗಳನ್ನೂ, ಅವನ ಸಿದ್ಧಾಂತಗಳನ್ನೂ ಪರಿಗಣಿಸಬೇಕು" ಎಂದಿದ್ದಾನೆ.

೫. ಮೆಕಿಯಾವೆಲ್ಲಿಯ ತತ್ವಸಿದ್ಧಾಂತಗಳು

ಪ್ರಜೆಗಳ ಧರ್ಮವೇ ಬೇರೆ, ರಾಜನ ಧರ್ಮವೇ ಬೇರೆ; ಪ್ರಜೆಗಳ ಕರ್ತವ್ಯಾಧಿಕಾರಗಳೇ ಬೇರೆ, ರಾಜನ ಕರ್ತವ್ಯಾಧಿಕಾರಗಳೇ ಬೇರೆ. ಸಮಾಜಕ್ಕೆ ವಿರುದ್ಧವಾಗಿ ಪ್ರಜೆ ಬಾಳಬಾರದು. ಯಾರಾದರು ಹಾಗೆ ಬಾಳಲು ಯತ್ನಿಸಿದರೆ, ಅಂತಹವರ ಮೇಲೆ ರಾಜ್ಯದ ಹಿತದೃಷ್ಟಿಯಿಂದ ರಾಜನು ಕ್ರಮಕೈಕೊಳ್ಳುವುದು ಆವಶ್ಯಕ. ರಾಜಕೀಯ ಐಕ್ಯತೆಗಾಗಿ ರಾಜನು ಸಾಮಾಜಿಕ ಧರ್ಮ

ಗಳಿಗೆ ವಿರೋಧವಾಗಿ ವರ್ತಿಸಬಹುದು. ಸಮಯ ಬಂದಲ್ಲಿ ಅನೈತಿಕ ಮಾರ್ಗದಲ್ಲೂ ಹೋಗಬಹುದು. ಏಕೆಂದರೆ ಸಮಾಜಕ್ಕಿಂತ ರಾಜ್ಯ ಮುಖ್ಯ. ರಾಜ್ಯವಿಲ್ಲದ ಸಮಾಜ ಚುಕ್ಕಾಣಿ ಮುರಿದ ಹಡಗಿನಂತೆ. ರಾಜ್ಯವಿಲ್ಲದ ಪ್ರಜೆಗಳು ನಾಯಕನಿಲ್ಲದ ಸೇನೆಯಂತೆ. ಆದ್ದರಿಂದ ಪ್ರಜೆಗಿಂತ ರಾಜ್ಯ ಮುಖ್ಯ.

ಸಾಮಾನ್ಯ ಜನತೆಯ ದೃಷ್ಟಿಯಲ್ಲಿ ಮೆಕಿಯಾವೆಲ್ಲಿಯ ತತ್ವ ಸಿದ್ಧಾಂತಗಳು ಅನ್ಯಾಯಕಾರಿಗಳಾಗಿ ಕಂಡುಬಂದರೂ, ಆಳುವ ರಾಜನ ದೃಷ್ಟಿಯಲ್ಲಿ, ರಾಜಕೀಯ ದೃಷ್ಟಿಯಲ್ಲಿ, ದೇಶದ ಹಿತ ಸಾಧನೆಯಲ್ಲಿ ಅವು ನ್ಯಾಯವಾಗಿಯೇ ಇವೆ. ರಾಜ್ಯದ ಹಿತಸಾಧನೆಯಲ್ಲಿ ಅವಶ್ಯಕವಾದಲ್ಲಿ ರಾಜನು ನೀತಿ ಬಾಹಿರನಾಗಬಹುದು ಎಂದದ್ದೇ ಮೆಕಿಯಾವೆಲ್ಲಿಯನ್ನೂ, ಅವನ ತತ್ವಗಳನ್ನೂ ಅನೇಕ ಟೀಕಾರೋಪಣೆಗಳಿಗೂ, ಭಿನ್ನಾಭಿಪ್ರಾಯಗಳಿಗೂ ಗುರಿಮಾಡಿತು. ಆದರೆ ಮೆಕಿಯಾವೆಲ್ಲಿಯು ಸ್ವಭಾವತಃ ದುಷ್ಟನೂ ಅಲ್ಲ; ಅವನ ಕೃತಿಗಳು ದುಷ್ಟತನ ಪ್ರತಿಪಾದನೆಯ ಕೈಹೊತ್ತಿಗೆಗಳೂ ಅಲ್ಲ. ಅವನ ವಿಚಾರ ನಿರೂಪಣೆ ಎಷ್ಟರಮಟ್ಟಿಗೆ ನ್ಯಾಯಬದ್ಧವಾಗಿದೆ ಎಂಬ ತೀರ್ಮಾನ ದೇಶ ಕಾಲ ಪರಿಸ್ಥಿತಿಗೆ ತಕ್ಕಂತೆ, ವಿಮರ್ಶಕರ ದೃಷ್ಟಿಕೋಣಕ್ಕೆ ತೋರಿದಂತೆ ಇದೆ ಅಷ್ಟೆ. ಹಾಗಿರಬೇಕಾದ್ದೂ ನ್ಯಾಯವೇ ! ಇಲ್ಲದಿದ್ದಲ್ಲಿ ಯುಗಧರ್ಮ ವಿಕಾಸದ ಹಂತಗಳೂ, ಪ್ರಗತಿಯ ಘಟ್ಟಗಳೂ ಕಂಡುಬರುವ ಬಗೆ ಹೇಗೆ ?

ತನ್ನ ಸಿದ್ಧಾಂತ ನಿರೂಪಣೆಯನ್ನು ಮಾಡಲು ಹೊರಟ ಮೆಕಿಯಾವೆಲ್ಲಿಯು ತನ್ನ ಅನುಭವದಿಂದ ದರ್ಶಿಸಿದ ವಿವೇಚನೆಯಲ್ಲಿ ಕೃತಿರಚನೆ ಮಾಡಿದನು. ಅವನ ಕಾಲದ ಇಟಲಿಯ ರಾಜಕೀಯ ಸ್ಥಿತಿಗಳು ಅವನ ಅನುಭವ ಕಂಡ ಚಿತ್ರಗಳಾದರೆ, ಅವನ ಕೃತಿಗಳು–ಒಂದು ವಿವೇಚನೆ. ಅವನು ಬಯಸಿದ ಆದರ್ಶಚಿತ್ರಗಳು

ಸತ್ಯದರ್ಶನಗಳ ಸಾಕ್ಷಾತ್ಕಾರಕ್ಕೆ ಪ್ರಯತ್ನಿಸಿದ ಸಾಹಸಗಳಾಗಿವೆ. ಪರಿಣಾಮವಾಗಿ ಸಾರ್ವಕಾಲಿಕ ತತ್ವಗಳನ್ನು ಸಮಕಾಲೀನ ವಸ್ತು ಸಂಗತಿಗಳ ಆಧಾರದಮೇಲೆ ಮೂಡಿಸಿದನು. ಜಾನೆಟ್ ಹೇಳು ವಂತೆ, ಮೆಕಿಯಾವೆಲ್ಲಿಯು ರಾಜ್ಯಶಾಸ್ತ್ರವನ್ನು ತನ್ನ ದೇಶಭಾಷೆ ಯುಲ್ಲಿ ಬರೆದ ಕಾರಣ ಭಿನ್ನಾಭಿಪ್ರಾಯಗಳಿಗೆ ಗುರಿಯಾದನು. ಈ ಭಿನ್ನಾಭಿಪ್ರಾಯಗಳಲ್ಲಿ ಸಾಕಷ್ಟು ಸದಭಿಪ್ರಾಯಗಳೂ, ಸಾಕಷ್ಟು ದುರಭಿಪ್ರಾಯಗಳೂ ಇವೆ. ಈ ವಿವಿಧ ಅಭಿಪ್ರಾಯಗಳೇ ಮೆಕಿಯಾವೆಲ್ಲಿಯ ಸಿದ್ಧಾಂತಗಳ ಮಹತ್ವವನ್ನು ಎತ್ತಿ ತೋರಿಸಿವೆ.

ಜನತೆಗೆ ಬೇಕಾದ್ದು ರಕ್ಷಣೆ, ಸೌಖ್ಯ. ರಾಜನಿಗೆ ಬೇಕಾದ್ದು ಅಧಿಕಾರ, ವೈಭವ. ಜನರು ಜೀವನದ ದೃಷ್ಟಿಯಿಂದಲೂ, ರಾಜರು ಅಧಿಕಾರದೃಷ್ಟಿಯಿಂದಲೂ ಗಳಿಸಿ, ಬೆಳೆಸಿ. ಉಳಿಸಿ ಬಾಳನ್ನು ಸವೆಸುತ್ತಾರೆ. ಮಾನವರ ಆಸೆ ಆಕಾಂಕ್ಷೆಗಳಿಗೆ ಇತಿಮಿತಿ ಇಲ್ಲವಾದರೂ, ಜನತೆಯ ಆಸ್ತಿಗಳಿಕೆಗೂ, ಆಳುವವನ ಅಧಿಕಾರದಾಹಕ್ಕೂ ಇತಿಮಿತಿಗಳೂ, ನೀತಿನಿಯಮಗಳೂ ಉಂಟು.

ಕಾನೂನಿನ ಭದ್ರತೆ ಇಲ್ಲದಿದ್ದಲ್ಲಿ ಅರಾಜಕತೆ ಉಂಟಾಗುತ್ತದೆ. ಅರಾಜಕತೆಯಲ್ಲಿ ಆಳಿಸಿಕೊಳ್ಳುವವರಿದ್ದರೂ, ಆಳುವವರಿರು ವುದಿಲ್ಲ. ಆಗ ಜನತೆಯ ಪ್ರಾಣ, ಆಸ್ತಿ, ಹಕ್ಕುಗಳನ್ನು ಯಾರು ರಕ್ಷಿಸುತ್ತಾರೋ ಅವರೇ ರಾಜರಾಗಬಲ್ಲರು.

ಮಾನವನು ಪಿತನನ್ನಾದರೂ ಕಳೆದುಕೊಂಡಾನು, ಆದರೆ ಪಿತ್ರಾರ್ಜಿತವನ್ನು ಕಳೆದುಕೊಳ್ಳಲು ಸಿದ್ಧನಿರುವುದಿಲ್ಲ. ಅವನಿಗೆ ರಾಜನು ಕೊಲೆಗಾರನಾದರೂ ಸರಿಯೇ ಕೊಳ್ಳೆಗಾರನಾಗಿರದಿದ್ದರೆ ಸರಿ ಎಂಬ ಮೆಕಿಯಾವೆಲ್ಲಿಯ ಕುಹಕವಾದಗಳು 'ನೀತಿಗಿಂತ ರಕ್ಷಣೆ ಮುಖ್ಯ' ಎಂಬ ತತ್ವವನ್ನು ಎತ್ತಿ ಹಿಡಿಯುತ್ತವೆ. ಅದಕ್ಕಾಗಿಯೇ

ಮೆಕಿಯಾವೆಲ್ಲಿಯು, ರಾಜನು ನೀತಿಯನ್ನು ಕಡೆಗಾಣಿಸಿದರೆ ಅದು ಅನ್ಯಾಯವಲ್ಲ ಎಂದು ಸಾರಿದ್ದು.

ಮೆಕಿಯಾವೆಲ್ಲಿಯು ರಾಜನ ನೀತಿಯ ಬಗ್ಗೆ ಎರಡು ಸಿದ್ಧಾಂತಗಳನ್ನು ಮುಂದಿಟ್ಟಿದ್ದಾನೆ. ಕ್ರಾಂತಿ ಸಮಯದಲ್ಲಿ ರಾಜ್ಯ ನಿರ್ಮಾಣ ಹಾಗೂ ರಾಜ್ಯ ಪುನರ್ವ್ಯವಸ್ಥೆಗಳಿಗಾಗಿ ನಿರಂಕುಶಾಧಿಕಾರವನ್ನು ಮಂಡಿಸಿದರೆ, ಶಾಂತಿಕಾಲದಲ್ಲಿ ನಿರ್ಮಿತ ರಾಜ್ಯಾಭಿವೃದ್ಧಿಗಾಗಿ ಪ್ರಜೆಗಳಿಗೆ ಹಕ್ಕುಬಾಧ್ಯತೆಗಳನ್ನೂ, ಸ್ಥಾನಮಾನಗಳನ್ನೂ ನೀಡಬೇಕು; ಕಾನೂನಿಗನುಗುಣವಾಗಿ ರಾಜ್ಯವಾಳಬೇಕು; ಅವರ ಮತಧರ್ಮ ಸಂಪ್ರದಾಯ ಪದ್ಧತಿಗಳನ್ನು ಗೌರವಿಸಿ ಮನ್ನಿಸಬೇಕು ಎಂಬ ಸಾಂಕುಶಾಧಿಕಾರ [Constitutional Government] ವನ್ನು ಸಾರುತ್ತಾನೆ. ಇವನ ಸಿದ್ಧಾಂತವನ್ನು ಒಂದು ರೀತಿಯಲ್ಲಿ, "ಕಾಲಾಯ ತಸ್ಮೈನಮಃ" ಎಂಬ ಬಗೆಯ ಸಿದ್ಧಾಂತ ನಿರೂಪಣೆ ಎನ್ನಬಹುದು.

ವೈಯಕ್ತಿಕ ಧರ್ಮಕ್ಕಿಂತ ಸಾಮಾಜಿಕಧರ್ಮ ದೊಡ್ಡದು. ಸಾಮಾಜಿಕ ಧರ್ಮಕ್ಕಿಂತ ರಾಜಕೀಯಧರ್ಮ ದೊಡ್ಡದು. ವ್ಯಕ್ತಿಧರ್ಮ-ರಾಜಧರ್ಮಗಳಲ್ಲಿ ರಾಜಧರ್ಮ ದೊಡ್ಡದು. ಸಮಾಜದ ಹಿತರಕ್ಷಣೆಯಲ್ಲಿ ವ್ಯಕ್ತಿಧರ್ಮಕ್ಕಿಂತ ರಾಜಧರ್ಮದ ಪಾತ್ರ ಮುಖ್ಯವಾದುದರಿಂದ, ರಾಜನು ವ್ಯಕ್ತಿಧರ್ಮವನ್ನು ಕಡೆಗಾಣಿಸಿದರೆ ತಪ್ಪೇನಿಲ್ಲ, ಅದು ನ್ಯಾಯವಾದುದೇ. ಇಲ್ಲಿ ಸಾರ್ವಜನಿಕ ಹಿತ ಮುಖ್ಯ. ಆದ್ದರಿಂದ "ರಾಜ್ಯಧರ್ಮಕ್ಕೆ ನೀತಿಯ ಕಟ್ಟಿಲ್ಲ ಎಂಬುದು ಮೆಕಿಯಾವೆಲ್ಲಿಯ ವಾದದ ತಿರುಳು" ಎಂದು ವ್ಯಾಕ್ಸೆ ಸಾರುತ್ತಾನೆ.

೬. ಪ್ರಭುತ್ವ ಪದ್ಧತಿಗಳು

ಮೆಕಿಯಾವೆಲ್ಲಿಯನ್ನು ಏಕೈಕಪ್ರಭುತ್ವದ ಪ್ರತಿಪಾದಕ ಎನ್ನುವುದಕ್ಕಿಂತ ಹಲವು ಪ್ರಭುತ್ವಗಳ ದರ್ಶಕ ಎನ್ನಬಹುದೇನೊ! ಅವನು ತನ್ನ ಜೀವನಾದ್ಯಂತವಾಗಲಿ, ತನ್ನ ಬರಹಗಳ ಆದ್ಯಂತ ವಾಗಲಿ ಕೇವಲ ಒಂದೇ ಒಂದು ಪ್ರಭುತ್ವ ಪದ್ಧತಿಯನ್ನು ಹಠ ಹಿಡಿದು ಸಾಧಿಸಿದಂತಿಲ್ಲ. ಹಲವು ಪ್ರಭುತ್ವ ಪದ್ಧತಿಗಳ ಗುಣಾವಗುಣಗಳನ್ನು ವಿಮರ್ಶಿಸಿ, ಅಂದಿನ ಛಿದ್ರಿತ ಇಟಲಿ ಯನ್ನು ಒಂದುಗೂಡಿಸಲು ಸಮರ್ಥವೆನಿಸಿದ ಪ್ರಭುತ್ವದ ಸ್ವರೂಪಗಳನ್ನು ನಿರ್ದೇಶಿಸಿದ್ದಾನಷ್ಟೆ. ಅವನ ಬರಹಗಳಲ್ಲಿ ಏಕಾಧಿಪತ್ಯ [Monarchy] ಬಹುಜನಾಧಿಪತ್ಯ [Majority Government] ಅಲ್ಪ ಜನಾಧಿಪತ್ಯ [Minority Government] ಈ ಮೂರರ ಗುಣಾವಗುಣಗಳನ್ನೂ ಕಾಣಬಹುದು.

ಮೆಕಿಯಾವೆಲ್ಲಿಯು ಅಂದಿನ ಇಟಲಿಗೆ ಏಕಾಧಿಪತ್ಯವನ್ನು ಸೂಚಿಸಲು ಕಾರಣ, ಅಲ್ಲಿ ತಾಂಡವವಾಡುತ್ತಿದ್ದ ಅರಾಜಕತೆ, ಅಪ್ರಮಾಣಿಕತೆ, ಅನೀತಿ, ಭ್ರಷ್ಟಾಚಾರ ಇವೇ ಮೊದಲಾದುವು. ಅಷ್ಟು ನೀತಿಗೆಟ್ಟ ಪೌರರಲ್ಲಿ ಸನ್ನಡತೆಯ ಪೌರತ್ವದ ಅಮೂಲ್ಯತೆ ಯುಳ್ಳ ಪ್ರಜಾಪ್ರಭುತ್ವ ಅಸಾಧ್ಯದ ಮಾತಾಗಿತ್ತು. ಈ ಕಾರಣ ಗಳಿಂದ ಅವನ ಸಿದ್ಧಾಂತಗಳು ಸ್ವಲ್ಪಮಟ್ಟಿಗೆ ಏಕಾಧಿಪತ್ಯದತ್ತ ವಾಲಿರುವುದರಲ್ಲಿ ಅಚ್ಚರಿಯೇನಿಲ್ಲ. ಪ್ರಜಾಪ್ರಭುತ್ವವನ್ನು ಎಂದೂ ತೆಗಳಿದವನಲ್ಲ ಮೆಕಿಯಾವೆಲ್ಲಿ. ಆದರೆ ಅದು ಎಲ್ಲ ಸಂದರ್ಭಗಳಲ್ಲೂ ಸುಲಭ ಸಾಧ್ಯವಲ್ಲ ಎಂದು ತಿಳಿದಿದ್ದನು.

ಮೆಕಿಯಾವೆಲ್ಲಿಯ ದೃಷ್ಟಿಯಲ್ಲಿ ಸಮಾನತೆ ಎಂದರೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗಳೇ ಹೊರತು,

ರಾಜಕೀಯ ಸಮಾನತೆಯನ್ನು ಅವನು ಎಂದೂ ಒಪ್ಪಿದವನಲ್ಲ. ರಾಜಕೀಯದಲ್ಲಿ ಸಾರ್ವಭೌಮಾಧಿಕಾರಕ್ಕೆ ಪ್ರಾಶಸ್ತ್ಯವಿತ್ತಿದ್ದನು.

ಐಶ್ವರ್ಯ ಮತ್ತು ಅಧಿಕಾರಗಳು ಏಕಾಧಿಪತ್ಯದಲ್ಲಿ ಕೇಂದ್ರೀಕೃತವಾಗಿದ್ದರೆ ಪ್ರಜಾಧಿಪತ್ಯದಲ್ಲಿ ವಿಕೇಂದ್ರೀಕೃತವಾಗಿರುತ್ತದೆ. ಏಕಾಧಿಪತ್ಯಕ್ಕಿಂತ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ವಿಶ್ವಾಸವನ್ನು ವಿಶೇಷವಾಗಿ ಗಳಿಸಬಹುದು. ಸನ್ನಿವೇಶಕ್ಕೆ ತಕ್ಕಂತೆ ಪ್ರಜಾಪ್ರಭುತ್ವ ಹೊಂದಿಕೊಂಡಹಾಗೆ, ನಿರಂಕುಶಾಧಿಕಾರ ಹೊಂದಿಕೊಳ್ಳಲಾರದು. ಒಬ್ಬ ರಾಜನಲ್ಲಿ ಇದ್ದಕ್ಕಿದ್ದಂತೆ ಬದಲಾವಣೆಗಳಾಗುವುದೆಂದರೆ, ಅದು ಅಷ್ಟು ಸುಲಭವ ಮಾತಲ್ಲ. ರಾಜ್ಯಶಾಸ್ತ್ರದ ಪ್ರಗತಿಯಲ್ಲಿ ಏಕಾಧಿಪತ್ಯವು ಪ್ರಥಮ ಘಟ್ಟವಾದರೆ, ಪ್ರಜಾಪ್ರಭುತ್ವವು ಅಂತಿಮ ಘಟ್ಟ. ಪ್ರಜಾಪ್ರಭುತ್ವದಲ್ಲಿ ರಾಜ್ಯದ ಅಧಿನಾಯಕ ಮತ್ತು ಆಡಳಿತ ಪದ್ಧತಿಗಳು ಬದಲಾಗುವ ಹಾಗೆ ಏಕಾಧಿಪತ್ಯದಲ್ಲಿ ಆಗುವುದು ಸಾಧ್ಯವಿಲ್ಲ. ಆದರೆ ಏಕಾಧಿಪತ್ಯದ ನಿರ್ಮಾಣ-ನಿರ್ವಹಣೆ ಪ್ರಜಾಪ್ರಭುತ್ವದ ನಿರ್ಮಾಣ-ನಿರ್ವಹಣೆಗಿಂತ ನೇರ ಮತ್ತು ಸುಲಭ. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕೆ ಆದ್ಯ ಪ್ರಾಶಸ್ತ್ಯವಿದ್ದರೆ, ನಿರಂಕುಶಾಧಿಕಾರದಲ್ಲಿ ನಿಯಮಪಾಲನೆಗೆ ಹೆಚ್ಚು ಗಮನ.

೭. ಪ್ರಜಾಪ್ರಭುತ್ವ

ರಾಷ್ಟ್ರಭದ್ರತೆಗೆ, ಜನತೆಯಲ್ಲಿ ಜವಾಬ್ದಾರಿಗಳ ಹಂಚಿಕೆಯಾಗುವುದೂ, ಆಳುವ ರಾಜ ಅಥವಾ ವ್ಯಕ್ತಿಯು ಚುನಾಯಿತನಾಗುವುದೂ ಅವಶ್ಯಕ ಎಂಬುದು ಮೆಕಿಯಾವೆಲ್ಲಿಯ ಅಭಿಮತ. ಜನತೆಗೆ ತಾವು ಸ್ವತಂತ್ರರು, ಸಮರ್ಥರು ಎಂಬ ಭಾವನೆ ಇರಬೇಕು. ತಾವು ದಾಸ್ಯದಲ್ಲಿ, ನಿರ್ಬಂಧದಲ್ಲಿ, ಅಭದ್ರತೆ-

ಅನ್ಯಾಯಗಳಲ್ಲಿ ಸಿಲುಕಿದ್ದೇವೆ ಎನ್ನಿಸಿದರೆ ಅವರು ದಂಗೆಯೇಳು ತ್ತಾರೆ. ಆದ್ದರಿಂದ ಪ್ರಜಾಪ್ರಭುತ್ವದಲ್ಲಿ ರಾಜನಾದವನು ಮಿತ ದೌರ್ಜನ್ಯ-ಸಭ್ಯಪರಿಪಾಲನೆಗಳಿಂದ ರಾಜ್ಯವಾಳಬೇಕು.

ಜನತೆಯ ತಿಳಿವಳಿಕೆ ಜಟಿಲ ಸಮಸ್ಯೆಗಳಲ್ಲಿ ಕಡಿಮೆಯಾದರೂ, ಸಾಮಾನ್ಯ ವಿಚಾರಗಳಲ್ಲಿ ಅವರ ಅರಿವು ಅತಿಶಯವಾಗಿರುತ್ತದೆ. ಮೆಕಿಯಾವೆಲ್ಲಿಯು ಕಾನೂನುಬದ್ಧ ಪ್ರಭುತ್ವಕ್ಕೆ ಪ್ರಾಶಸ್ತ್ಯ ನೀಡುತ್ತಾನೆ. ರಾಜ್ಯಾಡಳಿತದಲ್ಲಿ ಪ್ರಜೆಗಳ ಪಾತ್ರ ಎಷ್ಟು ಮಹತ್ವಪೂರ್ಣವಾದುದು ಎಂಬುದನ್ನು ಅರಿತು, ಅವರಿಗಾಗಿ ಮಂಡಿಸಿದ ವಿಚಾರಸರಣಿಗಳು ಅವನನ್ನು ಪ್ರಜಾಪ್ರಭುತ್ವವಾದಿ ಎನ್ನುವಂತೆ ಮಾಡಿವೆ. ಪ್ರಜಾಪ್ರಭುತ್ವದ ಬಗ್ಗೆ, ನಮ್ಮ ಇಂದಿನ ಕಲ್ಪನೆಗಳಿಗೂ ಮೆಕಿಯಾವೆಲ್ಲಿಯ ಅಂದಿನ ಕಲ್ಪನೆಗಳಿಗೂ ಮಹದಂತರಗಳು ಕಂಡುಬಂದಾಗ್ಯೂ, ಅನೇಕ ಅಂಶಗಳಲ್ಲಿ ಸಾಮ್ಯವೂ ಕಂಡುಬರುತ್ತದೆ. ಅವನನ್ನು 'ಪ್ರಜಾಪ್ರಭುತ್ವ ವಾದಿ' ಎನ್ನುವುದಕ್ಕಿಂತ 'ಪ್ರಜಾಪ್ರಭುತ್ವ ವಿರೋಧಿಯಲ್ಲ' ಎನ್ನುವುದು ಹೆಚ್ಚು ಸಮಂಜಸವೆನಿಸುತ್ತದೆ.

೮. ರಾಜ ಮತ್ತು ಪ್ರಜೆ

ಮೆಕಿಯಾವೆಲ್ಲಿಯ ಪ್ರಕಾರ ಅಂದಿನ ಸಮಾಜಕ್ಕೆ ಸರ್ವಶಕ್ತ ಶಾಸನಕಾರನ ಅವಶ್ಯಕತೆ ಇತ್ತು. ಆದ್ದರಿಂದ ಸರ್ವಶಕ್ತಶಾಸನ ಕಾರನಿಗೆ ಅದ್ವಿತೀಯ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾನೆ. ಸಮಾಜದಲ್ಲಿ ಅನೈತಿಕತೆ ತಲೆದೋರಿದಾಗ ಅದನ್ನು ಹತ್ತಿಕ್ಕಲು ಸರ್ವಶಕ್ತಶಾಸಕನೊಬ್ಬನಿಗೆ ಮಾತ್ರ ಸಾಧ್ಯ. ಅವನು ಹಳೆಯ ರಾಜ್ಯವನ್ನು ನಿರ್ನಾಮ ಮಾಡಬಲ್ಲ, ಹೊಸ ರಾಜ್ಯಗಳನ್ನು ನಿರ್ಮಿಸಬಲ್ಲ; ಪ್ರಭುತ್ವಪದ್ಧತಿಗಳನ್ನೂ ಜನತೆಯ ಮನೋ

ಧರ್ಮಗಳನ್ನೂ ಉಪಾಯವಾಗಿ ಪರಿವರ್ತಿಸಬಲ್ಲ. ಆದ್ದರಿಂದ ರಾಜ್ಯವ್ಯವಸ್ಥೆಯಲ್ಲಿ ಯಾವುದೇ ಅವ್ಯವಸ್ಥೆಗಳಾಗಲೀ, ದುರ್ಬಲತೆಗಳಾಗಲೀ ಕಂಡುಬಂದಲ್ಲಿ, ಅದಕ್ಕೆ ರಾಜನೇ ಕಾರಣ. ರಾಜನು ದಕ್ಷನೂ, ಸಮರ್ಥನೂ ಆಗಿದ್ದಲ್ಲಿ ಅಂತಹ ರಾಜ್ಯದಲ್ಲಿ ಅವ್ಯವಸ್ಥೆಗಳಿಗಾಗಲೀ, ದುರ್ಬಲತೆಗಳಿಗಾಗಲೀ ಎಡೆಯೇ ಇರುವುದಿಲ್ಲ. ರಾಜನು ಕಾನೂನು ವಿರೋಧಿಯಲ್ಲದಿದ್ದರೂ, ಕಾನೂನು ಬದ್ಧನಲ್ಲ. ಒಮ್ಮೊಮ್ಮೆ ರಾಜ್ಯರಕ್ಷಣೆಗಾಗಿ, ರಾಜ್ಯದ ಪ್ರಗತಿಗಾಗಿ, ಅಧಿಕಾರದ ಉಳಿಕೆಗಾಗಿ ರಾಜನು ಕಾನೂನನ್ನು ಮೀರಬಹುದು. ರಾಜ್ಯದ ಧ್ಯೇಯಸಾಧನೆಗಾಗಿ ರಾಜನು ಕೊಲೆ, ಹಿಂಸೆ ಮೊದಲಾದ ಕಾರ್ಯಗಳನ್ನೆಸಗಿದಲ್ಲಿ ಅವು ನ್ಯಾಯವೇ ಸರಿ ಎಂದದ್ದರಿಂದ ಮೆಕಿಯಾವೆಲ್ಲಿಯು ಅನೇಕರ ವಕ್ರ ದೃಷ್ಟಿಗೆ ಬಲಿಯಾದನು. ಮೆಕಿಯಾವೆಲ್ಲಿಯ ರಾಜನು ಅಂದಿನ ಇಟಲಿಗೆ ಯೋಗ್ಯನಾದ ನಿರಂಕುಶಾಧಿಕಾರದ ರಾಜನ ಪ್ರತೀಕ. ಅದಕ್ಕನುಗುಣವಾಗಿ ಪ್ರಜೆಗಳ ವಿಚಾರವನ್ನೂ ಅವನು ಮಂಡಿಸಿದ್ದಾನೆ.

೯. ಜನಸಾಮಾನ್ಯವರ್ಗ

ಮೆಕಿಯಾವೆಲ್ಲಿಯು ಆಳುವ ವರ್ಗವಾದ ಅಲ್ಪಸಂಖ್ಯಾತರಲ್ಲಿ ತನ್ನ ಗಮನವನ್ನು ಹರಿಸಿದ ಮಾತ್ರಕ್ಕೆ, ಆಳಿಸಿಕೊಳ್ಳುವ ಬಹುಸಂಖ್ಯಾತ ವರ್ಗವನ್ನು ಕಡೆಗಾಣಿಸಿದ ಎಂದು ಭಾವಿಸುವುದು ಸರಿಯಲ್ಲ. ಯಾವ ಆಡಳಿತ ಪದ್ಧತಿಯೇ ಆಗಲಿ ಜನಸಾಮಾನ್ಯ ವರ್ಗವನ್ನು ಏಕಾಏಕಿ ಕಡೆಗಾಣಿಸಲು ಸಾಧ್ಯವಿಲ್ಲ. ಯಾವ ಪ್ರಜೆಯೂ ಸದಾ ಅಜ್ಞಾನಿಯೂ ಅಲ್ಲ, ಮೂರ್ಖನೂ ಅಲ್ಲ. ಪ್ರಜೆಗಳು, ತಮ್ಮ ದೇಶದಲ್ಲಿ ಏನಾಗುತ್ತಿದೆ, ತಾವು ಸರ್ಕಾರದಿಂದ ಏನನ್ನು ಬಯಸುತ್ತೇವೆ ಎಂಬುದನ್ನು ತಿಳಿದಿರುತ್ತಾರೆ. "ಜನ

ಪಾಲಕನಾದ ಪ್ರಭುವಿನ ಆಡಳಿತದಲ್ಲಿ ಪ್ರಜೆಗಳು, ಎಲ್ಲಿಯವರೆಗೆ ತಮ್ಮ ಆಸ್ತಿ, ಅಧಿಕಾರ, ಗೌರವ ಮತ್ತು ಔದಾರ್ಯಗಳಿಗೆ ಧಕ್ಕೆ ಬರುವುದಿಲ್ಲವೋ ಅಲ್ಲಿಯವರೆಗೂ ತೃಪ್ತರಾಗಿಯೇ ಇರುತ್ತಾರೆ ಎಂಬುದನ್ನು ಆಳುವ ವ್ಯಕ್ತಿ ತಿಳಿದು ವರ್ತಿಸಬೇಕು" ಎನ್ನುತ್ತಾನೆ ಮೆಕಿಯಾವೆಲ್ಲಿ. ಹಲವು ಮಂದಿಗೆ ಸ್ವಾತಂತ್ರ್ಯ ಎಂದರೆ ಸಂರಕ್ಷಣೆ, ಭದ್ರತೆಗಳೇ ಎಂಬ ತಿಳಿವಳಿಕೆ ಇರುವುದರಿಂದ, ಅಂತಹ ಜನತೆ ಆಸ್ತಿ ಉಳಿಕೆಗೆ, ಸ್ವಾಭಿಮಾನದ ಪ್ರತಿಪಾದನೆಗೆ ತಕ್ಕಮಟ್ಟಿನ ಭದ್ರತೆಯನ್ನು ಬಯಸುತ್ತದೆ. ಅಲ್ಲದೆ ಶೋಷಣೆಗೆ ಒಳಗಾಗಲು ಸಿದ್ಧರಿರುವುದಿಲ್ಲ. ಆದಕಾರಣ ಸಮರ್ಥ ಸಾರ್ವಭೌಮನು ಈ ಆವಶ್ಯಕತೆಗಳನ್ನು ಮೊದಲು ಪೂರೈಸಿಕೊಡಬೇಕು. ಅಧಿಕಾರಕ್ಕಾಗಿ ಹೋರಾಡುವ ಅಥವಾ ಪಿತೂರಿ ನಡೆಸುವ ಅಲ್ಪ ಸಂಖ್ಯಾತರನ್ನು, ಸಾಧ್ಯವಿದ್ದಲ್ಲಿ, ಇಲ್ಲ ಗೈಯಬೇಕು. ಹಾಗಿಲ್ಲದಿದ್ದಲ್ಲಿ ಅಂಥವರನ್ನು ಎಚ್ಚರಿಕೆಯಿಂದ ಸದಾ ಅಧಿಕಾರದ ಅಂಕುಶದಲ್ಲಿ ಇಟ್ಟಿರಬೇಕು. ಈ ಅಲ್ಪಸಂಖ್ಯಾತರಿಂದ ಇರುವಷ್ಟು ಭಯ ಸಾಮಾನ್ಯ ಜನತೆಯಿಂದ ಇರುವುದಿಲ್ಲ. ಸಾಮಾನ್ಯಜನತೆಯನ್ನು ಸುಲಭವಾಗಿ ಬುಟ್ಟಿಯುಲ್ಲಿ ಹಾಕಿಕೊಳ್ಳಬಹುದು. ಆದರೂ, ಅವರ ಮೇಲೂ ಒಂದು ಎಚ್ಚರಗಣ್ಣಿಟ್ಟರೆ ಯಾವ ಭೀತಿಯ ಪ್ರಸಂಗವೂ ಇರುವುದಿಲ್ಲ.

ತಮಗೆ ಬೇಕಾದುದು ದೊರೆತರೆ ಸರಿ, ಉಳಿದುದರ ಗೋಜು ಜನತೆಗೆ ಬೇಕಿಲ್ಲ. ಯಾವ ಪಕ್ಷಸರ್ಕಾರವೇ ಇರಲಿ, ಯಾವ ಪ್ರಭುತ್ವಪದ್ಧತಿಯೇ ಬರಲಿ ಅವರಿಗೆ ಪ್ರಾಣರಕ್ಷಣೆ, ಆಸ್ತಿಭದ್ರತೆ, ವ್ಯಕ್ತಿಗತ ಸುಖಸೌಖ್ಯಗಳು ಸಿಕ್ಕಿಬಿಟ್ಟರೆ ಸಾಕು, ಯಾವುದಕ್ಕೇ ಆಗಲಿ ತಮ್ಮ ಸಮ್ಮತಿಯನ್ನು ಸದ್ದಿಲ್ಲದೇ ಸಲ್ಲಿಸಿಬಿಡುತ್ತಾರೆ. ಆದುದರಿಂದ ಜನಸಾಮಾನ್ಯರ ಆರ್ಥಿಕ, ಸಾಮಾಜಿಕ ಮತ್ತು

ಮಾನಸಿಕ ತೃಪ್ತಿಗಳನ್ನು ಪೂರೈಸಿಬಿಟ್ಟರೆ, ರಾಜಕೀಯವಾಗಿ ಬೇಡಿಕೆಗಳೇ ಇಲ್ಲದಂತಾಗಿ ರಾಜನು ಮುಕ್ತ ಹಸ್ತನೇ ಆಗಿ ಬಿಡುತ್ತಾನೆ.

ಸಾಮಾನ್ಯವಾಗಿ ಜನಸಾಮಾನ್ಯರನ್ನು "ಅರಾಜಕೀಯ ಜನ" ರೆಂದು ಕರೆಯಬಹುದು. ಕಾರಣ, ರಾಜಕೀಯ ಜಗತ್ತಿನ ನಿತ್ಯ ಸತ್ಯದರ್ಶನವಾಗಬೇಕಾದರೆ. ಅದಕ್ಕೆ ಬೇಕಾಗುವ ಶಿಸ್ತು, ಸಂಯಮ, ಸಾಹಸಸಾಧನೆಗಳು ಸಾಮಾನ್ಯವೇನಲ್ಲ. ಕೆಲವೇ ಮಂದಿ ಈ ಅಗ್ನಿಕುಂಡಕ್ಕೆ ಧುಮುಕುತ್ತಾರೆ. ಉಳಿದ ಸಾಮಾನ್ಯ ಜನತೆ ಹೇಗೋ ಇದ್ದುಕೊಂಡು ತಮ್ಮ ಬಾಳಕತೆಯನ್ನು ಮುಗಿಸುವು ದರಲ್ಲಿರುತ್ತಾರೆ. ಅವರು ಈ ಅಗ್ನಿಪರೀಕ್ಷೆಗೆ ಪ್ರವೇಶಿಸುವ ಸಾಹಸಕ್ಕಾಗಲೀ, ರಾಜಕೀಯಸರ್ಪವನ್ನು ಕೆಣಕಿ ನಾಗನೃತ್ಯವನ್ನು ನೋಡಲೆಳಸುವ ಸಾಹಸಕ್ಕಾಗಲೀ ಹೋಗುವುದೇ ಇಲ್ಲ. ಇಷ್ಟಕ್ಕೂ ಆ ಬಗ್ಗೆ ವಿಚಾರಮನೋಭಾವ, ಕುತೂಹಲಾಸಕ್ತಿ, ಶಕ್ತಿ ಸಾಮರ್ಥ್ಯ, ವೇಳೆವ್ಯವಧಾನಗಳು ಸಾಮಾನ್ಯ ಜನತೆಗೆ ಸಾಮಾನ್ಯವಾಗಿ ಇರುವುದಿಲ್ಲ. ಅವರು ರಾಜಕೀಯದ ಬಗ್ಗೆ ಸಾಮಾನ್ಯವಾಗಿ ಉದಾಸೀನರಾಗಿರುತ್ತಾರೆ.

ಒಟ್ಟಿನಲ್ಲಿ, ರಾಜನು ಜನರ ಸ್ಥಾನದಲ್ಲಿ ನಿಂತು ಅವರ ಆವಶ್ಯಕತೆ ಗಳನ್ನು ಪೂರೈಸಿ, ತನ್ನ ಸ್ಥಾನದಲ್ಲಿ ನಿಂತು ಅಧಿಕಾರ ಚಲಾಯಿಸ ಬೇಕು. ಇತ್ತ ರಾಜನಿಗೆ ಸುಲಭ. ಅತ್ತ ಪ್ರಜೆಗೆ ಸೌಖ್ಯ ಇರುವಂತೆ ಆಡಳಿತ ಸಾಗಬೇಕು.

ಪ್ಲೇಟೋವಿನಿಂದ ಹಿಡಿದು ಮೆಕಿಯಾವೆಲ್ಲಿಯವರೆಗೆ ಎಲ್ಲ ತಾತ್ವಿಕರೂ, ಅಧಿಕಾರವನ್ನು ವೈಚಾರಿಕವಾಗಿ ಬಳಸಬೇಕೆಂದಿದ್ದಾರೆ. ಮೆಕಿಯಾವೆಲ್ಲಿಯ ಪ್ರಕಾರ, ಎಲ್ಲಿ ಜನರು ವಿಚಾರಿಗಳಾಗಿರುವು ದಿಲ್ಲವೋ ಅಲ್ಲಿ ಆಳುವವರು ವಿಚಾರಿಗಳಾಗಿರಬೇಕು. ಹಾಗೆಂದ

ಮಾತ್ರಕ್ಕೆ ಸಾರ್ವಭೌಮರು, ಸಕಲ ಸ್ವರೂಪಗಳ, ಸ್ವಾಭಾವಿಕ ಸಿದ್ಧಾಂತಗಳ ಬಗ್ಗೆ ಸದಾ ಸ್ವಯಂಸಿದ್ಧರಿರುತ್ತಾರೆ ಎಂದೇನೂ ಅಲ್ಲ. ಆದರೆ ಗುರುತರ ಜವಾಬ್ದಾರಿ, ಸ್ಥಾನದ ಹಿರಿಮೆ, ಅವಶ್ಯಕತೆಗಳ ಪರಿಜ್ಞಾನ, ಇವುಗಳಿಂದ ಆಳುವವರು ಆಳಿಸಿ ಕೊಳ್ಳುವವರಿಗಿಂತ ಹೆಚ್ಚಿಗೆ ತಿಳಿದವರಾಗಿರುತ್ತಾರೆ. ಜನರು ಅನೈಜ ಕಲ್ಪನೆಗಳಿಗೆ, ಕ್ಷಣಿಕ ಅಭಿಪ್ರಾಯಗಳಿಗೆ ಬಲಿಯಾಗುವವರೂ, ಪ್ರಭಾವಗಳ ಮಿಡಿತಕ್ಕೆ ತಕ್ಕಂತೆ ಮಿಡುಕಾಡುವವರೂ ಆಗಿರು ತ್ತಾರೆ. ತಮಗೇನುಬೇಕು ಎಂಬುವನ್ನು ತಿಳಿದಿರುತ್ತಾರೆಯೋ ವಿನಾ, ಬೇಕಾದುದನ್ನು ಹೇಗೆ ಪಡೆಯಬೇಕು ಎಂಬುದನ್ನು ತಿಳಿಯದವರಾಗಿರುತ್ತಾರೆ. ಆದ್ದರಿಂದ ಅವರು, ತಮ್ಮ ವೈಚಾರಿಕ ನೀತಿನಿರೂಪಣೆಗಳಿಗೆ ತಕ್ಕಂತೆ ಅಭೀಷ್ಟಗಳನ್ನು ಸಿದ್ಧಿಗೊಳಿಸುವ 'ಸಿದ್ಧಿವಿನಾಯಕಪ್ರಭು'ವನ್ನು ನಂಬಬೇಕಾಗುತ್ತದೆ.

ಜನರನ್ನು ಬಂಧಿತ ವನ್ಯಮೃಗಗಳಿಗೆ ಹೋಲಿಸಬಹುದು. ಬಂಧನ ಮತ್ತು ದಾಸ್ಯದಲ್ಲಿ ಬಹುಕಾಲ ಜೀವ ಸವೆಸಿದ ಪ್ರಾಣಿ, ಪಂಜರ ದಿಂದ ಬಿಡುಗಡೆಮಾಡಿ ಹೊರಗಟ್ಟಿದಾಗ, ನೆಲೆಹುಡುಕಿಕೊಳ್ಳಲು, ಆಹಾರವನ್ನು ಗಳಿಸಿಕೊಳ್ಳಲು ಅರಿಯದೆ ಕಂಗಾಲಾಗಿ, ಶಕ್ತಿಗುಂದಿ ಮತ್ತೆ ಸುಲಭವಾಗಿ ಸರಪಳಿಗೆ ಶರಣಾಗುವಂತೆ, ಸ್ವತಂತ್ರರಾದ ಜನರೂ ಕೂಡ, ಸರಿಯಾದ ಶಾಸಕನಿಲ್ಲದೆ ತಮ್ಮನ್ನು ತಾವು ಆಳಿಕೊಳ್ಳಲಾಗದೆ ಬಹುಬೇಗ ಅಧಿಕಾರದ ನೊಗಕ್ಕೆ ಜೋತು ಬೀಳುತ್ತಾರೆ. ಆದ್ದರಿಂದ ಬಹುಸಂಖ್ಯಾತರ ಆಳ್ವಿಕೆಯು ಪರಿಣಾಮ ಕಾರಿಯಾಗಿ, ಸುಭದ್ರವಾಗಿ ಇರಬೇಕಾದರೆ, ಕಾಲ ಮಾಗಿರಬೇಕು; ಅನುಭವ ಹಣ್ಣಾಗಿರಬೇಕು. ಸಶಕ್ತನಾಯಕನಿಲ್ಲದ ಜನ ತಮ್ಮನ್ನು ತಾವೇ ಆಳಿಕೊಳ್ಳಲೆತ್ನಿಸಿದರೆ, ರಾಷ್ಟ್ರವು ಚುಕ್ಕಾಣಿ ಮುರಿದ ಹಡಗಿನಂತಾಗಿ ದಡಕ್ಕೆ ಬಡಿದು ಅಪ್ಪಳಿಸಿ ಚೂರುಚೂರಾಗಲು

ಕ್ರಾಂತಿಯೆಂಬ ಬಿರುಗಾಳಿಯ ಆವಶ್ಯಕತೆಯೇ ಇರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಚುಕ್ಕಾಣಿ ಹಾಕಿ ಹಡಗಿನ ಚಕ್ರಹಿಡಿದು ಅಪಾಯದಿಂದ ಪಾರುಮಾಡಬಲ್ಲ ನಾಯಕನೊಬ್ಬ ಕೂಡಲೇ ಬೇಕಾಗುತ್ತದೆ. ಅಂತಹ ನಾಯಕನು ಅಧಿಕಾರಕ್ಕೆ ಬಂದರೆ ರಾಜಕೀಯ ಅಸ್ತಿತ್ವದ ಹಡಗು ಉಳಿದೀತು. ಅಲ್ಲದೆ ಪ್ರಗತಿಯ ಚೇತನ, ಭೌತಿಕಾಭಿವೃದ್ಧಿಗಳಿಂದ ಸುಭದ್ರತೆ ಉಂಟಾದೀತು.

ಅದೆಷ್ಟು ಪ್ರಜಾಪ್ರಭುತ್ವಗಳು ಬಂದುಹೋದರೂ, ಸ್ವಾಯತ್ತ ಜನತಾ ಸರ್ಕಾರ ಅಸಾಧ್ಯ ಎನ್ನುವುದಕ್ಕೆ ಇನ್ನೊಂದು ನಿದರ್ಶನವೆಂದರೆ, ಸೆರೆಮನೆಯ ಅಧಿಕಾರಿ ಮತ್ತು ಖೈದಿಗಳ ಉಪಮೆ: ರಾಜ ಮತ್ತು ಪ್ರಜೆಗಳನ್ನು ಸೆರೆಮನೆಯ ಅಧಿಕಾರಿಗೆ ಮತ್ತು ಖೈದಿಗಳಿಗೆ ಹೋಲಿಸಬಹುದು. ಸೆರೆಮನೆಯ ಅಧಿಕಾರಿಗೆ ಕ್ರಿಯಾಸ್ವಾತಂತ್ರ್ಯಕ್ಕಿಂತ ಕರ್ತವ್ಯಗಳೇ ಹೆಚ್ಚು. ಅತ ಆಡಳಿತದ ಜೊತೆಗೆ ದಿನಂಪ್ರತಿ ಖೈದಿಗಳಿಗೆ ಅನ್ನಾಹಾರಾದಿಗಳನ್ನು ಸರಿಯಾಗಿ ಒದಗಿಸಬೇಕು. ಅಲ್ಲದೆ ಅವರಿಗೆ ಯೋಗ್ಯವಾದ ದುಡಿಮೆ ಮತ್ತು ರಂಜನೆಗಳಿಗೆ ಅವಕಾಶಮಾಡಿಕೊಡಬೇಕು ಮತ್ತು ಶಿಸ್ತು ನೀತಿಗಳ ಬಗೆಗೆ ಸ್ವಲ್ಪ ಸ್ವತಂತ್ರತೆಯನ್ನೂ ಕರುಣಿಸಬೇಕು. ಆಗ ಅವರೆಲ್ಲರೂ ತೃಪ್ತರೂ, ವಿಧೇಯರೂ ಆಗಿರುತ್ತಾರೆ. ಹಾಗಿಲ್ಲದೆ, ತದ್ವಿರುದ್ಧವಾದಲ್ಲಿ ಖೈದಿಗಳಿಂದ ಉಪವಾಸಮುಷ್ಕರ, ಅಸಹಕಾರ, ಒತ್ತಾಯ, ಇಲ್ಲವೇ ಧಾಳಿಮಾಡಿ ಸೆರೆಮನೆಯ ಅಧಿಕಾರಿಯ ಕಥೆಯ ಸಮಾಪ್ತಿ–ಏನುಬೇಕಾದರೂ ಸಂಭವಿಸಬಹುದು. ಖೈದಿಗಳು ಎದುರುಬಿದ್ದಾಗ ಅಧಿಕಾರಿಯು ಬಾಳುವುದು ಎಷ್ಟು ದುಸ್ತರವೋ, ಅಷ್ಟೇ ಪ್ರಜಾತಂತ್ರದಲ್ಲಿ ಪ್ರಜೆಗಳು ಎದುರು ಬಿದ್ದಾಗ !

ಪ್ರಜಾಪ್ರಭುತ್ವದಲ್ಲಿ ಅಧಿಕಾರಸ್ಥಾನದಲ್ಲಿ ವ್ಯಕ್ತಿಗಳು ಬದಲಾದರೆ, ಜನರು ತಾವು ಕೊಟ್ಟ ಅಧಿಕಾರವನ್ನು ಮತ್ತೆ ಕಸಿದು

ಕೊಂಡರು ಎಂಬುದು ಅದರ ಅರ್ಥವಲ್ಲ, ಜನರು, ಬದಲಾವಣೆಗೆ ತಕ್ಕಂತೆ ನವಮನ್ವಂತರದ ನಾಯಕನನ್ನು ಅರಿಸಲು ತೊಡಗಿದ್ದಾರೆ, ಇಲ್ಲವೇ ಹೊಸಕಾಲಕ್ಕೆ ತಕ್ಕಂತೆ, ಇರುವ ವ್ಯಕ್ತಿ ಬದಲಾಗುವ ಕಾಲ ಸನ್ನಿಹಿತವಾಗಿದೆ ಎಂದರ್ಥ.

ಪ್ರಜಾಪ್ರಭುತ್ವ ಮತ್ತು ಅಲ್ಪಜನರಾಳ್ವಿಕೆಗಳು ಒಂದೇ ಕುಡಿಯ ಎರಡು ಹೂವುಗಳು. ಆಡಳಿತ ರಂಗದಲ್ಲಿ ಜನಸಾಮಾನ್ಯನೊಬ್ಬನೇ ಎಂದೂ ಇತಿಹಾಸವನ್ನು ನಿರ್ಮಿಸಿಲ್ಲ. ಅನುಯಾಯಿಯಾಗಿಯೇ ಸಾಮೂಹಿಕವಾಗಿ ಜೀವನವನ್ನು ಕಳೆದಿದ್ದಾನೆ. ಎಲ್ಲ ರಾಜಕೀಯ ಧ್ಯೇಯ ನೀತಿಗಳೂ ಅವನಿಗಾಗಿ ರೂಪಗೊಂಡಿವೆ. ಆದರೆ, ಅವು ಗಳನ್ನು ಅವನು ನಿರ್ಮಿಸಿಲ್ಲ. ಅಧಿಕಾರ–ಸರ್ಕಾರಗಳಿಗಾಗಿ ಶಕ್ತಿ ವಂತ–ಯುಕ್ತಿವಂತ ಜನವರ್ಗಗಳ ಕಾದಾಟದ ಒಬ್ಬ ಮೂಕ ಪ್ರೇಕ್ಷಕನಾಗಿದ್ದಾನೆ. ಹೆಚ್ಚೆಂದರೆ, ಇತರರು ಬಳಸಿಕೊಳ್ಳಲು ಪ್ರಬಲಸಾಧನವಾಗಿದ್ದಾನೆ ಅಷ್ಟೆ.

ಬಹುಜನರಾಳ್ವಿಕೆಯಲ್ಲಿ ಆಡಳಿತ ಬದಲಾವಣೆಯಾದಾಗ ಹಳೆಯದಕ್ಕಿಂತ ಹೊಸದಾಗಿ ಮೂಲಭೂತ ಬದಲಾವಣೆ ಗಳಾವುವೂ ಆಗಿರುವುದಿಲ್ಲ. ಅಧಿಕಾರದ ಶಿಖರದಲ್ಲಿರುವ ಪ್ರಮುಖರು ಮಾತ್ರ ಬದಲಿಸಿರುತ್ತಾರಷ್ಟೆ. ಅಲ್ಪಜನರಾಳ್ವಿಕೆಯ ದೇವಾಲಯದ ಪ್ರಾಕಾರ ಹಾಗೆಯೇ ಇರುತ್ತದೆ. ಪ್ರಜಾಪ್ರಭುತ್ವ ವಾದಿಗಳು ಯಶಸ್ವಿಗಳಾಗಬಹುದು. ಆದರೆ ಪ್ರಜಾಪ್ರಭುತ್ವ ಯಶಸ್ವಿಯಾಗಲಾರದು. ಇತ್ತ ಕಡೆ ವಿಜಯದ ಕಹಳೆ ಮೊಳಗುತ್ತಿರು ವಾಗಲೇ, ಅತ್ತ ಕಡೆ ವಿಫಲದ ಯಾತ್ರೆ ಸಾಗಿರುತ್ತದೆ. ಪ್ರಜಾ ಪ್ರಭುತ್ವ, ಏನಿದ್ದರೂ ಪಠಿಸಲು ಯೋಗ್ಯತಾರಕನಾಮ. ಅಷ್ಟಲ್ಲದೆ ಅಳವಡಿಸಿಕೊಳ್ಳಲು, ಹಾಗು ಅಭ್ಯಸಿಸಲು ಯೋಗ್ಯವಲ್ಲ. ತನ್ನ ಆಡಳಿತ ಚಕ್ರದ ಶಿಖರದಲ್ಲಿ ಗುಣ ಸತ್ವವರ್ಗದ ವ್ಯಕ್ತಿ ಆವರ್ತನ

ಹೊಂದಿದಂತೆಲ್ಲಾ ಸಾಮಾನ್ಯಜನತೆ ತನ್ನ ಭೌತಿಕ, ಪಾರಮಾರ್ಥಿಕ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು. ಅಲ್ಲದೆ, ಬದಲಿಸಿ ಕೊಳ್ಳಬಹುದು.

ಪ್ರಜಾಪ್ರಭುತ್ವದಲ್ಲಿ ಸ್ವಾತಂತ್ರ್ಯ, ಮತಸಹಿಷ್ಣುತೆ, ಆರ್ಥಿಕಾಭಿವೃದ್ಧಿ, ತಾಂತ್ರಿಕಪ್ರಗತಿ–ಈ ವಿಚಾರಗಳು ಅಗ್ಗದ ಮಾತುಗಳಲ್ಲ. ವಿನಾಕಾರಣ, ಸ್ವಾರ್ಥಲಾಲಸೆಯಿಂದ ಪದೇ ಪದೇ ಪ್ರಜಾಪ್ರಭುತ್ವಕ್ಕೆ ಈ ಉತ್ತಮ ಜೀವನದ ಸಂಕೇತಗಳನ್ನು ಸಮನ್ವಯಗೊಳಿಸಿ, ಅಧಿಕಾರದ ಸತ್ಯಸ್ವರೂಪವನ್ನು ಕಾಣಲಾರದ ಅಂಧರನ್ನು ಈ ಆಲಂಕಾರಿಕ ಇಂಪಿನ ಶಬ್ದಗಳಗಾನದಿಂದ ಶೋಷಣೆಗೆ ಒಳಗು ಮಾಡಬಾರದು. ಪ್ರಜಾಡಳಿತದಲ್ಲಿ ರಾಜ ಮತ್ತು ಪ್ರಜೆ ಇಬ್ಬರ ದೃಷ್ಟಿಯಲ್ಲಿ ಜನಸಾಮಾನ್ಯರ ಪಾತ್ರ ಬಹುಗಣ್ಯವಾದುದು. ಅಧಿಕಾರದ ಪ್ರಯೋಗ, ಪರಿಣಾಮಗಳ ಪರ್ಯವಸಾನ ಇರುವುದು ಜನಸಾಮಾನ್ಯರಲ್ಲೇ. ಸಮರ್ಥ ಹಾಗೂ ದಕ್ಷ ಆಡಳಿತಕ್ಕೆ ಜನಸಾಮಾನ್ಯರೇ ಸಾಕ್ಷಿ. ಆಳುವವರು ಆದರ್ಶಗಳನ್ನು ಎಷ್ಟರ ಮಟ್ಟಿಗೆ ಸಾಧಿಸಿದ್ದಾರೆ ಎಂಬುದನ್ನು ತೋರಿಸತಕ್ಕವರೂ ಜನಸಾಮಾನ್ಯರೇ. ನಿರಂಕುಶಾಧಿಕಾರದಂಥ ಅಧಿಕಾರಷಾಹಿಯಲ್ಲಿ ಸಿಕ್ಕಿ ತೊಳಲಾಡುವ ಜನರೂ ಅವರೇ, ಎಚ್ಚೆತ್ತಾಗ ಕ್ರಾಂತಿಕಹಳೆಯನ್ನೂದಿ ಜಾಗೃತರಾಗಿ ಅಧಿಕಾರದ ಅನ್ಯಾಯ, ದರ್ಪ, ಹಿಂಸೆಗಳನ್ನು ದಮನಗೊಳಿಸುವ ವೀರಭದ್ರರೂ ಅವರೇ. ಆದ್ದರಿಂದ ಯಾವುದೇ ಬಗೆಯ ಆಡಳಿತಷಾಹಿ ಬಂದರೂ ಜನಸಾಮಾನ್ಯರ ಬೇಡಿಕೆಗಳನ್ನು ತಿರಸ್ಕರಿಸಬಾರದು. ಹಾಗೆ ತಿರಸ್ಕರಿಸಿದಲ್ಲಿ ಯಾವ ರಾಜನೇ ಆಗಲಿ, ಯಾವ ಆಡಳಿತ ವರ್ಗವೇ ಆಗಲಿ, ಬಹುಕಾಲ ಅಧಿಕಾರದ ಸಿಂಹಾಸನದಲ್ಲಿ ವಿರಾಜಿಸಲಾರದು ಮತ್ತು ರಾಜ್ಯವನ್ನು ಸುಸೂತ್ರವಾಗಿ ಆಳಲಾರದು.

೧೦. ವಾಸ್ತವಿಕ ವಾದ

ವಾಸ್ತವಿಕವಲ್ಲಿ ವ್ಯಾವಹಾರಿಕವಾಗಿ ರಾಜಕಾರಣವನ್ನು ಬಳಸಲು ದಿಟ್ಟತನದಿಂದ ಸಾರಿದ ಪ್ರಥಮ ವೀರನೆಂದರೆ, ಮೆಕಿಯಾವೆಲ್ಲಿ ಮಹಾಶಯ. ಪ್ಲೇಟೋ, ಅರಿಸ್ಟಾಟಲ್, ಸೈಂಟ್ ಆಗಸ್ಟೈನ್ ಮತ್ತು ಥಾಮಸರು ರಾಜಕೀಯ ಸಂಸ್ಥೆ ಮತ್ತು ವರ್ತನೆಗಳನ್ನು ಪ್ರತಿಪಾದಿಸಿದರೂ, ಅವರು ಸಾಕಷ್ಟು ನಿರ್ದಿಷ್ಟವಾಗಿ ತಮ್ಮದೇ ಆದ ರೂಢಮೂಲ ಭಾವನೆಗಳನ್ನು ಹೊಂದಿದ್ದ ಕಾರಣ ಅವರ ತತ್ವಗಳಲ್ಲಿ ವಾಸ್ತವಿಕತೆ ಮತ್ತು ಆದರ್ಶಗಳ ಕಲಸುಮೇಲೋಗರ ಕಂಡುಬರುತ್ತದೆ.

ರಾಜಕೀಯಶಾಸ್ತ್ರವು ವಿಜ್ಞಾನವಾಗಬೇಕಾದರೆ ವಾಸ್ತವಿಕ ವಾದವು ಆ ದಿಶೆಯಲ್ಲಿ ಪ್ರಥಮ ಹೆಜ್ಜೆಯಾಗಿದೆ. ಈ ವಾಸ್ತವಿಕ ವಾದದ ಉಗಮವನ್ನು ಸಾಕ್ರಟೀಸನ ಮಿತ್ರ ಥ್ರಾಸಿ ಮ್ಯಾಕ್ಯೂಸಿನಲ್ಲಿ ಕಾಣಬಹುದು. ನಂತರ ಇದರ ಬೆಳವಣಿಗೆಗೆ ಅರಿಸ್ಟಾಟಲ್ ಕಾರಣನಾದನು. ಅರಿಸ್ಟಾಟಲನು ಮಾನವನನ್ನು ಸಾಮಾಜಿಕ ಜೀವಿ ಮತ್ತು ಸಂಭಾಷಣಜೀವಿ ಎಂದು ಕರೆದನು. ವಾಸ್ತವಿಕ ವಾದದ ರಾಜಕೀಯ ಅಧ್ಯಯನಕಾರರು ತಮ್ಮೆಲ್ಲ ಗಮನವನ್ನೂ ಜನರ ವರ್ತನೆಯ ಮೇಲೆ ಕೇಂದ್ರೀಕರಿಸಬೇಕೇ ವಿನಾ ವಾರ್ತೆಯ ಮೇಲಲ್ಲ. ಜನ ನುಡಿಯಲ್ಲಿ ಅತ್ಯುನ್ನತರಂತೆ ಕಂಡುಬಂದರೂ ವ್ಯಾವಹಾರಿಕವಾಗಿ ನಡೆಯಲ್ಲಿ ಅದೇ ರೀತಿ ಇರುವುದಿಲ್ಲ. ಜನರ ನಡೆ ನುಡಿ ಅಜ ಗಜಾಂತರ. ಪರಿಣಾಮವಾಗಿ ಜನರ ಮಾತು ಕತೆಗಳು, ಸಲಹೆ ಸೂಚನೆಗಳು ವಾಸ್ತವಿಕದಲ್ಲಿ ನಿಷ್ಪ್ರಯೋಜಕವೆನಿಸಿಕೊಳ್ಳುತ್ತವೆ. ಆದಕಾರಣ ಆಚರಣೆಯಲ್ಲಿರುವ ವಿಧಾನಗಳನ್ನು ಯಥಾರ್ಥವಾಗಿ ವೀಕ್ಷಿಸುವುದು ಒಳಿತು.

ರಾಜನಾದವನು ರಾಜಕೀಯದಲ್ಲಿ ಜನತೆಯ ಪಾತ್ರವೇ

ನೆಂಬುದನ್ನು ಅರಿಯಬೇಕು. ಅವರು ತನ್ನ ಸೂತ್ರಧಾರಿತನಕ್ಕೆ ತಕ್ಕ ಪಾತ್ರಧಾರಿಗಳಾಗುವ ಹಾಗೆ, ತನ್ನ ಆಸೆ ಆಕಾಂಕ್ಷೆಗಳ ಭಾವ ಭಂಗಿಗಳಿಗೆ ತಕ್ಕಂತೆ ಮಣಿದು ಕುಣಿಯುವಹಾಗೆ ಮಾಡಿಕೊಳ್ಳ ಬೇಕು. ಜನತೆಯ ಮೇಲಿನ ಅಧಿಕಾರವೇ ರಾಜ್ಯಶಾಸ್ತ್ರದ ಸಾರಸರ್ವಸ್ವ ಮತ್ತು ವಾಸ್ತವಿಕತೆಯನ್ನು ತಿಳಿಯುವಲ್ಲಿ ಹಾಗೂ ತಿಳಿಸುವಲ್ಲಿ ವೈಯುಕ್ತಿಕ ಆಯ್ಕೆ ಅಭಿರುಚಿಗಳ ಅಕ್ರಮ ಪ್ರವೇಶಕ್ಕೆ ಅವಕಾಶ ಕೊಡಬಾರದು. ಹಾಗೆ ಅವಕಾಶ ಕೊಟ್ಟಲ್ಲಿ ಇರುವು ದನ್ನು ತಿಳಿಸುವುದಕ್ಕಿಂತ ಹೆಚ್ಚಾಗಿ ತಾನು ತೀರ್ಮಾನಿಸಿದ್ದನ್ನು ಸಾರುವವನಾಗುತ್ತಾನೆ. ವಾಸ್ತವಿಕವಾದಿ ತಾಟಸ್ಥ್ಯ ಪಂಥಕಾರ, ಅವನಿಗೆ ಸಾಧ್ಯವಿದ್ದೆಡೆಗಳಲ್ಲೆಲ್ಲಾ ನಿಷ್ಪಕ್ಷಪಾತಿಯಾಗಿದ್ದರೆ, ತನ್ನ ಬಿಮ್ಮುಗಳ ಬಗ್ಗೆ ಪ್ರಜ್ಞಾಶಾಲಿಯಾಗಿ ವೈಜ್ಞಾನಿಕ ಶಿಸ್ತು ಸಂಯಮಗಳನ್ನು ಪಡೆದರೆ ರಾಜಕೀಯ ಅಧ್ಯಯನದಲ್ಲಿ ಜನತಾ ಪ್ರಗತಿಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಆಗ ಅವನನ್ನು ಎಲೆಕ್ಟ್ರಾನುಗಳ ಪಥಾನ್ವೇಷಣೆಗೈಯುವ ಭೌತವಿಜ್ಞಾ ನಿಗೂ, ದ್ವೇಷ, ಪ್ರೀತಿ ಇತ್ಯಾದಿ ರಾಗಭಾವಗಳಿಲ್ಲದೆ ನಿರ್ಲಿಪ್ತತೆ ಯಿಂದ ಅಮೀಬಾ ಅಧ್ಯಯನ ಮಾಡುವ ಜೀವ ವಿಜ್ಞಾನಿಗೂ ಸರಿದೂಗಲೆತ್ನಿಸಬಹುದು. ವಾಸ್ತವಿಕವಾದಿಯು ಸ್ವಂತ ಜೀವನ ಕ್ಕಿಂತ ಸುತ್ತಮುತ್ತಲಿನ ಜನಜೀವನವನ್ನು ಚೆನ್ನಾಗಿ ತಿಳಿಯಲು ಸಾಧ್ಯವಿದೆ. ಕೀಟಶಾಸ್ತ್ರಜ್ಞನು ತನಗಿಂತ ಇರುವೆಗಳ ವಿಚಾರದಲ್ಲಿ ನಿಸ್ಸೀಮನಾಗಿರುವಂತೆ ಈ ಪಾಠವನ್ನು ಯಾವ ವಾಸ್ತವಿಕವಾದಿ ಯೂ ಮರೆಯುವಹಾಗಿಲ್ಲ.

೧೧. ಆನುವಂಶಿಕ ವರ್ಗ

ಮೆಕಿಯಾವೆಲ್ಲಿಯ ತತ್ವಸಿದ್ಧಾಂತಗಳ ಆಳವಾದ ಪರಿಚಯ ಪಡೆಯಬೇಕಾದರೆ. ಮೂರು ವರ್ಗಗಳ ವಿಶ್ಲೇಷಣೆ ಅತ್ಯಂತ

ಮುಖ್ಯವಾಗಿದೆ. ಈ ಮೂರು ವರ್ಗಗಳ ಪೈಕಿ ಜನಸಾಮಾನ್ಯ ವರ್ಗದ ವಿಚಾರವನ್ನು ಈಗಾಗಲೇ ತಿಳಿಸಲಾಗಿದೆ. ಇನ್ನುಳಿದ ಎರಡು ವರ್ಗಗಳೆಂದರೆ, ಆನುವಂಶಿಕವರ್ಗ ಮತ್ತು ಗುಣಸತ್ವ ವರ್ಗ. ಈ ಎರಡು ವರ್ಗಗಳೂ ಸಾಮಾನ್ಯವಾಗಿ ಆಳುವ ವರ್ಗಕ್ಕೇ ಸೇರಿದುವು. ಇವೆರಡರ ಅಧಿಕಾರ ಬಳಕೆ–ಗಳಿಕೆಗಳ ವಿಚಾರಗಳಲ್ಲಿ ಬೇರೆ ಬೇರೆ ವಿಧಾನಗಳಿವೆ, ಆದಕಾರಣ ಈ ವರ್ಗ ಗಳನ್ನು ಒಂದೊಂದನ್ನಾಗಿ ಪರಿಶೀಲಿಸೋಣ.

ಆನುವಂಶಿಕವರ್ಗಕ್ಕೆ ಸಾಮಾಜಿಕ ಹಾಗೂ ಮನೋವೈಜ್ಞಾನಿಕ ಹಿನ್ನೆಲೆ ಇದೆ. ಈ ವರ್ಗದ ಆನುವಂಶಿಕತೆಯಲ್ಲಿ ಒಂದು ಅನ್ಯವಾದುದು, ಇನ್ನೊಂದು ಜನ್ಯವಾದುದು; ಒಂದು ನಿರ್ದಿಷ್ಟ ಶಿಕ್ಷಣ ಸೌಲಭ್ಯಗಳ ಕಾರಣ, ಮತ್ತೊಂದು ವಂಶಪಾರಂಪರ್ಯ ಗುಣಗಳ ಕಾರಣ, ಹಲವಾರು ಜನ್ಯಗುಣಗಳು ಈ ವರ್ಗದಲ್ಲಿ ಪರಂಪರಾಗತವಾಗಿ ಬರುತ್ತವೆ. ಹಲವಾರು ಅನ್ಯ ಗುಣಗಳು ಈ ವರ್ಗದವರ ಸ್ಥಾನಮಾನ, ಅಧಿಕಾರ ಪದವಿಗಳ ಕಾರಣ ಸಹಜವಾಗಿ ಬರುತ್ತವೆ.

ಕೇವಲ ಜನ್ಮಕಾರಣದಿಂದ ಈ ವರ್ಗದವರು ಅಧಿಕಾರದ ಪಟ್ಟವನ್ನೇರುತ್ತಾರೆ. ಸಾಮಾನ್ಯ ಜನತೆಯ ಜೀವನಕ್ಕೆ ಭಿನ್ನ ವಾದ ವಿಶೇಷ ಶಿಕ್ಷಣವನ್ನು ಹೊಂದುತ್ತಾರೆ. ಅವರ ಶಿಕ್ಷಣವೆಲ್ಲಾ ಆಳುವವರು ಕಲಿತಿರಬೇಕಾದ ವಿಚಾರಗಳಿಂದ ಕೂಡಿರುತ್ತದೆ. ಈ ಶಿಕ್ಷಣದಿಂದ ಅವರಲ್ಲಿ ತಾವು ಆಳುವ ಜನರೆಂಬ ಭಾವನೆ ದೃಢವಾಗಿ ಬೆಳೆದು ಹಾಗೆಯೇ ವರ್ತಿಸತೊಡಗುತ್ತಾರೆ. ಹೀಗೆ ಶಿಕ್ಷಿತರಾದವರು ಆಳಲು ಅಧಿಕಾರಾರೂಢರಾಗಲು ಅಧಿಕಾರ ಮತ್ತು ಸಂಪತ್ತು ಬೇಕು. ಆನುವಂಶಿಕ ಆಸ್ತಿಯ ಹಕ್ಕುದಾರಿಕೆ ಯಿಂದ ಮತ್ತು ಆಳಿದ ವ್ಯಕ್ತಿ ಅವರವರೇ ಆದ್ದರಿಂದ ಅಧಿಕಾರ

ಸಿಗುತ್ತದೆ. ಪಿತ್ರಾರ್ಜಿತ ಸಂಪತ್ತೂ ಸಿಗುತ್ತದೆ. ಇತರ ಯಾವ ಸಾಧನಗಳೂ ದೊರಕಿಸಿಕೊಡಲಾರದ ಸಾಮಾಜಿಕ ಘನತೆಯನ್ನು ಈ ಸಂಪತ್ತು ತಂದುಕೊಡುತ್ತದೆ. ಈ ಸ್ಥಾನಮಾನಗಳೂ ಬಿರುದುಬಾವಲಿಗಳೂ ಸಂಪತ್ತೂ ಅಧಿಕಾರಗಳೂ ಆನುವಂಶಿಕ ವ್ಯಕ್ತಿಯನ್ನು ಸುಲಭವಾಗಿ ಅಧಿಕಾರಪೀಠಕ್ಕೇರಿಸುತ್ತವೆ.

ಆನುವಂಶಿಕ ವರ್ಗದಲ್ಲಿ ಪ್ರತಿಯೊಬ್ಬರೂ ದಕ್ಷರೂ, ಸಮರ್ಥರೂ ಆಗಿರುತ್ತಾರೆಂದೇನೂ ಅಲ್ಲ. ಆದರೆ ಸಾಮಾನ್ಯವಾಗಿ ಆ ಗುಣಗಳನ್ನು ಹೆಚ್ಚುಮಂದಿ ಹೊಂದಿರುತ್ತಾರೆ. ಅದಕ್ಕೆ ಕಾರಣ ಅವರಿಗೆ ದೊರೆಯುವ ಪರಂಪರಾಗತವಾದ ನಿರಂತರ ಶಿಕ್ಷಣ. ಬರ್ಕ್ ಮತ್ತು ಟಾಕ್‌ವಿಲ್ಲೆಯವರ ಅಭಿಮತದಂತೆ, ಸಮಾಜದ ಅನೇಕ ಸನ್ನಿವೇಶಗಳಲ್ಲಿ ಗುಣಸತ್ವವರ್ಗಕ್ಕಿಂತ ಹೆಚ್ಚಾಗಿ ಆನುವಂಶಿಕವರ್ಗದ ಶ್ರೇಷ್ಠತೆ ಪ್ರತಿಪಾದಿತವಾಗಿದೆ. ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲೂ ಈ ಆನುವಂಶಿಕತೆಯ ಪ್ರಾಚೀನತೆಯನ್ನೂ ಪ್ರಾಬಲ್ಯವನ್ನೂ ಕಾಣಬಹುದಾಗಿದೆ. ಇಪ್ಪತ್ತನೆಯ ಶತಮಾನದಲ್ಲಿ ಸಮಾಜವಾದ, ಪ್ರಜಾಪ್ರಭುತ್ವ ಮೊದಲಾದ ಪದ್ಧತಿಗಳು ಬಂದಂತೆಲ್ಲಾ ಅವುಗಳ ಅವನತಿ ಪ್ರಾರಂಭವಾಯಿತು. ಮೆಕಿಯಾವೆಲ್ಲಿಯ ಕಾಲದಲ್ಲಿ ಇಟಲಿಯಲ್ಲಿ ಅನುವಂಶಿಕವರ್ಗದ ಆಳ್ವಿಕೆ ಇತ್ತು.

೧೨. ಗುಣಸತ್ವ ವರ್ಗ

ಗುಣಸತ್ವ ವರ್ಗದ ವಿಷಯ ರಾಜಕೀಯಕ್ಕೆ ಹೊಸದು. ಆದರೆ ಗುಣಸತ್ವವರ್ಗದ ಜನರು ಮೊದಲಿನಿಂದಲೂ ಇದ್ದೇ ಇದ್ದರು. ಆನುವಂಶಿಕವರ್ಗಕ್ಕೆ, ಜನಸಾಮಾನ್ಯವರ್ಗಕ್ಕೆ ಇರುವ ಇತಿಹಾಸ ಇದಕ್ಕಿಲ್ಲ ಎನ್ನಬಹುದು.

ಯಾವ ವ್ಯಕ್ತಿ ಆಳುವ ವರ್ಗದಲ್ಲಿ ಸಾಂಕೇತಿಕವಾಗಿರುತ್ತಾನೋ ಮತ್ತು ತನ್ನ ಅಂತಸ್ಸತ್ವದಿಂದ, ಗುಣಪ್ರತಿಭೆಗಳಿಂದ ಅಧಿಕಾರಾರೂಢನಾಗುತ್ತಾನೋ ಅವನು ಈ ಗುಣಸತ್ವವರ್ಗಕ್ಕೆ ಸೇರುತ್ತಾನೆ. ಈ ಬಗೆಯ ವ್ಯಕ್ತಿಗಳು ಕಾರ್ಯಸಮರ್ಥರಿರುತ್ತಾರೆ. ಇವರ ಕೌಶಲ್ಯ ಮತ್ತು ಚಾಣಾಕ್ಷತನಗಳನ್ನು ವೈದ್ಯತಂತ್ರಜ್ಞರ ವಿದ್ಯೆಗಳಂತೆ ಕಲಿಯಬಹುದಾಗಿದೆ. ಶುಶ್ರೂಷೆಯ ವಿಧಾನದಂತೆ ಅಥವಾ ಮನವೊಲಿಸುವ ವ್ಯಾಪಾರಿಯಂತೆ ಕಾಲ ದೇಶ ಸ್ಥಿತಿಗಳಿಗನುಸಾರವಾಗಿ ಭಿನ್ನಭಿನ್ನ ಕಾರ್ಯನೈಪುಣ್ಯಗಳನ್ನು ತೋರಿಸುವುದರಿಂದಲೇ ಈ ವರ್ಗದವರು ಅಧಿಕಾರಕ್ಕೆ ಬರುತ್ತಾರೆ. ಒಂದು ಕಾಲಕ್ಕೆ, ಆಗ ಅವಶ್ಯಕವಿದ್ದ ಚಾಣಾಕ್ಷತನ, ಕೌಶಲ್ಯಗಳನ್ನು ತೋರಿದ ಕಾರಣ ಅಧಿಕಾರದ ಸಿಂಹಾಸನವನ್ನೇರಿದವರು, ಇನ್ನೊಂದು ಕಾಲದಲ್ಲಿ, ಆ ಕಾಲಕ್ಕೆ ತಕ್ಕಂತೆ ಕಾರ್ಯಕೌಶಲ್ಯ, ದಕ್ಷತೆಗಳನ್ನು ತೋರದಾಗ ಅಧಿಕಾರ ಸಿಂಹಾಸನದಿಂದ ಕೆಳಗೆ ತಳ್ಳಿಸಿಕೊಳ್ಳುತ್ತಾರೆ. ಆನುವಂಶಿಕ ವರ್ಗಕ್ಕೆ ಐಶ್ವರ್ಯ, ಘನತೆ, ಬಿರುದಾವಳಿಗಳು ಅವಶ್ಯಕವಿರುವಂತೆ, ಗುಣಸತ್ವವರ್ಗಕ್ಕೆ ಸಾಮರ್ಥ್ಯ, ದಕ್ಷತೆ, ಸಂಯುಕ್ತ ತರಬೇತಿ, ಸಾಮಾಜಿಕ ಚಾಲನೆ ಇವು ಅವಶ್ಯಕ. ಆನುವಂಶಿಕವರ್ಗ ಪ್ರತಿಭೆ ಇಲ್ಲದಿದ್ದರೂ ಉಳಿದುದರ ಮೇಲೆ ಅವಲಂಬಿಸಿ ನಿಲ್ಲಲು ಸಾಧ್ಯವಿದೆ. ಆದರೆ ಗುಣಸತ್ವವರ್ಗ ಪ್ರತಿಭೆ, ವ್ಯಕ್ತಿತ್ವ, ಕಾರ್ಯಕೌಶಲ್ಯಗಳಿಲ್ಲದೆ ಆಳಲಾರದು, ಬಾಳಲಾರದು. ಗುಣಸತ್ವವರ್ಗದಲ್ಲಿ ಮಗನು ತಂದೆಯಷ್ಟೇ ಸಾಮರ್ಥ್ಯ, ಕೌಶಲ್ಯಾದಿಗಳನ್ನು ಪಡೆದಿದ್ದರೆ ಮಾತ್ರ, ತಂದೆಯಂತೆಯೇ ಅಧಿಕಾರ ಘನತೆಗಳನ್ನು ಗಳಿಸಿಕೊಳ್ಳಬಲ್ಲ ಮತ್ತು ಉಳಿಸಿಕೊಳ್ಳಬಲ್ಲ, ಇಲ್ಲದಿದ್ದರೆ ಇಲ್ಲ.

ಯಾವ ಕ್ಷೇತ್ರದಲ್ಲಾದರೂ ಪ್ರತ್ಯಕ್ಷ ಪರೀಕ್ಷೆ, ಗಣ್ಯತೆ, ಪ್ರಭಾವಗಳಿಂದ ಆಯಾ ಕ್ಷೇತ್ರದಲ್ಲಿನ ಗುಣಸತ್ವಜನರನ್ನು ಗುರುತಿಸಬಹುದು.

ಸಂಗೀತಗಾರರು, ಪತ್ರಿಕೋದ್ಯಮಿಗಳು, ಪ್ರಾಧ್ಯಾಪಕರು ಶಿಲ್ಪಿಗಳು ಇತ್ಯಾದಿ ಇತ್ಯಾದಿ ಎಲ್ಲ ವರ್ಗದವರಲ್ಲೂ ಗುಣಸತ್ವವರ್ಗದ ಜನ ಇದ್ದೇ ಇರುತ್ತಾರೆ. ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಈ ಈ ವರ್ಗದ ಜನ ಕಂಡುಬಂದರೂ, ಮೆಕಿಯಾವೆಲ್ಲಿಯು ಆಳುವ ವರ್ಗದಲ್ಲಿ ಕಂಡುಬರುವ ಗುಣಸತ್ವವರ್ಗದಲ್ಲಿ ಮಾತ್ರ ಆಸಕ್ತನಾಗಿದ್ದನು. ಜನತೆಯನ್ನು ಆಳಲು ಅನೇಕರು ಪ್ರಯತ್ನಿಸಿದಾಗ ಅವರಲ್ಲಿ ಈ ಗುಣಸತ್ವ ವರ್ಗದ ಕೆಲವೇ ಕೆಲವು ಮಂದಿ ಯಶಸ್ವಿಗಳಾಗುತ್ತಾರೆ. ಇವರು ಅಧಿಕಾರಾರೂಢರಾದಾಗ ಅಯಶಸ್ವಿ ಮಂದಿ ಪ್ರತಿ ಸ್ಪರ್ಧಿಗಳಾಗಿಯೇ ಇರುತ್ತಾರೆ. ಆದುದರಿಂದ ಅಧಿಕಾರದ ನೈಪುಣ್ಯತೆ ದಂತ ನೈಪುಣ್ಯತೆಗಿಂತಲೂ ಮಿಗಿಲಾದುದು. ಅವರ ಚಾಲೂಕು, ಮೂವತ್ತೆರಡು ದಂತಗಳ ನಡುವೆ ಎಲ್ಲಿಯೂ ಸಿಲುಕಿಕೊಳ್ಳದೆ ಚಲಿಸುವ ನಾಲಿಗೆಯ ಚಾಲೂಕಿನಂಥದ್ದು. ಆದಕಾರಣ ಮೆಕಿಯಾವೆಲ್ಲಿಯು, ರಾಜಕೀಯರಂಗದಲ್ಲಿ, ರಾಜಕೀಯ ಚದುರಂಗದಾಟದಲ್ಲಿ ಅಧಿಕಾರದ ಜನ ಹೇಗೆ ಜಯಶಾಲಿಗಳಾಗುತ್ತಾರೆ ಎಂಬುದಕ್ಕೆ ಆದ್ಯಗಮನವಿತ್ತಿದ್ದಾನೆ.

ಆಳುವ ವರ್ಗವೆಲ್ಲಾ ಗುಣಸತ್ವವರ್ಗವೇ ಆಗಿರುವುದಿಲ್ಲ. ಅಥವಾ ಗುಣಸತ್ವ ವರ್ಗದವರೆಲ್ಲಾ ಅಸದೃಶನೈಪುಣ್ಯವನ್ನು ತೋರಿದವರೇ ಆಗಿರುವುದಿಲ್ಲ. ಕೆಲವು ದೇಶಗಳಲ್ಲಿ ಆಳುವ ವರ್ಗದಲ್ಲಿ ಗುಣಸತ್ವವರ್ಗ ಲೀನವಾಗಿ ಬಿಟ್ಟಿದ್ದರೆ, ಇನ್ನು ಕೆಲವು ದೇಶಗಳಲ್ಲಿ ಸಂಪೂರ್ಣವಾಗಿ ಹೊರದೂಡಲ್ಪಟ್ಟಿರುತ್ತಾರೆ.

ಮೆಕಿಯಾವೆಲ್ಲಿಯು ಗುಣಸತ್ವವರ್ಗಕ್ಕೆ ಹೆಚ್ಚು ಗಮನವೀಯುತ್ತಾನೆ. ವ್ಯಾಪಾರಿ ಎಲ್ಲಿಯವರೆಗೆ ಉದ್ಯಮದಲ್ಲಿ ತೊಡಗಿರುತ್ತಾನೋ ಅಲ್ಲಿಯವರೆಗೆ ಅವನು ಯಶಸ್ವಿಯಾಗಿರಲು ಸಾಧ್ಯ. ಅದೇ ರೀತಿ ಆಳುವವನು ಮತ್ತು ಅವನ ಸರ್ಕಾರ ಎಲ್ಲಿಯವರೆಗೆ

ಅಧಿಕಾರದಲ್ಲಿರುತ್ತೋ ಅಲ್ಲಿಯವರೆಗೆ ಅವನುಯಶಸ್ವಿಯಾಗಿರುತ್ತಾನೆ. ಗುಣಸತ್ವ ವರ್ಗದವರೂ ಅಧಿಕಾರದ ಆಕ್ರಮಣದಲ್ಲಿ ಆಸಕ್ತ ಹೊಂದಿರಬೇಕಾಗುತ್ತದೆ. ಜನತೆಯಲ್ಲಿ ತನ್ನ ಸರ್ಕಾರವನ್ನು ಉಳಿಸಿಕೊಂಡು, ತನ್ನ ರಾಜಕೀಯ ಅಸ್ತಿತ್ವವನ್ನು ಪ್ರತಿಪಾದಿಸುವುದೇ ಅವನ ಅಂತಿಮ ಘಟ್ಟವಾಗಿರುತ್ತದೆ. ಅಲ್ಪಜನರಾಳ್ವಿಕೆಗೆ ಆದ್ಯತೆ ಇತ್ತಿರುವ ಮೆಕಿಯಾವೆಲ್ಲಿಯು ಗುಣಸತ್ವವರ್ಗವನ್ನು ಅನುವಂಶಿಕವರ್ಗಕ್ಕಿಂತ ಹೆಚ್ಚಾಗಿ ವಿಶ್ಲೇಷಿಸಲು ಕಾರಣ, ಯಾವ ವಿಚಾರದಲ್ಲಿ ಜನಸಾಮಾನ್ಯವರ್ಗದವರು ಅಸಮರ್ಥರೋ ಆ ವಿಚಾರದಲ್ಲಿ ಗುಣಸತ್ವ ವರ್ಗದವರು ಹೆಚ್ಚು ಸಮರ್ಥರಿರುವುದರಿಂದ.

ಮೆಕಿಯಾವೆಲ್ಲಿಯು ಹಲವು ವರ್ಗಗಳನ್ನು ಮತ್ತು ವಾದಗಳನ್ನು ಪ್ರಸ್ತಾಪಿಸುವಂತೆ, ಹಲವು ರಾಜಕೀಯ ಗುಣದೋಷಗಳ ಸಂಗತಿಗಳನ್ನೂ ನಮ್ಮ ಮುಂದಿಟ್ಟಿದ್ದಾನೆ. ಅವುಗಳಲ್ಲಿ ರಾಜಕೀಯ ಕೃತಘ್ನತೆ ಹಾಗೂ ವ್ಯಕ್ತಿಗತ ನೈತಿಕತೆಯ ಪ್ರಸ್ತಾಪ ಗಮನಾರ್ಹವಾದುದು.

೧೩. ರಾಜಕೀಯ ಕೃತಘ್ನತೆ ಮತ್ತು ವ್ಯಕ್ತಿಗತ ನೈತಿಕತೆ

"ಸಾಮಾನ್ಯವಾಗಿ ಲೋಕರೂಢಿಯಲ್ಲಿ ಜನರು ಕೃತಘ್ನರೂ, ಭಿನ್ನಭಾವಿಗಳೂ, ಅಂಜುಕುಳಿಗಳೂ, ಆಶೆಬುರುಕರೂ, ವಾಚಾಳಿಗಳೂ ಆಗಿರುತ್ತಾರೆ" ಎಂಬ ಮೆಕಿಯಾವೆಲ್ಲಿಯ ಹೇಳಿಕೆಯ ಮೇಲೆ ಅವನನ್ನು ಅಶುಭ ದರ್ಶಕನೆಂದೂ, ಅವನದು ದೋಷೈಕ ದೃಷ್ಟಿಯೆಂದೂ ಕರೆದಿದ್ದಾರೆ. ಇದಕ್ಕೆ ಕಾರಣ ಅವನು ಸಿದ್ಧಾಂತ ನಿರೂಪಣಕಾರನಾಗಿದ್ದುದಕ್ಕಿಂತ, ಆದರ್ಶ ರಾಜಕೀಯ ನಿರ್ಮಾಣಕಾರನಾಗಿದ್ದುದು. ಅವನು 'ಜನ' ಎಂದಾಗಲೆಲ್ಲಾ ರಾಜಕೀಯ ಜನ

ವೆಂದೇ ಭಾವಿಸಿಕೊಂಡು ಹೇಳುತ್ತಾನೆ. ಆದರೆ ಜನತೆಯು ಅದನ್ನು ಬೇರೆಬೇರೆ ಬಗೆಯಲ್ಲಿ ಅರ್ಥೈಯಿಸಿಕೊಳ್ಳುವ ಸಂಭವಗಳಿರುವುದ ರಿಂದ, ನೇರವಾಗಿ ರಾಜಕೀಯ ರಂಗಕ್ಕೆ ಧುಮುಕುವವರಿಗಲ್ಲದೆ ಇತರರಿಗೆ ಮೆಕಿಯಾವೆಲ್ಲಿಯ ಮಾತುಗಳ ಬಗ್ಗೆ, ಅವನ ವ್ಯಕ್ತಿತ್ವದ ಅನೇಕ ಕಲ್ಪನೆಗಳು ಮೂಡಿ ಭಿನ್ನಾಭಿಪ್ರಾಯಗಳು ಹುಟ್ಟಿವೆ.

ಪ್ಲೇಟೋ ಮತ್ತು ಥಾಮಸರು ಒಂದೇ ನಿಟ್ಟಿನಲ್ಲಿ, ಒಂದೇ ಮಟ್ಟಿನಲ್ಲಿ ಸಾಮಾಜಿಕ–ರಾಜಕೀಯ, ಜೀವಿತ–ನೈತಿಕ ಅಂಶಗಳನ್ನು ಸಮಗ್ರೀಕರಣಗೊಳಿಸುತ್ತಾರೆ. ಇವುಗಳ ಜೋಡಿ ಹೆಣಿಗೆಯಲ್ಲಿ ರಾಜಕೀಯ ಮಾಪನವನ್ನು ನೈತಿಕ ಮಾಪನದಿಂದ ತಿಳಿಯಬಹು ದಾಗಿದೆ. ಆಗ ರಾಜಕೀಯ ನೈತಿಕತೆಯನ್ನೊಳಗೊಂಡಿರಬೇಕಾಗು ತ್ತದೆ.

ಮೆಕಿಯಾವೆಲ್ಲಿಯು ರಾಜಕೀಯ ವಾದದಲ್ಲಿ ನೀತಿಯ ನೆಲೆ ಇರಬೇಕೆಂಬ ನಿರ್ಬಂಧವಿಲ್ಲದೆ, ಸ್ವಚ್ಛಂದವಾಗಿ ತನ್ನ ವಾದವನ್ನು ಮುಂದಿಟ್ಟಿದ್ದಾನೆ. ಅರಿಸ್ಟಾಟಲನು ಮಾನವನನ್ನು 'ಸಾಮಾಜಿಕ ಜೀವಿ' ಎಂದರೆ, ಸೈಂಟ್ ಥಾಮಸನು 'ನೈತಿಕಜೀವಿ' ಎನ್ನುತ್ತಾನೆ. ಆದರೆ ಮೆಕಿಯಾವೆಲ್ಲಿಯ ಪ್ರಮಾಣ ಸಿದ್ಧಾಂತ ಮಾನವನನ್ನು 'ರಾಜಕೀಯ ಜೀವಿ' ಎಂದು ಸಾರುತ್ತದೆ. ಮೆಕಿಯಾವೆಲ್ಲಿಯು, 'ರಾಜಕಾರಣ ರಂಗದಲ್ಲಿ ಬಹುಮತಗಳು ಮಾಡಬಹುದಾದ ವಸ್ತುವಿಚಾರವಿಸ್ಮಯಗಳು ಇವೆ, ಮಾಡಲಾಗದವೂ ಇವೆ. ಜನತಾ ಸಂಘಟನೆಯಾಗಬೇಕಾದರೆ, ರಾಜಕೀಯ ಮುನ್ನಡೆ ಸಾಧಿಸ ಬೇಕಾದರೆ ಶ್ರಮವಿಭಜನೆ ಅವಶ್ಯಕ. ಅಂತೆಯೇ ಆಳಿಸಿಕೊಳ್ಳುವ ವರು ಒಂದು ವರ್ಗ, ಆಳುವವರು ಇನ್ನೊಂದುವರ್ಗ. ಸಾಮಾನ್ಯ ವಾಗಿ ಆಳಿಸಿಕೊಳ್ಳುವವರ ಸಂಖ್ಯೆ ಅಪಾರ, ಆಳುವವರ ಸಂಖ್ಯೆ ಅಲ್ಪ. ಏಕೆಂದರೆ ಆಳುವುದಕ್ಕೆ ಶಕ್ತಿಸಾಹಸ, ಸಂಪತ್ತು. ಪ್ರತಿಭೆ

ಗಳೂ, ಅದೃಷ್ಟವೂ ಬೇಕು. ಎಲ್ಲರೂ ಆಳಬಯಸಬಹುದು. ಆದರೆ ಅದು ಎಲ್ಲರಿಗೂ ದೊರೆಯಲು ಸಾಧ್ಯವಿಲ್ಲ. ಆದ್ದರಿಂದ ಅಲ್ಪ ಜನರಾಳ್ವಿಕೆ ಅನಿವಾರ್ಯ' ಎನ್ನುತ್ತಾನೆ. ಎಲ್ಲ ಸಂದರ್ಭ ಗಳಲ್ಲೂ ನೈತಿಕತೆಯನ್ನು ಪರಿಗಣಿಸದ ಮೆಕಿಯಾವೆಲ್ಲಿಯ ವಾದ ಸರಣಿಯು ಶಕ್ಯವಿದ್ದಷ್ಟು ಪ್ರತ್ಯಕ್ಷಶೋಧದ ತಳಹದಿಯ ಮೇಲೆ ನಿರ್ಮಾಣಗೊಂಡಿದೆ. 'ದಿ ಪ್ರಿನ್ಸ್' ಮತ್ತು 'ಡಿಸ್ಕೋರ್ಸಸ್' ಗ್ರಂಥಗಳಲ್ಲಿ ಆಳುವ ಮಂದಿಯನ್ನೇ ಕೇಂದ್ರೀಕರಿಸಿ ಪ್ರಸ್ತಾಪಿ ಸಿದ್ದಾನೆ.

ನೈತಿಕತೆಯನ್ನು ವ್ಯಕ್ತಿಯ ಮಟ್ಟಿಗೆ ಅನ್ವಯಿಸಬಹುದೇ ಹೊರತು, ಅದನ್ನು ರಾಜ್ಯಶಾಸ್ತ್ರದಲ್ಲಿ ಮಾಪಕವನ್ನಾಗಿ ಬಳಸಲು ಸಾಧ್ಯವಿಲ್ಲ. ಅದರಲ್ಲೂ ರಾಜಕೀಯ ಕೃತಜ್ಞತೆಯನ್ನು ವ್ಯಕ್ತ ಪಡಿಸುವುದಕ್ಕಾಗಿ ಬಳಸಲು ಸಾಧ್ಯವೇ ಇಲ್ಲ. ರಾಜಕೀಯ ಕ್ಷೇತ್ರದಲ್ಲಿ ಕೃತಜ್ಞತೆ ತೋರಲು ಸಾಧ್ಯವೇ ಇಲ್ಲ.

ಉದಾಹರಣೆಗೆ: ರಿಪಬ್ಲಿಕನ್ನರ ಕಾಲದ ನಿರುದ್ಯೋಗಿ ವ್ಯಕ್ತಿ ಯೊಬ್ಬನು, ಡೆಮೊಕ್ರಾಟರ ಆಡಳಿತದಲ್ಲಾದರೂ ಉದ್ಯೋಗ ಸಿಗಬಹುದೆಂಬ ಆಸೆಯಿಂದ ೧೯೩೬ ರ ಚುನಾವಣೆಯಲ್ಲಿ ಫ್ರಾಂಕ್ಲಿನ್ ರೂಸ್‌ವೆಲ್ಟರಿಗೆ ಮತವಿತ್ತು, ಸ್ವಲ್ಪ ಕಾಲದಲ್ಲಿಯೇ ಉದ್ಯೋಗ ಗಳಿಸಿ ನಂತರ ೧೯೫೨ ರ ಚುನಾವಣೆಯಲ್ಲಿ ತೆರಿಗೆ ಗಳನ್ನು ಇಳಿಸುತ್ತಾರೇನೋ ಎಂಬ ಆಸೆಯಿಂದ ರಿಪಬ್ಲಿಕನ್ನರಿಗೆ ಓಟುಮಾಡಿದರೆ, ಅಂತಹ ಪ್ರಜೆಯನ್ನು ಈ ೧೬ ವರ್ಷಗಳಕಾಲ ಯಾರಿಗೆ ಕೃತಜ್ಞನೆಂದು ತಿಳಿಯಬೇಕು?

ರಾಜಕೀಯ ಕೃತಜ್ಞತೆ ಸಾಧ್ಯವಿಲ್ಲವೆಂಬುದಕ್ಕೆ ಇನ್ನೊಂದು ನಿದರ್ಶನ ಕೊಡಬೇಕಾದರೆ ೧೯೪೫ರ ಗ್ರೇಟ್‌ಬ್ರಿಟನ್ನಿನ ಚುನಾವಣೆಗಳು. ಯೂರೋಪಿನಲ್ಲಿ ಜಗತ್ಸಂಗ್ರಾಮ ಮುಗಿದ

ಮೇಲೆ ಬ್ರಿಟನ್ನಿನ ಮೊದಲ ಮಹಾಸಾರ್ವತ್ರಿಕ ಚುನಾವಣಾ ಸಮಯ ಬಂದಿತು. ಆಗ ಆಪತ್ಕಾಲದಲ್ಲಿ ದೇಶವನ್ನು ಸಂರಕ್ಷಿಸಿದ ವಿನ್ಸ್‌ಟನ್ ಚರ್ಚಿಲ್ಲರತ್ತ ಜನ ತಿರುಗುವುದು ಸಹಜವೇ ತಾನೆ ! ಇದನ್ನರಿತ ಕನ್ಸರ್ವೇಟೀವ್ ಪಕ್ಷದವರು ಈ ವಿಚಾರಸರಣಿಯ ಲಾಭ ಹೊಂದಲು ದಪ್ಪ ದಪ್ಪ, ಕಪ್ಪು ಕಪ್ಪು ಅಕ್ಷರಗಳಲ್ಲಿ ಚರ್ಚಿಲ್ಲರ ಭಾರೀ ಭಾವಚಿತ್ರದೊಂದಿಗೆ ಬ್ರಿಟನ್ನಿನಾದ್ಯಂತ ಭಿತ್ತಿ ಪತ್ರಗಳನ್ನು ಪ್ರಚುರಗೊಳಿಸಿ, "ಚರ್ಚಿಲ್ಲರ ಪೂರ್ಣ ಸೇವಾವ ಕಾಶಕ್ಕೆ ನಿಮ್ಮ ಮತ ಮೀಸಲಾಗಿರಲಿ" ಎಂದು ಸಾರಿದರು. ಆದರೆ ಬ್ರಿಟನ್ನಿನ ಜನತೆ ಪ್ರಚಂಡ ಬಹುಮತದಿಂದ ಲೇಬರ್ ಪಕ್ಷಕ್ಕೆ ಪಟ್ಟಕಟ್ಟಿತು. ಇದಕ್ಕಾಗಿ ೧೯೪೫ರ ಲೇಬರ್ ಪಕ್ಷದ ಮತದಾರ ರನ್ನು ದೂರೋಣವೇ ? ಇಲ್ಲವೇ ೧೯೫೨ರ ರಿಪಬ್ಲಿಕನ್ ಮತ ದಾರರ ಮೇಲೆ ಕೆಂಡಕಾರೋಣವೇ ?—ಜನತೆಯು ಅಕೃತಜ್ಞತೆ ಗಾಗಿ. ಆದುದರಿಂದಲೇ ರಾಜಕೀಯ ಕೃತಜ್ಞತೆ ಸಾಧ್ಯವಿಲ್ಲ ಎಂದದ್ದು.

ಮೆಕಿಯಾವೆಲ್ಲಿಯ ಪ್ರಕಾರ ಆಳುವ ಜನರಿಂದಾಗಲೀ, ಆಳಿಸಿ ಕೊಳ್ಳುವ ಜನರಿಂದಾಗಲೀ ರಾಜಕಾರಣರಂಗದಲ್ಲಿ ರಾಜಕೀಯ ಕೃತಜ್ಞತೆಯನ್ನು ನಿರೀಕ್ಷಿಸುವ ಹಾಗಿಲ್ಲ.

ವರ್ತಮಾನ ಸಂಗತಿಗಳಿಗೆ ತಕ್ಕಂತೆ ಮತ್ತು ಭವಿಷ್ಯತ್ತಿನ ನಿರೀಕ್ಷೆ ಗಳಿಗೆ ಸರಿಹೊಂದುವಂತೆ ರಾಜಕೀಯರಂಗದ ಸಾಧನೆಗಳ ತೀರ್ಮಾನವಾಗುತ್ತದೆ. ಹೊಸರಾಜ್ಯಗಳನ್ನು ಗೆದ್ದಾಗ, ಅಲ್ಲಿ ಪದೇ ಪದೇ ಬದಲಾವಣೆಗಳನ್ನು ಮಾಡದೆ, ಇರತಕ್ಕ ಅನುಕೂಲ ಗಳಿಂದಲೇ ಜನರಲ್ಲಿ ಆಶಾಭಾವನೆಯನ್ನುಂಟುಮಾಡಿ. ಸ್ವಪ್ರ ಯೋಜನ ಹೊಂದಬೇಕು. ಅಲ್ಲದೆ ಅಪಾಯಕಾರಿಗಳಾಗಿ ಕಂಡು ಬಂದವರ ಬಗ್ಗೆ ನಿರ್ದಯಿಯಾಗಿ ವರ್ತಿಸಿ, ಬಹಿಷ್ಕಾರ, ಸೆರೆಮನೆ

ವಾಸ, ಮರಣದಂಡನೆ ಮೊದಲಾದ ಉಗ್ರ ಶಿಕ್ಷೆಗಳನ್ನು ವಿಧಿಸಬೇಕು. ರಾಜ್ಯದ ಹಿತದೃಷ್ಟಿಯಿಂದ ಹೀಗೆ ಮಾಡಬೇಕಾದುದು ಅಗತ್ಯವಾದುದರಿಂದ ನ್ಯಾಯವಾದುದೂ ಆಗಿದೆ. ಹಾಗೆಂದ ಮಾತ್ರಕ್ಕೆ ಕ್ರೂರವಾಗಿ ವರ್ತಿಸಿ ಜನಗಳನ್ನು ಎದುರುಹಾಕಿಕೊಳ್ಳಬಾರದು. ಹಾಗಾದಲ್ಲಿ, ಇದ್ದ ಪ್ರದೇಶವನ್ನಾಗಲೀ ಗೆದ್ದ ಪ್ರದೇಶವನ್ನಾಗಲೀ ಆಳಿಬಾಳಲಾರನು. ಜನಗಳನ್ನು ಮಣಿಸಿಕೊಳ್ಳಲೂ ಬೇಕು. ಸಮಯಬಂದಾಗ ತಾನೂ ಮಣಿಯಬೇಕು. ಈ ಎರಡೂ ಕಡೆಗಳ ಗರಗಳ ಉರುಳಾಟದಲ್ಲಿ ಅಂಕೆಗಳನ್ನು ಗುರುತಿಸಿಕೊಳ್ಳುವಂಥ ತೀವ್ರ ತಿಕ್ಕಾಟದ ಆಟವೇ ರಾಜಕೀಯ ಚದುರಂಗದಾಟ. ಇವೆಲ್ಲವನ್ನೂ ನೋಡಿದಾಗ ಕೃತಜ್ಞತೆ ಎಂಬುದು ರಾಜಕೀಯ ರಂಗದಲ್ಲಿ ಆಕಾಶ ಮಲ್ಲಿಗೆಯೇ ಸರಿ. ನೈತಿಕತೆ ಎಲ್ಲಿಯವರೆಗೆ ಉಪಯುಕ್ತವೋ ಅಲ್ಲಿಯವರೆಗೆ ಸೂಕ್ತ ಎಂಬ ಮಾತು ನಿಜ.

೧೪. ಅಧಿಕಾರ ವಿಮರ್ಶೆ

ಸಾಧಾರಣವಾಗಿ ಸಿದ್ಧಾಂತಕಾರರು ಯಾವ ನೆಲೆಗಟ್ಟಿನ ಮೇಲೆ ನಿಂತು ತಮ್ಮ ವಾದವನ್ನು ಮಂಡನೆ ಮಾಡಿದ್ದಾರೆ ಎಂಬುದನ್ನು ವೀಕ್ಷಿಸಿದರೆ ಸಿದ್ಧಾಂತದ ಸ್ವರೂಪ ಚೆನ್ನಾಗಿ ವ್ಯಕ್ತವಾಗುತ್ತದೆ. ಉದಾಹರಣೆಗೆ, ಜಾನ್ ಲಾಕೆ ಮತ್ತು ಜಾನ್ ಸ್ಟೂಯರ್ಟ್ ಮಿಲ್ಲರು ಜನಸಾಮಾನ್ಯ ದೃಷ್ಟಿಕೋಣದಲ್ಲಿ ಸಿದ್ಧಾಂತ ನಿರೂಪಣೆಗೈದರು. ಪ್ಲೇಟೋ, ಥಾಮಸರು ಗುಡ್ಡದ ಮೇಲೆ ನಿಂತು ಊರನ್ನು ಕಂಡಂತೆ, ಸಮಗ್ರಾವಲೋಕನದಲ್ಲಿ ರಾಜಕೀಯ ಪದ್ಧತಿಗಳ 'ಇಡಿನೋಟ'ದ ವಾದವನ್ನು ಮುಂದಿಟ್ಟರು. ಆದರೆ ಮೆಕಿಯಾವೆಲ್ಲಿಯು ಇವೆರಡನ್ನೂ ಬಿಟ್ಟು ಆಳುವ ಅಲ್ಪ ಜನ

ವರ್ಗದ ಮಾಪಕದಲ್ಲಿ ರಾಜಕೀಯ ಅಧಿಕಾರದ ವಿಧಾನಗಳನ್ನು ವಿಶ್ಲೇಷಣೆ ಮಾಡಿದನು. ರಾಜಕೀಯ ಅಧಿಕಾರದ ಸಂಘಟನೆಯನ್ನು ಕುರಿತು, ರಾಜಕೀಯ ತತ್ವಜ್ಞಾನದ ವಿಚಾರದಲ್ಲಿ ಸಾಂಪ್ರದಾಯಿಕ ದೃಷ್ಟಿಯಿಂದ ಮುಂದಕ್ಕೆ ಸಾಗಿದನು. ಅವನ ದೃಷ್ಟಿಯಲ್ಲಿ ಶ್ರೀಮಂತ ವರ್ಗದಿಂದ ಅಥವಾ ಗುಣಸತ್ವವರ್ಗದವರಿಂದ ಸುಭದ್ರ ಆಡಳಿತಕೋಟೆ ಏರ್ಪಡುವುದಾದಲ್ಲಿ ಅಲ್ಪ ಸಂಖ್ಯಾತರ ಆಳ್ವಿಕೆಯೇ ಸರಿ. ಜನತೆ ಆಶ್ವಾಸನೆ ಇತ್ತಿದ್ದೇ ಆದರೆ ಪ್ರಜಾಪ್ರಭುತ್ವ ನಿಜಕ್ಕೂ ಉತ್ತಮ ರೀತಿಯದೇ.

ಅಲ್ಪ ಜನರಾಳ್ವಿಕೆಯಲ್ಲಿ ಕೆಲವೇ ಮಂದಿ ರಾಜನಿಷ್ಠರು ಸಿಗುವರು. ಆಳುವ ವ್ಯಕ್ತಿ ಅತ್ಯಂತ ಹಿರಿಯ ವ್ಯಕ್ತಿಯಾಗಿದ್ದು ಸುತ್ತಮುತ್ತಲಿನ ಸಶಕ್ತವ್ಯಕ್ತಿಗಳ ಮೇಲೆ ಅವಲಂಬಿಯಾಗಿರುತ್ತಾನೆ. ಪ್ರಜಾಪ್ರಭುತ್ವದಲ್ಲಿ ಆಳುವ ನಾಯಕನು ಬಹುಸಂಖ್ಯಾತ ಪ್ರಜಾಸಮ್ಮತಿಯನ್ನು ಗಳಿಸಿರಬೇಕಾಗುತ್ತದೆ. ಪ್ರಜೆ ಏಕ ವ್ಯಕ್ತಿಯಾಗಿ ದುರ್ಬಲನಾಗಿ ಕಂಡುಬಂದರೂ, ಸಾಂಘಿಕವಾಗಿ ಪ್ರಬಲವಾಗಿರುತ್ತಾನೆ. ಜನತಾ ಆಯ್ಕೆಗೊಳಗಾಗುವ ವ್ಯಕ್ತಿ ಸದಾ ಜನತಾ ಆಶೋತ್ತರಗಳ ನೆರವೇರಕನಾಗಿರಬೇಕು. ಅಲ್ಪಜನರಾಳ್ವಿಕೆ, ಬಹುಜನರಾಳ್ವಿಕೆ—ಈ ಎರಡು ಪದ್ಧತಿಗಳಲ್ಲೂ ಜನತೆಯ ಆಶೋತ್ತರಗಳು ಭಿನ್ನಭಿನ್ನವಿರುತ್ತವೆ. ಮೆಕಿಯಾವೆಲ್ಲಿಯು ಈ ಎರಡು ಪದ್ಧತಿಗಳನ್ನೂ ವಿಶ್ಲೇಷಿಸಿ, ಆಳುವವರ ಅಧಿಕಾರಗಳನ್ನು ಗೊತ್ತುಮಾಡಿದ್ದಾನೆ.

ಕೆಲವು ಸಂದರ್ಭಗಳಲ್ಲಿ ಆಳುವ ವರ್ಗ ಅಶಕ್ತವಾದಾಗ ಜನತೆ ತಮ್ಮಲ್ಲೇ ಒಬ್ಬನನ್ನು ಅಧಿಕಾರದ ಗದ್ದುಗೆಗೆ ಏರಿಸುತ್ತಾರೆ. ಇಲ್ಲವೇ ಆಳುವ ವರ್ಗದವರ ಕ್ರೌರ್ಯ, ದರ್ಪ, ಹಿಂಸೆಗಳು ಹೆಚ್ಚಾದಾಗ ಅದನ್ನು ಹತ್ತಿಕ್ಕುವುದಕ್ಕಾಗಿ, ತಮ್ಮನ್ನು ಪಾರು

ಮಾಡಬಲ್ಲ ಒಬ್ಬ ಶಕ್ತವ್ಯಕ್ತಿಗೆ ಶರಣು ಹೋಗುತ್ತಾರೆ. ಅಂಥ ವ್ಯಕ್ತಿ ಸಿಗದಿದ್ದಲ್ಲಿ, ತಾವೇ ಅಂಥವನೊಬ್ಬನನ್ನು ಸೃಷ್ಟಿಸುತ್ತಾರೆ. ಆದ್ದರಿಂದ ಅಧಿಕಾರಕ್ಕೆ ಬಂದವರು ಮನಬಂದಂತೆ ವರ್ತಿಸಲು ಸಾಧ್ಯವಿರುವುದಿಲ್ಲ. ಜನತೆಯ ಧ್ಯೇಯ ದೊಡ್ಡದಿರುವುದರಿಂದ ಇಂತಹ ಸಮಯಗಳಲ್ಲಿ ಜನತೆ ಬಹಳ ಜಾಗೃತವಾಗಿರುತ್ತದೆ. ಆದ್ದರಿಂದ ಆಳುವ ವ್ಯಕ್ತಿ ದುಡಿಯಬೇಕು, ಇಲ್ಲವೇ ಮಡಿಯ ಬೇಕು. ಅಪಾರ ಜನರಿಂದ ಆಯ್ಕೆಯಾದವನು ಜನರನ್ನು ಎದುರು ಹಾಕಿಕೊಂಡರೆ, ಅವನ ಆಯುಸ್ಸು ಮುಗಿದಂತೆಯೇ ಸರಿ. ಏಕೆಂದರೆ, ಯಾವ ದೊರೆಯಾದರೂ ಅಲ್ಪಜನರ ಮಹತ್ತರ ವಿರೋಧವನ್ನಾದರೂ ಎದುರಿಸಬಹುದು, ಆದರೆ ಅಪಾರ ಜನರ ಅಲ್ಪ ವಿರೋಧವನ್ನು ಎದುರಿಸುವುದು ಅಸಾಧ್ಯ.

ದೊರೆಯ ಕ್ರಿಯಾಸ್ವಾತಂತ್ರ್ಯವನ್ನು ಯಾವ ಪದ್ಧತಿಯ ಸರ್ಕಾರ ಬೆಂಬಲಿಸುತ್ತದೆ, ಎಂಬ ದೃಷ್ಟಿಯಲ್ಲಿ ಮೆಕಿಯಾವೆಲ್ಲಿಯು ಪ್ರಜಾಪ್ರಭುತ್ವವನ್ನು ಅತ್ಯುತ್ತಮವೆಂದು ಪರಿಗಣಿಸಿದ್ದಾನೆ. ಏಕೆಂದರೆ ಇತರ ಪದ್ಧತಿಗಳಲ್ಲಿ ದೊರೆಯು ಸದಾ ಸರಿ ಸಮನಾದ ಪ್ರತಿಭಾವಂತರ ನಡುವೆ ಇರುವುದರಿಂದ ಪದೇ ಪದೇ ರಾಜ್ಯ ಕ್ರಾಂತಿಯು ಸಂಭವವಿರುತ್ತದೆ. ಆದರೆ ಪ್ರಜಾತಂತ್ರದಲ್ಲಿ ಪ್ರಜೆ ಗಳನ್ನು ದೂರದಿಂದಲೇ ನಿಯಂತ್ರಿಸಬಹುದಾದ್ದರಿಂದ ಆ ಪ್ರಶ್ನೆ ಅಷ್ಟಾಗಿ ಇರುವುದಿಲ್ಲ.

ನಿರಂಕುಶಾಧಿಕಾರವಾಗಲಿ, ಸಾಂಕುಶಾಧಿಕಾರವಾಗಲಿ ಅದು ಒಂದಲ್ಲ ಒಂದು ರೀತಿಯಲ್ಲಿ ಅಲ್ಪಜನರಾಳ್ವಿಕೆಯೇ ಆಗಿರುತ್ತದೆ ಎಂಬುದು, ಮೆಕಿಯಾವೆಲ್ಲಿಯ ಅಭಿಮತ. ಈ ಸಂದರ್ಭದಲ್ಲಿ ಅವನ ನಾಲ್ಕಂಶಗಳ ಕಥನ ಸಕಾಲಿಕವಾಗಿದೆ:

(೧) ರಾಜ್ಯಪರಿಪಾಲನೆ ಮತ್ತು ಸಂರಕ್ಷಣೆ ಮಾಡತಕ್ಕ ಭೂಮಿಪತಿ

ಸದೃಢನಾಗಿರಬೇಕು. ಸಮಯ ಸನ್ನಿವೇಶಗಳಿಗೆ ತಕ್ಕ ಸಾಹಸ ಶಕ್ತಿಗಳನ್ನು ಪ್ರದರ್ಶಿಸಬೇಕು. ರಾಜನು ಜನತೆಯ ರಕ್ಷಣೆಗೆ ಮತ್ತು ಐಕ್ಯತೆಗೆ ಅವ್ಯಾವಹಾರಿಕ ಸಾಧನಗಳನ್ನೂ ಬಳಸಿಕೊಳ್ಳ ಬಹುದು. ಆದರೆ ವಿನಾಕಾರಣ ಪದೇ ಪದೇ ಅವ್ಯಾವಹಾರಿಕ ವಾಗಿ ಹೋಗಬಾರದು. ಸೈಂಟ್‌ಥಾಮಸ್ ಹೇಳುವಂತೆ, 'ಮರ್ತ್ಯಲೋಕದ ಎಂತಹ ದೊಡ್ಡ ರಾಜ್ಯವನ್ನೇ ಆಗಲಿ ಅಧಿಕಾರ ದಂಡದಿಂದ ಒಗ್ಗೂಡಿಸಬಹುದಾಗಿದೆ. ಮಾನವ-ಮಾನವರ ನಡುವಣ ಪ್ರೀತಿ ದೇವಲೋಕದ ಸುರನಗರಿಯಲ್ಲಷ್ಟೇ ಸಿಗಬಹು ದಾದ ಅಪೂರ್ವ ನಿಧಿಯಾಗಿದೆ.' ಮೆಕಿಯಾವೆಲ್ಲಿಯೂ ಈ ಸತ್ಯವನ್ನು ಒಪ್ಪುತ್ತಾನೆ: ಪ್ರೀತಿಸುವುದಕ್ಕಿಂತ ಭೀತಿಗೊಳಿಸುವುದು ಮೇಲೋ? ಭೀತಿಗೊಳಿಸುವುದಕ್ಕಿಂತ ಪ್ರೀತಿಸುವುದು ಮೇಲೊ?– ಆಳುವ ದೊರೆ ತನ್ನ ಜನತೆಯ ಹೃದಯನಂದನದಲ್ಲಿ ಎರಡನೆಯದನ್ನು ಕಾಣಲು ಸಾಧ್ಯವೆ? – ಇದಕ್ಕುತ್ತರ : "ಪ್ರೀತಿಸಲೂ ಬೇಕು, ಭೀತಿಗೊಳಗಾಗಿಸಲೂ ಬೇಕು. ಎರಡೂ ಒಟ್ಟಿಗೆ ಹೊಂದಿ ಕೊಳ್ಳಲು ಸಾಧ್ಯವಿಲ್ಲದಿದ್ದಲ್ಲಿ, ಪ್ರೀತಿಮಾರ್ಗಕ್ಕಿಂತ ಭೀತಿಮಾರ್ಗವೇ ಲೇಸು."

ಸಾಮಾನ್ಯವಾಗಿ ಜನತೆ ಎಷ್ಟೇ ಕೃತಘ್ನರು, ಭಿನ್ನಾಭಿಪ್ರಾಯಿ ಗಳು, ಅಂಜುಕುಳಿಗಳು, ಆಸೆಬುರುಕರು ಆಗಿದ್ದರೂ, ಅವರ ಆಸೆ ಅಗತ್ಯಗಳನ್ನು ಪೂರೈಸಿದಷ್ಟು ಕಾಲವೂ ನಾವು ಅವರನ್ನು ಬಳಸಿ ಕೊಂಡಷ್ಟೂ ಅವರು ನಮ್ಮವರು. ಅವರ ಅವಶ್ಯಕತೆಗಳನ್ನೆಲ್ಲಾ ಪೂರೈಸುತ್ತಿರುವಾಗ, ಅವರು ತೃಪ್ತರಾಗಿದ್ದಾಗ, "ಖಂಡವಿದೆ ಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ" ಎಂಬಂತೆ, 'ತನುವು ನಿನ್ನದು, ಮನವು ನಿನ್ನದು, ಎನ್ನ ಜೀವಧನವೂ ನಿನ್ನದೇ' ಎಂದು ಸರ್ವಾರ್ಪಣ ಮಾಡುವ ಭಕ್ತರಾಗಿ ಬಿಡುತ್ತಾರೆ.

ಹಾಗೆಂದ ಮಾತ್ರಕ್ಕೆ ರಾಜನು ಸದಾ ಅವರು ಹೇಳಿದಹಾಗೆಲ್ಲಾ ಕುಣಿಯುವುದು ಸರಿಯಲ್ಲ. ಆತ ತಾನು ಮಾಡಬೇಕಾದ ಕಾರ್ಯ ಗಳನ್ನು ಮಾಡಿಯೇ ತೀರಬೇಕು. ಇಲ್ಲದಿದ್ದರೆ ತೀರಿಕೊಳ್ಳ ಬೇಕಾಗುತ್ತದೆ. ರಾಜನಲ್ಲಿ ಪ್ರೀತಿ ಇರಿಸುವ ಜನರಲ್ಲಿ ಬಾಂಧವ್ಯದ ಕೊಂಡಿಗಳು ಸ್ವಾರ್ಥದ ಗುರಿಯನ್ನು ಹೊಂದಿದ್ದು, ಗುರಿಮುಟ್ಟಿ ದೊಡನೆಯೇ ಕಳಚಿ ಬೀಳುತ್ತವೆ. ಆದರೆ ಭೀತಿಗೆ ಒಳಗಾಗಿರುವ ವರಲ್ಲಿ ಶಿಕ್ಷೆಯ ಭೀಕರತೆಯ ಪರಿಣಾಮವಾಗಿ ಬಾಂಧವ್ಯದ ಕೊಂಡಿಗಳು ಬಲವಾಗಿ ಕಚ್ಚಿಕೊಂಡಿರುತ್ತವೆ. ಏಕಾಏಕಿ ಕಳಚುವುದಿಲ್ಲ.

ಜನತೆ ಆಳುವ ವ್ಯಕ್ತಿಯಲ್ಲಿ ಏನೇ ದೌರ್ಬಲ್ಯಗಳನ್ನು ಕಂಡರೂ ಅದನ್ನು ಉಪಯೋಗಿಸಿಕೊಳ್ಳಲು ಯತ್ನಿಸುತ್ತದೆ. ಜನರು ಏನಿದ್ದರೂ ಬೇಸಿಗೆಯ ಶೂರರು. ಚೆಲು ಬಿಸಿಲಿನಲ್ಲಿ ಚೆಲ್ಲಾಟ ವಾಡುವ ಚೆಲ್ವಕ್ಕಿಗಳಂತೆ, ಎಲ್ಲಾ ಚೆನ್ನಾಗಿರುವವರೆಗೆ ಅಪೂರ್ವ ರಾಜನಿಷ್ಠೆಯನ್ನು ತೋರುತ್ತಿದ್ದು ಪರಿಸ್ಥಿತಿ ಹದಗೆಡುತ್ತಾ ಬಂದಂತೆಲ್ಲಾ ಕನಸುಗಳಂತೆ ಕನವರಿಸಿಕೊಂಡು ಕಣ್ಣುಜ್ಜಿಕೊಂಡು ಬಿಡುತ್ತಾರೆ. ಹೀಗೆ ಅವರ ಪ್ರೀತಿವಿಶ್ವಾಸಗಳು ಚಂಚಲಮಯ ವಾಗಿದ್ದಾಗ್ಲೂ, ಪ್ರಜಾಪಾಲಕನು ಸದಾ ಪ್ರಜಾವತ್ಸಲನಾಗಿದ್ದು ಅವರ ಹೃದಯವನ್ನೂ ಪ್ರೀತಿವಿಶ್ವಾಸಗಳಿಂದಲೇ ಸೂರೆಗೊಳ್ಳ ಬೇಕು. ಅಂತೂ ಒಟ್ಟಿನಲ್ಲಿ ಪ್ರೀತಿವಿಶ್ವಾಸಗಳು ಇತರ ದೃಷ್ಟಿಗಳಿಂದ ಎಷ್ಟೋ ಮುಖ್ಯವಾದುದಾದರೂ, ರಾಜಕೀಯಾಧಿಕಾರದ ಕ್ಷೇಮ ಕಾರಿ ಅಸ್ತಿತ್ವಗಳಂತೂ ಅಲ್ಲ. ಆದ್ದರಿಂದ ದಂಡಾಧಿಕಾರದ ಬಳಕೆಯೇ ಯೋಗ್ಯವಾದುದು. ಆಗ ಜನ ಶಿಕ್ಷೆಯ ಪರಿಚಯ ಪರಿಣಾಮಗಳಿಂದ ಅಂಕುಶಕ್ಕೆ ಸಿಲುಕುತ್ತಾರೆ. ಭೀತಿ ನಿಜವಾಗಿ ಗೌರವ ಜನಕ. ದ್ವೇಷಕಾರಣಕ್ಕಿಂತ ಮಿಗಿಲಾಗಿ ಗೌರವ ಸಾಧನ,

ದೊರೆಯ ಉಗ್ರಕ್ರಮ ತಮ್ಮ ಭವಿಷ್ಯತ್ತಿನ ಹಿತಕ್ಕಾಗಿಯೇ ಎಂದು ಜನ ಭಾವಿಸುವರು. ರಾಜನು ಎಂದೂ ದಂಡವನ್ನು ಸ್ವೇಚ್ಛೆಯಾಗಿ ಬಳಸಬಾರದು. ಒಟ್ಟಿನಲ್ಲಿ, ಮೆಕಿಯಾವೆಲ್ಲಿಯ ದೃಷ್ಟಿಯಲ್ಲಿ ಆಳುವವನ ಕೈ ಮೇಲಾಗಿರಬೇಕು.

ಪ್ರೀತಿಯೊಂದಿಗಿರುವ ಇನ್ನೊಂದು ಅಪಾಯವೆಂದರೆ, ಅದು ಪ್ರೀತಿಸುವವನ ಹೃದಯಾಂತರಾಳದಿಂದ ಚಿಮ್ಮಿ, ಹೊರಬಂದರೂ, ಪ್ರೀತಿಗಣ್ಣಿನ ಗುಣಶ್ರೇಷ್ಠತೆಗಳು ಕೇವಲ ಕನಸಿನ ಗಂಟುಮಾತ್ರ. ಕಾರಣ, ಪ್ರೀತಿಪಾತ್ರನ ಗುಣಶ್ರೇಷ್ಠತೆಗಳೆಲ್ಲಾ ಪ್ರೀತಿಸುವವನ ಹೃದಯಸ್ಥಿತಿಯನ್ನು ಅವಲಂಬಿಸಿರುತ್ತದೆ. ಆದುದರಿಂದ ಪರರ ಹೃದಯದೊಳಗಿನ ತನ್ನ ಗುಣಶ್ರೇಷ್ಠತೆಗಳ ಕನಸಿನ ಗಂಟನ್ನು ನಂಬದೆ, ಎಂದರೆ ಪರರ ಪ್ರೀತಿಯನ್ನು ಆಧರಿಸದೆ ತನ್ನ ಕೈಯೊಳಗಿನ ಗಂಟಾದ ಅಧಿಕಾರ ದಂಡದ ಮೇಲೆ ನಂಬಿಕೆಯನ್ನಿರಿಸಿ, ದೃಢನಿಶ್ಚಯದಿಂದ ರಾಜ್ಯರಥವನ್ನು ಎಳೆಯುವವನಾಗಬೇಕು.

(೨) ರಾಜಕೀಯ ದೃಷ್ಟಿಯಲ್ಲಿ ಉಪಯುಕ್ತವಿರುವ ವಿಶೇಷ ಸಂದರ್ಭಗಳಲ್ಲಲ್ಲದೆ ಉಳಿದ ಸಂದರ್ಭಗಳಲ್ಲಿ, ಭೀತಿಯ ಅಸ್ತ್ರವನ್ನು ಸ್ವಾರ್ಥಕ್ಕಾಗಲೀ, ಕ್ರೌರ್ಯಕ್ಕಾಗಲೀ ಬಳಸಬಾರದು. ಆದರೆ ಆಂತರಿಕ ವಿರೋಧವನ್ನು ತಡೆಗಟ್ಟುವಲ್ಲಿ ಬಳಸಬೇಕಾಗುತ್ತದೆ. ರಾಜನು ತಾನು ಅಧಿಕಾರ ಶಿಖರದಲ್ಲಿರುವಾಗ ಇನ್ನೊಂದು ಕಡೆ ಯಿಂದ ಅಧಿಕಾರ ಶಿಖರವನ್ನೇರುವವನ ಮೇಲೆ ಸದಾ ಎಚ್ಚರ ಗಣ್ಣಿಟ್ಟಿರಬೇಕು. ಸೋಲು, ಆಘಾತಗಳಿಗೆ ಒಳಗಾದವರನ್ನು ನಿರ್ಲಕ್ಷಿಸಬಾರದು. ಅವರು ಪೆಟ್ಟು ತಿಂದ ಸರ್ಪಗಳಿದ್ದಂತೆ. ಅವರನ್ನು ಕೆಣಕಬಾರದು. ಇಂದಿನ ಅಲ್ಪ ಜೀವಿಗಳೇ ನಾಳಿನ ಗಂಡಾಂತರ ಜೀವಿಗಳಾಗಬಹುದು.

ಚುನಾವಣೆಗಳಲ್ಲಿ ಸೋತಪಕ್ಷವು ಕೆಲವು ಕಾಲ ಸುಮ್ಮನಿದ್ದು

ನಂತರ ಬರುವ ಚುನಾವಣೆಗಳಲ್ಲಿ ತೀವ್ರ ಪ್ರಯತ್ನಗಳನ್ನು ನಡೆಸುತ್ತವೆ. ಮೆಕಿಯಾವೆಲ್ಲಿಯು ಹೇಳುವಂತೆ, ರಾಜ್ಯಾಂಗದ ಏಕವಾಕ್ಯತೆಯನ್ನು ಸಿಂಧುವೆಂದು ಪರಿಗಣಿಸಲು ಸಾಧ್ಯವಿಲ್ಲ. ಹೊಸ ಆಳ್ವಿಕೆಯಲ್ಲಿ ಉಂಟಾಗುವ ರಾಜಕೀಯ ಬದಲಾವಣೆಗಳಿಂದ ವಿರೋಧಿಚಳುವಳಿಗಳು ಉಂಟಾಗಬಹುದು. ಅನೇಕರಿಗೆ ಅದು ಹೊಸಬಗೆಯ ಶೋಷಣೆ ಎನಿಸಬಹುದು. ಒಬ್ಬನಿಗೆ ಅಮೃತವಾದುದು ಇನ್ನೊಬ್ಬನಿಗೆ ವಿಷವಾಗುವ ಸಾಧ್ಯತೆ ಇದೆ.

ದುರುಪಯೋಗಕ್ಕೆಳಸುವ ಸ್ವಾರ್ಥಿಗಳು, ತಿರಸ್ಕಾರ ಸೋಲುಗಳಿಗೆ ಸಿಕ್ಕಿಕೊಂಡು ಪುನರ್ ಸಿದ್ಧಿಗಾಗಿ ಪುನರ್‌ಕ್ರಾಂತಿ ನಡೆಸಲೆತ್ನಿಸುವವರು, ಇವರೇ ಮೊದಲಾದವರುಗಳಿಂದ ರಾಜನಿಗೆ ಪ್ರಾಣಾಪಾಯವಿದೆ. ಹೊಸ ಆಳ್ವಿಕೆಯ ಹೊಸದರಲ್ಲಿ ಹೊಸ ಕ್ರಾಂತಿಯ ಸಂಭವ ಕಟ್ಟಿಟ್ಟದ್ದೇ. ಏನೇ ಆದರೂ ಪ್ರತಿ ಕ್ರಾಂತಿ ತಪ್ಪಿದ್ದಲ್ಲ. ಮೆಕಿಯಾವೆಲ್ಲಿಯು ಹೇಳುವಂತೆ, "ರಾಜರು ಸ್ಥಾನ ಭ್ರಷ್ಟ ಜನರಿರುವವರೆಗೂ ಎಂದಿಗೂ ಸುರಕ್ಷಿತರಲ್ಲ. ಹೊಸ ಪರಿಹಾರದಿಂದ ಹಳೆಯ ಗಾಯ ಮಾಯುವಾಗುವುದಿಲ್ಲ." ಇಂತಹ ಸಂದರ್ಭಗಳಲ್ಲಿ ಪರಿಹಾರ ಮಾರ್ಗವೆಂದರೆ ಅತೃಪ್ತ ಅಧಿಕಾರ ಹೀನರಿಗೆ ಅಧಿಕಾರ ನೀಡುವುದು ಮತ್ತು ಆಜನ್ಮದ್ವೇಷ ವಿರೋಧ ಪಕ್ಷೀಯರನ್ನು ಮುಗಿಸಿಬಿಡುವುದು. ರಾಜ್ಯದ ಸಂಭದ್ರತೆಗೆ ಒಮ್ಮೊಮ್ಮೆ ಇಂತಹ ಉಗ್ರ ಹೆಜ್ಜೆಗಳು ಅತ್ಯಗತ್ಯ. ಆದರೆ ಇಂತಹ ಉಗ್ರಕ್ರಮಗಳ ಬಗ್ಗೆ ಆಡುವುದು ಸುಲಭ, ಮಾಡುವುದು ಕಷ್ಟ. ಹಳೆಯ ಆಡಳಿತದ ಉಪ್ಪುತಿಂದವರು, ಅದರಿಂದ ಲಾಭ ಹೊಂದಿದ ಅಪಾರ ಮಂದಿ ಸುಸಂಘಟಿತರಿರುತ್ತಾರೆ. ಅವರ ಬಗ್ಗೆ ಎಚ್ಚರಿಕೆಯಿಂದಿರಬೇಕು. ದೇಶದಲ್ಲಿ ಸ್ಥಿರತೆ-ಭದ್ರತೆಗಳು ಉಂಟಾಗಬೇಕಾದರೆ ಕ್ರೌರ್ಯ, ಕೊಲೆಪಾತಕಗಳ

ದಂಡವನ್ನು ತೆರಲೇಬೇಕಾಗುತ್ತದೆ. ಯಾವ ರಾಜ್ಯವೂ ತನ್ನನ್ನು ಬುಡಮೇಲು ಮಾಡಲು ಸಂಚುಮಾಡಿದವರೊಂದಿಗೆ ತಾಳ್ಮೆಯಿಂದಿರಲು ಸಾಧ್ಯವಿಲ್ಲ. ಇವೆಲ್ಲವನ್ನೂ ಎದುರಿಸಬೇಕಾದರೆ ರಾಜನು ಬಲಿಷ್ಟನಾಗಿರಲೇಬೇಕು.

(೩) ಮೆಕಿಯಾವೆಲ್ಲಿಯ ರಾಜ್ಯಶಾಸ್ತ್ರದ ಉದ್ದಕ್ಕೂ ರಾಜನೀತಿ ಮತ್ತು ನೀತಿಶಾಸ್ತ್ರಗಳ ಅಸಂಗತೆಯನ್ನು ಕಾಣಬಹುದು. ಆಳುವ ದೊರೆ ಸಂಪ್ರದಾಯದ ಕಟ್ಟಿನಲ್ಲಿ, ನೀತಿಶಾಸ್ತ್ರದ ಆದರ್ಶ ಪ್ರಮಾಣಗಳ ಹಾದಿಯಲ್ಲಿ ರಾಜ್ಯಪಾಳಲು ಹೊರಟರೆ. ನೂರಾರು ಕಲ್ಲುಬಂಡೆಗಳ ಹಾರವನ್ನು ಕೊರಳಿಗೆ ಹಾಕಿಕೊಂಡು ಈಜಲು ಹೊರಟಂತೆಯೇ ಸರಿ. ಆದರೆ ಸಾಂಪ್ರದಾಯಿಕ ನೈತಿಕತೆಯ ಸಂಕೇತಭಾಷೆಗಳನ್ನು ಬಳಸುವುದರಲ್ಲಿ ಬಲುಚತುರನಿರಬೇಕು. ಮೆಕಿಯಾವೆಲ್ಲಿಯ ಮಾತಿನಂತೆ, "ರಾಜನಾಗುವವನು ಒಳ್ಳೆಯವನಾಗಿರಕೂಡದೆಂದು ತನಗೆ ತಾನೇ ಕಲಿತಾಗ ಸ್ವಯಂ ನಿರ್ವಾಹಕನಾಗಬಲ್ಲನು, ಮತ್ತು ಈ ವಿದ್ಯೆಯನ್ನು ಬಳಸುವಲ್ಲಿ ಯುಕ್ತಾಯುಕ್ತ ಪರಿಜ್ಞಾನ ಪ್ರತಿಸಮಯದಲ್ಲೂ ಇರಬೇಕು." ಹಾಗೆಂದ ಮಾತ್ರಕ್ಕೆ ಸಾಧ್ಯವಿದ್ದ ಕಡೆಗಳಲ್ಲೆಲ್ಲಾ ರಾಜನು ಶಿಷ್ಟನಾಗಿರುವ ಬದಲು ದುಷ್ಟನಾಗಿರಬೇಕು ಎಂದಲ್ಲ. ಸಾಂಪ್ರದಾಯಿಕ ನೈತಿಕತೆಯ ವಿರೋಧಿಯಲ್ಲ ಮೆಕಿಯಾವೆಲ್ಲಿ. ಆದರೆ ಅವುಗಳಿಗೇ ಜೋತು ಬೀಳಬಾರದೆಂಬುದು ಅವನ ಮತ. ಅವನು ಹೇಳುತ್ತಾನೆ: "ನಮ್ಮ ಕಾಲದ ಸತ್ಯವೆಂದರೆ, ಮಹತ್ಕಾರ್ಯಗಳನ್ನು ಎಸಗಿದ ರಾಜರು ಒಳ್ಳೆಯ ನಂಬಿಕೆಗಳಲ್ಲಿ ಇಟ್ಟಿದ್ದ ಗೌರವ ಅಷ್ಟಕ್ಕಷ್ಟೆ. ಅಲ್ಲದೆ ತಮ್ಮ ಕುಶಾಗ್ರಬುದ್ಧಿಯಿಂದ ಜನತೆಯ ಮನವನ್ನು ಉಲ್ಲೋಲ ಕಲ್ಲೋಲವಾಗಿಸಬಲ್ಲರು." ಯುಕ್ತಾಯುಕ್ತ ವಿವೇಚನೆಯುಳ್ಳ ರಾಜ ತನ್ನ ಹಿತಾಸಕ್ತಿಗಳಿಗೆ ಧಕ್ಕೆಯೊದಗಿದಾಗ

ನಂಬಿಕೆಗಳನ್ನುಳಿಸಿಕೊಳ್ಳಲು ಯತ್ನಿಸುವುದಿಲ್ಲ. ಕಾರ್ಯಸಾಧನೆಗೆ ಏನನ್ನಾದರೂ ಸರಿಯೆ ಅದನ್ನು ಮಾಡಲು ಅವನು ಸಿದ್ಧನಿರು ತ್ತಾನೆ. ಭವ್ಯವಾದ ಆಡಳಿತವನ್ನು ನಡೆಸಬೇಕಾದರೆ ಕಾಲಕಾಲಕ್ಕೆ ತಕ್ಕಂತೆ ನೈತಿಕ ನಿಯಮಗಳನ್ನು ಬದಲಾಯಿಸುತ್ತಿರಬೇಕು. ಉನ್ನತ ಗುರಿ ಸಾಧನೆಗೆ ಉದ್ದೇಶ ಪೂರ್ವಕವಾಗಿ ರಾಜನು ನೀತಿ ಸೂತ್ರಗಳನ್ನು ಕೈಬಿಟ್ಟಲ್ಲಿ ರಾಜ್ಯದ ಶಕ್ತಿ ಅವನ ಹಸ್ತಗತವಾಗು ವುದು. ಮೋಸ, ವಂಚನೆ, ತಂತ್ರಗಳು ಅಗತ್ಯವೆನಿಸಿದರೂ, ಹಠಮಾರಿತನದಿಂದ ಬಳಸಬಾರದು. ಮಿತವಾಗಿ ಬಳಸಬೇಕು. ರಾಜನು ದಯಾವಂತನೂ, ನಂಬಿಕಸ್ತನೂ, ಪ್ರಾಮಾಣಿಕನೂ, ಧಾರ್ಮಿಕನೂ ಆಗಿರುವುದು ಒಳ್ಳೆಯದು. ಹಾಗಾಗಲು ಯತ್ನಿಸು ವುದೂ ನ್ಯಾಯವೇ. ಆದರೆ ಸಮಯಬಂದಾಗ ಅವುಗಳನ್ನು ಕಿತ್ತೊಗೆಯಲೂ ಸಿದ್ಧನಿರಬೇಕು. ರಾಜರು, ಅದರಲ್ಲೂ ಹೊಸ ದಾಗಿ ಸಿಂಹಾಸನವನ್ನೇರಿದವರು, ಜನರು ಒಳ್ಳೆಯದೆಂದು ಹೇಳಿದ್ದೆಲ್ಲವನ್ನೂ ತಲೆಗೆ ಹಚ್ಚಿಕೊಳ್ಳಬಾರದು. ಏನಿದ್ದರೂ ಗಾಳಿಬಂದಾಗ ತೂರಿಕೊಳ್ಳುವವನಾಗಿರಬೇಕು. ಬದಲಾವಣೆಗಳು ಕಲಿಸಿದ, ಕಲಿಸುವ ಪಾಠಗಳಿಗೆ ತಕ್ಕಂತೆ ಪರಿವರ್ತಿತನಾಗುವ ಪ್ರವೃತ್ತಿಯುಳ್ಳವನಾಗಿರಬೇಕು. ಸಾಧ್ಯವಿರುವಷ್ಟು ಮಟ್ಟಿಗೆ ಒಳ್ಳೆಯವನಾಗಿರಬೇಕು. ಸಮಯಬಿದ್ದರೆ ಕೆಟ್ಟುದನ್ನು ಮಾಡಲೂ ಸಿದ್ಧಹಸ್ತನಾಗಿರಬೇಕು. ರಾಜ್ಯದ ಗುರಿ ಸಾಧನೆಗೆ ಸಕಲ ಸಾಧನ ಗಳನ್ನೂ ಬಳಸಿಕೊಳ್ಳಬಲ್ಲ ಸಮರ್ಥನಾಗಿರಬೇಕು.

ಪ್ಲೇಟೋ, ಥಾಮಸ್ ಮತ್ತು ಆಗಸ್ಟೈನರ ದೃಷ್ಟಿಯಲ್ಲಿ, ನೀತಿಯನ್ನು ಎತ್ತಿಹಿಡಿಯಲಾರದ ರಾಜ್ಯ ಇದ್ದರೂ ಒಂದೇ ಸತ್ತರೂ ಒಂದೇ. ರಾಜ್ಯವಿರುವುದೇ ನಂಬಿಕೆ, ಧರ್ಮ, ಮಾನವತೆ ಮತ್ತು ಮತಧರ್ಮಗಳಿಗೆ, ಎಂದು ಅವರ ವಾದ.

ಆದರೆ ಮೇಲೆ ತಿಳಿಸಿದ ವಾದಸರಣಿಯಂತೆ ಮೆಕಿಯಾವೆಲ್ಲಿಯು ಈ ಎಲ್ಲ ವಾದಗಳನ್ನು ತಿರಸ್ಕರಿಸುತ್ತಾನೆ. ನೈತಿಕವಾಗಿಯಾಗಲಿ, ಅನೈತಿಕವಾಗಿಯಾಗಲಿ, ಏನಿದ್ದರೂ ಅಧಿಕಾರ ರಾಜ್ಯನಿರ್ವಹಣೆಗೆ ಮೀಸಲು. ಒಮ್ಮೆ ಸ್ಥಿರವಾಗಿ ಸತ್ವಪೂರ್ಣವಾಗಿ ಸ್ಥಾಪಿತ ವಾದುದರ ಬಗ್ಗೆ ಏನಾದರೂ ಹೇಳಬಹುದೇ ವಿನಾ, ರಾಜ್ಯ ನಿರ್ವಹಣೆಗೆ ವ್ಯಾವಹಾರಿಕವಾಗಿ ಬಳಸುವ ಅಧಿಕಾರವನ್ನು ಕುರಿತು ಹೇಳುವುದು ಏನೂ ಇಲ್ಲ.

(೪) ಜನತೆಯ ಮನೋಭೂಮಿಯಲ್ಲಿ ಬೇರುಬಿಟ್ಟ ಸಾಂಪ್ರದಾಯಿಕ ರೂಢಭಾವನೆಗಳನ್ನು ಬಳಸಿಕೊಳ್ಳುವುದು ರಾಜರಿಗೆ ಇರತಕ್ಕ ಅತ್ಯಂತ ಪರಿಣಾಮಕಾರೀ ತಂತ್ರವಾಗಿದೆ. ಈ ಸಾಂಪ್ರದಾಯಿಕ ಮನೋಭಾವನೆಗಳು ಮತೀಯ ಅಂಧ ಶ್ರದ್ಧರಲ್ಲಿ ಅತಿ ಆಳವಾಗಿ ಬೇರೂರಿರುತ್ತದೆ. ಆಳುವ ರಾಜ ಮತೀಯವ್ಯಕ್ತಿ ಆಗಿರಬಾರದು. ಆದರೆ ಇತರರಲ್ಲಿನ ಆ ನಂಬಿಕೆ ಶ್ರದ್ಧೆಗಳನ್ನು ಬಳಸಿಕೊಳ್ಳದೆ ಬಿಡಬಾರದು. ಅದಕ್ಕಾಗಿ ರಾಜನು ಧಾರ್ಮಿಕ ಪುನರುತ್ಥಾನಕ್ಕಾಗಿಯೇ ಅವತರಿಸಿದ ಮಹಾಪುರುಷನಂತೆ ನಟಿಸುತ್ತಿರಬೇಕು.

'ಡಿಸ್ಕೋರ್ಸಸ್' ಗ್ರಂಥದಲ್ಲಿ ಹೇಳಿರುವಂತೆ, ದೊರೆಗಳು ಮತ್ತು ಗಣತಂತ್ರಗಳು ಭ್ರಷ್ಟಾಚಾರದಿಂದ ಮುಕ್ತರಾಗಿ ಪಟ್ಟ ಭದ್ರರಾಗಬೇಕಾದರೆ ಎಲ್ಲಾ ಧಾರ್ಮಿಕ ಆಚಾರಗಳಿಗೂ ಗೌರವ ವಿತ್ತು, ಯೋಗ್ಯಸ್ಥಾನಮಾನಗಳನ್ನೀಯಬೇಕು. ಮತೀಯ ಅವನತಿ ಗಿಂತ ಮತ್ತೊಂದು ದೇಶ ವಿನಾಶದ ಕಾರ್ಯ ಇಲ್ಲ. ಮತನಾಶ ಅರ್ಥಾತ್ ರಾಜ್ಯನಾಶ. ಆದ್ದರಿಂದ ತಮ್ಮ ತಮ್ಮ ದೇಶಗಳ ಮತಗಳ ಆಧಾರದ ಮೇಲೆ ರಾಜ್ಯವನ್ನು ಸುಭದ್ರಗೊಳಿಸುವುದು

ಗಣತಂತ್ರಗಳ ಪ್ರಮುಖರ ಮತ್ತು ಪ್ರಜಾಪಾಲಕರ ಮುಖ್ಯ ಕರ್ತವ್ಯ.

"ನಮ್ಮ ಮತಧರ್ಮಗಳು ಐಹಿಕಭೋಗ ಮತ್ತು ವಸ್ತುವಿಚಾರ ಗಳ ಬಗೆಗೆ ಹೇಸಿಗೆ ಹುಟ್ಟುವಂತೆ ಮಾಡಿ ಅತಿಶಯ ಆನಂದ ವನ್ನು ಹೊಂದುವಂತೆ ಮಾಡುತ್ತವೆ..........ನಮ್ಮ ಮತಗಳು ಆತ್ಮೋನ್ನತಿಯನ್ನು ಸಾರುವುದೇ ಆದರೆ ನಾವು ಮಹತ್ಕಾರ್ಯ ಗಳನ್ನು ಸಾಧಿಸುವ ಬದಲು ಕಷ್ಟ ಕಾರ್ಪಣ್ಯಗಳ ಬಲೆಗೆ ಸಿಲುಕಿ ಕೊಂಡಂತೆಯೇ ಸರಿ," ಎನ್ನುತ್ತಾನೆ ಮೆಕಿಯಾವೆಲ್ಲಿ.

ಆದರೆ ಈ ಸಾಧನಗಳನ್ನು ಎಚ್ಚರಿಕೆಯಿಂದ ಬಳಸಬೇಕು. ತಾವು ಶೋಷಣೆಗೆ ಒಳಗಾಗಿದ್ದೇವೆ ಎನ್ನಿಸಿದರೆ, ಜನರು ಮತೀಯ ಬೋಧೆಗಳ ಬಗ್ಗೆ ತಿರಸ್ಕಾರ ತೋರುವ ಸಂಭವವಿರುತ್ತದೆ. ಮತ ಧರ್ಮವು ಸಾರ್ವಜನಿಕ ವಿಧೇಯತೆಯ ನಿರ್ಮಾಣಕ್ಕೆ ಅತ್ಯುತ್ತಮ ಸಾಧನವಾಗಿದೆ. ಆದರೆ ಮಾನವ ಕೇವಲ ಧರ್ಮ ನಿಷ್ಠವಾಗಿಯೇ ಬಾಳಲು ಸಾಧ್ಯವಿಲ್ಲ. ಐಹಿಕ ಸಾಧನಗಳು ಪಾರಮಾರ್ಥಿಕ ಸುಖಕ್ಕೆ ಅತ್ಯವಶ್ಯಕ.

ಮೆಕಿಯಾವೆಲ್ಲಿಯ ತಂತ್ರ ವಿಧಾನಗಳೆಲ್ಲವೂ ಮಾನವನ ಮೂಲ ಭೂತ ಅಗತ್ಯಗಳನ್ನು ಪೂರೈಸುವುದೇ ಆಗಿದೆ. ಆದರೆ ಮಾನವ ಸದಾ ತಂತ್ರದ ಬಲೆಗೆ ಬೀಳುವ ಪ್ರಾಣಿಯಲ್ಲ, ಇದಕ್ಕೆ ಪ್ರತಿಯಾಗಿ ತನ್ನದೇ ಆದ ಇಷ್ಟಾನಿಷ್ಟಗಳನ್ನೂ, ದ್ವೇಷಾಸೂಯೆ, ಪ್ರೀತಿವಿಶ್ವಾಸ ಗಳನ್ನು ಹೊಂದಿರುವ ಜೀವಿ, ಅವನು ರಾಜಕೀಯ ನಿಯಂತ್ರಣಕ್ಕೆ ಸಿಗಬೇಕಾದರೆ, ಅಲ್ಲಿ ಅವನ ದೃಷ್ಟಿನೆಲೆಗಳೂ ಅಲ್ಪ ಸ್ವಲ್ಪ ವಾಗಿಯಾದರೂ ಇರಬೇಕು. ಇಂಥ ಸಂದರ್ಭಗಳಲ್ಲಿ, ಆಳುವವರಿಗೆ– ಆಳಿಸಿಕೊಳ್ಳುವವರಿಗೆ ಸಮರ ಸಂಭವವುಂಟು. ಅಂಥ ಸಂದರ್ಭ

ಗಳಲ್ಲಿ ಮೆಕಿಯಾವೆಲ್ಲಿಯ ಸಿದ್ಧಾಂತಗಳು ಜೀವಂತ ದರ್ಶನ ಗಳಂತಿವೆ :

ಸರ್ಕಾರವನ್ನು ಸುಧಾರಿಸುವವರು, ದಕ್ಷರೂ, ಸಮರ್ಥರೂ ಆಗಿದ್ದು, ಹಳೆಯ ವಿಧಾನಗಳ ಬಾಹ್ಯ ಸಾದೃಶ್ಯತೆಗಳನ್ನಾದರೂ ಹಾಗೆಯೇ ಉಳಿಸಿಕೊಳ್ಳಬೇಕು. ಏಕೆಂದರೆ, ಇದರಿಂದ ಜನ ತಮ್ಮ ಸಮಾಜದಲ್ಲಿ ಅಂತಹದ್ದೇನೂ ಬದಲಾವಣೆಗಳಾಗಿಲ್ಲ ಎಂದು ಭಾವಿಸುವರು. ಆಂತರಿಕದಲ್ಲಿ ಅಪಾರವಾಗಿ ಒಳತಿರುಳೇ ಬದಲಿಸಿದ್ದರೂ ಅದು ಹೊರ ನೋಟಕ್ಕೆ ಕಾಣದೆ, ಯಾವ ಬದಲಾವಣೆ ಗಳೂ ಆಗಿಲ್ಲ ಎಂದು ಭಾವಿಸಿ ತೃಪ್ತರಾಗಿ ಬಿಡುವರು. ಆದ ಕಾರಣ, ಹೊರನೋಟದ ಸ್ವರೂಪಗಳನ್ನು ಬದಲಿಸದೇ ಇರುವ ವರೆಗೆ, ಪರಂಪರೆಯ ಸಂಕೇತಗಳನ್ನೂ ನಶಿಸದೇ ಇರುವ ವರೆಗೆ ರಾಜನು ಸಂಸ್ಥೆಗಳ, ಸಾಂಘಿಕವ್ಯವಸ್ಥೆಗಳ ಮೂಲಭೂತ ಸತ್ವ ವನ್ನು, ಬದಲಿಸಲು ಶಕ್ತನಿರುತ್ತಾನೆ. ಜನ ನಾಟಕವನ್ನು ನೋಡು ವಾಗ ಪಾತ್ರಧಾರಿಯ ಪಾತ್ರವನ್ನಷ್ಟೇ ಕಂಡು ಆನಂದಿಸುತ್ತಾರಲ್ಲದೆ, ಆ ಪಾತ್ರದ ವೇಷಧಾರಿ ಯಾರು ಎಂದು ಗಮನಿಸ ಹೋಗುವು ದಿಲ್ಲ. ಅದು ಅವರಿಗೆ ಬೇಕಿರುವುದೂ ಇಲ್ಲ. ರಾಮಾಯಣ ನಾಟಕದಲ್ಲಿ ರಾಮನ ವೇಷ ಇದ್ದರೆ ಸರಿ. ಅವನು ರಾವಣನೇ ಆಗಿದ್ದರೂ ಅವರಿಗೆ ಚಿಂತೆಯಿಲ್ಲ.

ನ್ಯಾಯವಿಲ್ಲದ ನ್ಯಾಯಾಲಯಗಳನ್ನು, ಸ್ಪರ್ಧೆಯಿಲ್ಲದ ಚುನಾವಣೆಗಳನ್ನೂ, ತತ್ವದ ತಳಹದಿಯಿಲ್ಲದ ಮತಧರ್ಮ ಗಳನ್ನೂ ಹೊಂದ ಬೇಕಾದರೆ, ಅಂತಹ ನ್ಯಾಯಾಲಯ, ಚುನಾವಣೆ, ಮತಧರ್ಮಗಳ ಹೊರನೋಟದ ಸ್ವರೂಪ ಸಂಕೇತಗಳು ಔಚಿತ್ಯ ಪೂರ್ಣಗಳಾಗಿರಬೇಕು. ಹೀಗೆಂದರೆ ಜನ ಮೋಸಹೋಗಲು ಸಿದ್ಧರಿರುತ್ತಾರೆ ಎಂದಲ್ಲ. ಅವರು ಕೆಲವೇ ವಿಚಾರಗಳಲ್ಲಿ

ಆಸಕ್ತರಾಗಿದ್ದು ಉಳಿದುದರಲ್ಲಿ ಬೇಜವಾಬ್ದಾರರಾಗಿರುತ್ತಾರೆ ರಾಜತಂತ್ರವಿಶಾರದನಾದ ರಾಜನು ಈ ಬೇಜವಾಬ್ದಾರಿ ಕ್ಷೇತದಲ್ಲಿ ತನ್ನ ಕಾರ್ಯಾರಂಭ ಮಾಡುತ್ತಾನೆ. ಜನ ನಿಜವಾಗಿ ಏನಾಗಿದ್ದಾರೆ ಎಂಬುದನ್ನು ತಿಳಿದು, ಹೊರನೋಟಕ್ಕೇ ಅವರು ಮೋಸ ಹೋಗಿದ್ದಲ್ಲಿ ಮೇಲಿನ ಪರಂಪರೆಯ ಪದರವನ್ನು ಹಾಗೆಯೇ ಉಳಿಸಿಕೊಂಡು ಬಂದು, ಒಳಗಿನ ತಿರುಳನ್ನು ಬದಲಿಸುತ್ತಾ ಹೋಗುತ್ತಾನೆ.

ಮೆಕಿಯಾವೆಲ್ಲಿಯ ಈ ಸಿದ್ಧಾಂತಗಳು ಹೊರನೋಟದಲ್ಲಿ ಸಾಂಪ್ರದಾಯಿಕವಾಗಿ ಕಂಡುಬಂದರೂ, ಒಳನೋಟದಲ್ಲಿ ಉಗ್ರ ಕ್ರಾಂತಿವಾದದತ್ತ ಹೊರಳಿರುವುದು ಕಂಡು ಬರುತ್ತದೆ.

೧೫. ಸ್ವಾತಂತ್ರ್ಯ

"ಗಣತಂತ್ರಗಳಿಗೆ ಅತ್ಯುತ್ತಮ ಸಂವಿಧಾನಗಳನ್ನು ಇತ್ತಿರುವ ಶಾಸಕರೆಲ್ಲರೂ ಸ್ವಾತಂತ್ರ್ಯದ ಸಂರಕ್ಷಣೆ-ಪರಿಪಾಲನೆಗಳ ಬಗ್ಗೆ ಅಗತ್ಯ ಎಚ್ಚರಿಕೆಗಳನ್ನಿತ್ತಿದ್ದಾರೆ" ಎಂದು ಮೆಕಿಯಾವೆಲ್ಲಿ ಹೇಳು ತ್ತಾನೆ. ಅಧಿಕಾರ ಸಮಸ್ಯೆಯಂತೆಯೇ, ಸ್ವಾತಂತ್ರ್ಯವು ಯಾರ ಕೈಲಿದ್ದರೆ ಸುರಕ್ಷಿತ ಎಂಬ ಪ್ರಶ್ನೆಯೂ ಇದ್ದೇ ಇದೆ. ಈ ವಿಚಾರ ವನ್ನು ಅಮೂರ್ತ ತತ್ವ ಜ್ಞಾನದಿಂದ ಚರ್ಚಿಸುವ ಬದಲು, ಪ್ರಾಯೋಗಿಕ ರಾಜ್ಯಶಾಸ್ತ್ರದ ಮೂಲಕ ಮಥಿಸುವುದು ಬೇಕು. ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರಲ್ಲಿ ಯಾರ ಕೈಗೆ ಸ್ವಾತಂತ್ರ್ಯ ಅಧಿಕಾರಗಳು ದೊರೆತರೆ ಒಳಿತು ಎಂಬುದು ಅಭ್ಯಸನೀಯ ವಿಚಾರವಾಗಿದೆ.

ಯಾವೊಂದು ವರ್ಗದವರಲ್ಲೂ ಪರಿಪೂರ್ಣನಿಷ್ಣಾತರಿರಲು ಸಾಧ್ಯವಿಲ್ಲ. ಉಭಯ ಪಕ್ಷಗಳಿಗೂ ಬಲವಾದ ವಾದಾಂಶಗಳಿದ್ದರೂ,

ಪರಿಣಾಮಗಳನ್ನು ಗಮನಿಸಿದರೆ ಅಲ್ಪಸಂಖ್ಯಾತರತ್ತ ವಾಲ ಬೇಕಾಗುತ್ತದೆ. ಅಲ್ಪಸಂಖ್ಯಾತರ ಕೈಗೆ ಅಧಿಕಾರ ಸೂತ್ರಗಳನ್ನಿಟ್ಟರೆ ಕೀರ್ತಿಕಾಮನೆಗಳ ಆಸೆಗಾಗಿ, ಸುಲಭವಾಗಿ ಗುರುತರ ಜವಾಬ್ದಾರಿಯನ್ನು ಹೊರುತ್ತಾರೆ. ಬಹುಸಂಖ್ಯಾತರ ಕೈಗೆ ಇಟ್ಟರೆ ಭಿನ್ನಾಭಿಪ್ರಾಯಗಳ ಮೂಲಕ ಉದ್ಭವಿಸುವ ಕೋಟಲೆಗಳು ಅನಂತವಾದುವು. ಬಹು ಸಂಖ್ಯಾತವರ್ಗದವರು ಅಧಿಕಾರ ದಂಡ ಹಿಡಿದು ಚಲಾಯಿಸುವುದಕ್ಕಿಂತ, ಅಲ್ಪಸಂಖ್ಯಾತರ ಕೈಗಿಡಲು ಕುತೂಹಲಿಗಳಾಗಿರುತ್ತಾರೆ.

ಅಲ್ಪಸಂಖ್ಯಾತರು ಅಧಿಕಾರದಲ್ಲಿ ಇಲ್ಲದಿದ್ದರೆ ಬಹುಸಂಖ್ಯಾತರಿಗಿಂತ ಹೆಚ್ಚಿನ ತೊಂದರೆಯನ್ನುಂಟು ಮಾಡಬಲ್ಲರು. ಅಲ್ಪ ಸಂಖ್ಯಾತರ ಆಶೆ ಆಕಾಂಕ್ಷೆಗಳು ಏಕಾ ಏಕಿ ಭಗ್ನವಾಗಲಾರವು. ಹಾಗೆಂದ ಮಾತ್ರಕ್ಕೆ ಅಲ್ಪಸಂಖ್ಯಾತ ವರ್ಗದವರು ಸರ್ವೋತ್ತಮ ಸ್ವಾತಂತ್ರ್ಯ ರಕ್ಷಕರೆಂದೇನೂ ಅಲ್ಲ. ಅವರು ಅಧಿಕಾರ ಹೀನರಾದರೆ ಸಮಾಜ ಹೆಚ್ಚು ಕಷ್ಟ ಕಾರ್ಪಣ್ಯಗಳಿಗೆ ಸಿಲುಕುತ್ತದೆ ಎಂಬಷ್ಟೇ ಮೆಕಿಯಾವೆಲ್ಲಿಯ ಅಭಿಪ್ರಾಯ.

೧೬. ಶಾಸನಾಧಿಕಾರ

ಅರಿಸ್ಟಾಟಲನಂತೆ ಮೆಕಿಯಾವೆಲ್ಲಿಯೂ ಶಾಸನಾಧಿಕಾರಕ್ಕೆ ಮಾರುಹೋಗಿದ್ದಾನೆ. ಅಲ್ಪಸಂಖ್ಯಾತವರ್ಗ, ಬಹುಸಂಖ್ಯಾತ ವರ್ಗ. ಗುಣಸತ್ವವರ್ಗಗಳಲ್ಲಿ ಯಾರೇ ಅಧಿಕಾರಕ್ಕೆ ಬರಲಿ. ಎಲ್ಲ ಆಡಳಿತಗಾರರಿಗೂ ಹಾಗೂ ಸ್ವಾತಂತ್ರ್ಯ ಮತ್ತು ಭದ್ರತೆಗಳಿಗಾಗಿ ಎಲ್ಲ ಬಗೆಯ ಸರ್ಕಾರಕ್ಕೂ ಶಾಸನ—ಕಾನೂನುಗಳ ಅಗತ್ಯವಿದೆ. ಶಾಸನನಿಯಂತ್ರಣ ಇಲ್ಲದಿದ್ದರೆ ಜನತೆಯಾಗಲೀ ರಾಜನಾಗಲೀ, ಇಬ್ಬರೂ ಹಾದಿ ತಪ್ಪುವವರೇ. ಆದ್ದರಿಂದ ಜನತೆಯನ್ನಾಗಲೀ.

ರಾಜರನ್ನಾಗಲೀ ದೂಷಿಸಬೇಕಾದ ಅಗತ್ಯವಿಲ್ಲ. ದೋಷಗಳು ಜನತೆಗೇನೊ ಸ್ವಾಭಾವಿಕ. ಆದರೆ ಅವುಗಳಹೊಣೆ ಆಳುವ ರಾಜರದು. ಜನರು ಎಂಥವರಾಗಿದ್ದರೂ ಕುಶಾಗ್ರ ಸಮರ್ಥಶಾಲಿ ಯಾದ ರಾಜ ಸುಶಾಸನದ ಆಳ್ವಿಕೆಯಿಂದ ಅವರನ್ನು ಸುಸ್ಥಿರ ಸುಭದ್ರ ಸರ್ಕಾರದ ಸತ್ಪ್ರಜೆಗಳನ್ನಾಗಿ ಮಾಡಲು ಸಾಧ್ಯವಿದೆ. ಒಂದು ದೃಷ್ಟಿಯಲ್ಲಿ ಜನರ ದೋಷಗಳಿಗಿಂತ ಆಳುವ ಜನರ ದೋಷಗಳಿಂದ ಹಾನಿ ಅಪಾರ. ಈ ಭಿನ್ನತೆಗೆ ಕಾರಣ ಅವರ ಏಕರೀತಿಯ ಸಹಜ ಸ್ವಭಾವಗಳಲ್ಲ, ತಮ್ಮ ಮೇಲಿನ ಅಧಿಕಾರ ಶಾಸನಗಳ ಬಗ್ಗೆ ಅವರು ನೀಡುವ ಹೆಚ್ಚು ಕಮ್ಮಿ ಗೌರವಗಳು ಹೇತುವಾಗಿವೆ.

ಪ್ರಜಾಪ್ರಭುತ್ವದಲ್ಲಿ ಶಾಸನ ನಿರ್ಮಾಣಕಾರರೂ, ಶಾಸನಕ್ಕೆ ಒಳಗಾಗುವವರೂ ಇಬ್ಬರೂ ಪ್ರಜೆಗಳೇ. ಆದರೂ ಅವರಿಂದಲೇ ನಿರ್ಮಿತವಾದ ಶಾಸನಗಳು ತಮ್ಮದೇ ಆದ ಅಧಿಕಾರವನ್ನು ಪಡೆಯುತ್ತವೆ. ಈ ಮಾತು ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಗಳಿಲ್ಲದ ಕಡೆ ಹೆಚ್ಚು ಒಪ್ಪುತ್ತದೆ. ಅಲ್ಲಿ ಅನೇಕತಲೆಗಳ, ತಿಳಿವಳಿಕೆ ಗಳ, ಅನುಭವಗಳ ವಿದ್ಯುದಾಲಿಂಗನವಾಗಿರುತ್ತದೆ. ಅಂಥ ಕಡೆ ಶಾಸನ ನಿರ್ಮಾಣ ಅನೇಕ ಹಂತಗಳಲ್ಲಿ ನಿರ್ಧಾರಿತ ವಿಧಾನದ ಫಲ ವಾಗಿ ಸಾಂಘಿಕ ವ್ಯವಸ್ಥೆಗಳ ಅಂಗೀಕಾರವ ಅಗ್ನಿಪರೀಕ್ಷೆಗಳಲ್ಲಿ ಗೆದ್ದು ಕಾಲ ಗರ್ಭದಲ್ಲಿ ಬೆಳೆದು ಬಂದಿರುತ್ತದೆ. ಕಾನೂನು ಎಂದು ಕರೆಸಿಕೊಳ್ಳುವ ಚೂರು ಕಾಗದವೊಂದು ತನ್ನದೇ ಆದ ಅಧಿಕಾರ ವನ್ನು ಹೊಂದಿರುತ್ತದೆ. ಈ ಚೂರು ಕಾಗದಕ್ಕೆ ಬೆಲೆಕೊಟ್ಟು ಅಧಿಕಾರ ಮಾನ್ಯ ಮಾಡುವುದೇ ಆದರೆ ಸರ್ಕಾರ ಸ್ಥಿರವಾಗಿರ ಬಲ್ಲದು ಎಂಬುದು ಮೆಕಿಯಾವೆಲ್ಲಿಯ ಮತ. ಕಾನೂನಿನ ಪರಿಸರಣ ದೊಳಕ್ಕೆ ಬಹು ಸಂಖ್ಯಾತರನ್ನು ಸುಲಭವಾಗಿ ಒಳಗಾಗಿಸಬಹುದು. ಆದರೆ ಅಲ್ಪ ಸಂಖ್ಯಾತವರ್ಗದವರು, ಕಾನೂನು ತಮ್ಮನ್ನು

ವಂಚಿಸುತ್ತಿದೆ ಎಂದು ತಿಳಿಯುತ್ತಾರೆ. ಅಲ್ಲದೆ ತಮ್ಮ ಸ್ವಾರ್ಥ ಸಾಧನೆಗಳಿಗಾಗಿ ಅದನ್ನು ಬಳಸಿಕೊಳ್ಳಲು ಹಂಚಿಕೆ ಹೂಡುತ್ತಾರೆ. ಏನೇ ಆಗಲಿ ಪ್ರಜಾತಂತ್ರದ ವಾತಾವರಣದಲ್ಲಿ ಶಾಸನಾಧಿಕಾರವು ಸಾಕಷ್ಟು ಚೆನ್ನಾಗಿ ಕೆಲಸಮಾಡುತ್ತದೆ ಎಂದು ಮೆಕಿಯಾವೆಲ್ಲಿಯು ಭಾವಿಸುತ್ತಾನೆ.

೧೭. ಆಯ್ಕೆ

ಜನಸಾಮಾನ್ಯವರ್ಗವು ಆಳುವ ಸಾಮರ್ಥ್ಯವನ್ನು ಹೊಂದಿಲ್ಲದಿದ್ದರೂ, ತಮ್ಮನ್ನು ಆಳುವ ಜನರನ್ನು ಆಯ್ಕೆ ಮಾಡುವುದರಲ್ಲಿ ಮತ್ತು ರಾಜಕೀಯ ನೀತಿನಿರೂಪಣೆಗಳನ್ನು ಸಾಮೂಹಿಕವಾಗಿ ನಿರ್ಮಿಸುವುದರಲ್ಲಿ ನಿಷ್ಣಾತರಿರುತ್ತಾರೆ. ಹಾಗಾದರೆ ಜನತೆ ಅರಿತು, ನುರಿತ ಜನ ಅಥವಾ ರಾಜಕೀಯವನ್ನು ಕರತಲಾಮಲಕ ಮಾಡಿಕೊಂಡವರು ಎಂದಲ್ಲ, ತಮ್ಮ ನಾಯಕನ ಬಗ್ಗೆ ಸಮಗ್ರಭಾವನೆಗಳನ್ನು ಕ್ರೋಢೀಕರಿಸಿ ಪ್ರತಿಬಿಂಬಿಸಬಲ್ಲರು ಎಂದಷ್ಟೆ. ಎಲ್ಲಾ ಕಾಲದಲ್ಲಿಯೂ ಎಲ್ಲಾ ಜನರೂ ಮೋಸಹೋಗಲು ಸಾಧ್ಯವಿಲ್ಲ. ಆದ್ದರಿಂದ ಅಧಿಕಾರಕ್ಕೆ ಬರಲು ಆಶಿಸುವ ವ್ಯಕ್ತಿ ಮೂರ್ಖನೋ, ಠಕ್ಕನೋ ಆಗಿದ್ದರೆ ಅದು ಜನಕ್ಕೆ ಚೆನ್ನಾಗಿ ತಿಳಿದುಹೋಗುತ್ತದೆ. ಆದ್ದರಿಂದ "ತಮ್ಮ ನ್ಯಾಯ ನಿರ್ಣಾಯಕರನ್ನು ನಿರ್ಧರಿಸುವಲ್ಲಿ ದೊರೆಗಳಿಗಿಂತ ಪ್ರಜೆಗಳೇ ಅತ್ಯುತ್ತಮ ಆಯ್ಕೆಮಾಡಬಲ್ಲರು" ಎಂದು ಮೆಕಿಯಾವೆಲ್ಲಿಯು ಸಾರುತ್ತಾನೆ.

ಕೆಲವೊಮ್ಮೆ ಸಮಾನ ಪ್ರತಿಭಾಸಂಪನ್ನರು ಭಿನ್ನವೇದಿಕೆಗಳಲ್ಲಿ ಸರಿಸಮಾನವಾಗಿ ವರ್ತಿಸಿದರೆ ಜನ ಯಾರೊಬ್ಬರನ್ನೂ ಏಕಪಕ್ಷೀಯವಾಗಿ ಆರಿಸಲಾರರು. ಕೆಲವುಬಾರಿ ಉತ್ಸಾಹದ ಆವೇಶದಲ್ಲಿ ಉಪಯುಕ್ತತೆಯ ದೃಷ್ಟಿಯಲ್ಲಿ ಮಾರುಹೋಗುವುದೂ

ಉಂಟು. ಅಂತೆಯೇ ಆಳುವ ದೊರೆಗಳೂ ಅನೇಕಸಲ ತಮ್ಮ ಸ್ವಂತ ರಾಗಭಾವವಿಲಾಸಕ್ಕೆ ಬಲಿಯಾಗುವುದುಂಟು. ಈ ವಿಚಾರ ದಲ್ಲಿ ಪ್ರಜೆಗಳಿಗಿಂತ ರಾಜರ ಪರಿಣಾಮ ಹೆಚ್ಚಿನದು.

೧೮. ವಿಧಿವಾದ ಅಥವಾ ಅದೃಷ್ಟದೇವಿಯ ಲೀಲೆ

ವಾಸ್ತವಿಕವಾಗಿ ಮೆಕಿಯಾವೆಲ್ಲಿಗೆ ಮಾನವನ ಇತಿಮಿತಿಗಳ ಅರಿವು ಚೆನ್ನಾಗಿತ್ತು. ರಾಜಕೀಯ ಚದುರಂಗದಾಟದಲ್ಲಿ ಎಂತಹ ಕುಶಲ ಆಟಗಾರನಾದರೂ ಅವನ ಆಟವೂ ಸಾಗದ ಕಾಲ ವೊಂದಿರುತ್ತದೆ. ಆಗ ನಿಯಮಗಳು ಬದಲಾದರೂ, ಸಾಮಾಜಿಕ ವೈಪರೀತ್ಯದ ವ್ಯತ್ಯಾಸಗಳು ನವೀನ ಮಾರ್ಗಗಳನ್ನು ತೋರುತ್ತಲೇ ಇರುತ್ತವೆ. ಅತಿ ಕುಶಲಿ ಆಟಗಾರನು ಈ ಮಾರ್ಗಗಳನ್ನು ಸದಾ ಊಹಿಸಿ ಅಧೀನಗೊಳಿಸಿಕೊಳ್ಳಲು ಸಾಧ್ಯವಿರುತ್ತದೆ. ಈ ಅವ್ಯಕ್ತ ರಾಜಕೀಯ ಶಕ್ತಿಯನ್ನು ವಿಧಿ ಅಥವಾ ಅದೃಷ್ಟದೇವಿ ಎಂದು ಕರೆಯಬಹುದು.

ಅದೃಷ್ಟದೇವಿಯ ಕೈಗೆ ಆಡಳಿತಗಾರರು ಅಧಿಕಾರವೀಯ ಬಹುದು. ಆದರೆ ಆಕೆ ತಾನೇತಾನಾಗಿ ಅವುಗಳನ್ನು ಬಳಸಿ ಕೊಳ್ಳುತ್ತಾಳೆ. ಸಾಮಾನ್ಯವಾಗಿ ಅದೃಷ್ಟದೇವಿಯ ಕಾರ್ಯ ಸ್ವರೂಪವನ್ನು ಅರಿಯಬಹುದಾದರೂ, ಆಕೆಯನ್ನು ಮಾನವನು ತನ್ನ ತೊತ್ತನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ. "ಆಕೆ ನಮ್ಮ ಎಲ್ಲ ಕಾರ್ಯಗಳನ್ನೂ ಅರ್ಧ ಭಾಗದಷ್ಟೇ ಆಳುತ್ತಾಳೆ," ಎನ್ನುತ್ತಾನೆ ಮೆಕಿಯಾವೆಲ್ಲಿ. ಆ ಪ್ರಕಾರ ಉಳಿದರ್ಧ ಹೊಣೆ ನಮ್ಮದು ಅಥವಾ ಅದನ್ನು ಅವಳೇ ನಮ್ಮ ಪಾಲಿಗೆ ಬಿಟ್ಟಿದ್ದಾಳೆ. ಅದೃಷ್ಟ ದೇವಿಯ ವಿರುದ್ಧವಾಗಿ ಎಂದೂ ಸೆಣೆಸಲು ಹೋಗ

ಬಾರದು. ಸಾಧ್ಯವಿದ್ದಷ್ಟೂ ಅವಳನ್ನು ಉಪಾಯದಲ್ಲಿ ಒಲಿಸಿ ವಶಪಡಿಸಿಕೊಳ್ಳಬೇಕು.

ಮೆಕಿಯಾವೆಲ್ಲಿಯು 'ದಿ ಪ್ರಿನ್ಸ್' ಗ್ರಂಥದಲ್ಲಿ ಅದೃಷ್ಟ ದೇವಿಯ ನರ್ತನವನ್ನು ನದಿಗೆ ಹೋಲಿಸಿ, ಕಾವ್ಯಮಯವಾಗಿ ಚಿತ್ರಿಸಿದ್ದಾನೆ: "ಉಕ್ಕಿ ಭೋರ್ಗರೆದು, ಸೊಕ್ಕೇರಿ, ಸುತ್ತಣ ಪ್ರದೇಶಗಳಲ್ಲಿ ಜಲಪ್ರಳಯ ತಾಂಡವ ನೃತ್ಯವಾಡಿ, ಮಹಡಿ ಮನೆಗಳನ್ನು, ಗುಡಿ ಗೋಪುರಗಳನ್ನೂ ಕೊಚ್ಚಿ ನುಂಗಿ, ಗಿಡಮರಗಳನ್ನು ತೇಲಿಸಿ, ಇಕ್ಕೆಲಗಳ ಭೂಮಿಯನ್ನೂ ಕಬಳಿಸುತ್ತಾ, ಆವೇಶಭರಿತ ಕಾಳಿಯಂತೆ, ರಾಕ್ಷಸ ನಗರಿಯಿಂದ ಮೂಡಿಬಂದ ಯಮಲಂಕಿಣಿ ಯಂತೆ ಆರ್ಭಟಿಸಿ ಹರಿಯುವ ನದಿಗೆ ಅದೃಷ್ಟದೇವಿಯನ್ನು ಹೋಲಿಸಬಹುದು. ಅವಳ ಮುಂದೆ ಪ್ರತಿಯೊಬ್ಬರೂ ಪ್ರವಾಹದಲ್ಲಿ ತೇಲಿಕೊಂಡು ಹೋಗುವ ಹುಲ್ಲುಕಡ್ಡಿಯಿದ್ದಂತೆ. ಅವಳ ಪ್ರಕೋಪರೂಪ ಇಷ್ಟು ಭಯಂಕರವಾಗಿದ್ದರೂ, ಅದೇ ಅವಳು ಪ್ರಶಾಂತವಾಗಿ ಹರಿಯುವ ಕಾಲದಲ್ಲಿ, ಕಾಲುವೆಗಳಲ್ಲಿ ಪ್ರವಹಿಸುವಾಗ ಆ ಕರಾಳನೃತ್ಯ, ವಿನಾಶಭೀಕರತೆಗಳು ಇರುವು ದಿಲ್ಲ. ಆಗಿನ ನೋಟವೇ ಬೇರೆ. ಆಗ ನದಿಯು ಸ್ವರೂಪ ನಂದನವನದಲ್ಲಿ ಲಾಸ್ಯವಾಡುವ ಚೆಲುರಮಣಿ ಸೌಂದರ್ಯರಾಣಿ ಇದ್ದಂತೆ. ಅಂತೆಯೇ ಅದೃಷ್ಟದೇವಿಯೂ ಒಲಿದರೆ ನಾರಿ ಮುನಿ ದರೆ ಮಾರಿ." ಆಕೆ ರುದ್ರೆಯಾದಾಗ ಆ ಚಂಡಿ ಚಾಮುಂಡಿಯ ಮುಂದೆ ಯಾರೂ ನಿಲ್ಲಲಾರರು. ಅವಳ ಕೋಪಾಗ್ನಿಯ ಲಾವ ಹರಿಯಿತೆಂದರೆ ಅದಕ್ಕಾಹುತಿಯಾಗದ ಸಜೀವ ನಿರ್ಜೀವ ವಸ್ತು ಗಳು ಯಾವುವು?

ಮೆಕಿಯಾವೆಲ್ಲಿಯು ಸ್ವಚ್ಛಂದ ಇಚ್ಛಾಶಕ್ತಿಗೆ ಹೆಚ್ಚಿನ ಮಹತ್ವ ವಿತ್ತಿದ್ದಾನೆ. ಆ ಇಚ್ಛಾಶಕ್ತಿ ಕೋಪಕಾಳಿಯಾಗಿ, ಉಕ್ಕಿ

ಸೊಕ್ಕೇರಿ ಪ್ರವಾಹವಾಗಿ ಹರಿದಾಗ ಮಾನವಪ್ರಯತ್ನಗಳೆಲ್ಲ ಮರಳಿನಮೇಲೆ ನಿರ್ಮಿಸಿದ ಮನೆಗಳಂತೆಯೇ. ಆದರೂ ನಿರಾಶ ರಾಗಬಾರದು, ಪ್ರಯತ್ನಶೀಲತೆಯನ್ನು ತೊರೆಯಬಾರದು. ಶಕ್ಯವಿದ್ದಷ್ಟು ಅದೃಷ್ಟದೇವಿಯ ಕಾರ್ಯಗತಿಯನ್ನು ತಿಳಿಯಲೆತ್ನಿ ಸುವುದೇ ನಾವು ಕಲಿಯಬೇಕಾದ ಪಾಠವಾಗಿದೆ. ಘಟನಾವಳಿ ಗಳನ್ನು ನಾವೇ ನಿಯಂತ್ರಿಸಲು ಎಲ್ಲಿ ಅಧಿಕಾರ ಚಲಾವಣೆ ಮಾಡುತ್ತೇವೋ ಅಲ್ಲಿ ಆ ಅಧಿಕಾರ ಚಾಲನೆ ನಡೆಯದಾಗ, ಆ ಬಗ್ಗೆ ವೇದಾಂತಿಗಳೇ ಆಗಿಬಿಡುತ್ತೇವೆ–ಆಗಿಬಿಡಬೇಕಾಗುತ್ತದೆ.

೧೯. ಶಕ್ತಿವರ್ಗ–ಯುಕ್ತಿವರ್ಗ

ಇತಿಹಾಸದ ಉದ್ದಕ್ಕೂ ರಾಜಕೀಯ ಪ್ರಯೋಗಾನ್ವೇಷಣೆಗಳು ನಿರಂತರವಾಗಿ ಸಾಗುತ್ತಲೇ ಇವೆ. ಮಾನವರು ಆಯಾ ಕಾಲದ ಮಕ್ಕಳು. ಇತಿಹಾಸದಲ್ಲಿ ಅವರಿಗೆ ವಿನಾಸಲಾಗಿರುವ ಕಾಲಗಳಲ್ಲಿ ಮಾತ್ರ ಸಮಾಜದ ಸ್ಥಿತಿಗತಿಗಳಿಗೆ ಅನುಸಾರವಾಗಿ ತಮ್ಮ ನೀತಿ ಗಳನ್ನು ನಿರೂಪಿಸಿಕೊಳ್ಳುವ ವ್ಯಕ್ತಿತ್ವವುಳ್ಳವರಾದರೆ ಮಾತ್ರ ರಾಜ್ಯದ ಗುರಿಗಳನ್ನೂ, ಪ್ರಜೆಗಳನ್ನೂ ನಿಯಂತ್ರಿಸಬಹುದಾಗಿದೆ. ಇಲ್ಲದಿದ್ದಲ್ಲಿ ಜನತೆಯ ಸಾಮಾಜಿಕ ಮತ್ತು ಮಾನಸಿಕ ಆವಶ್ಯಕತೆ ಗಳನ್ನು ಅರಿಯದೆ ಯಶಸ್ವಿಯಾಗಿ ಅಧಿಕಾರ ಚಲಾಯಿಸಲು ಸಾಧ್ಯವಿಲ್ಲ.

ಜನತೆಯ ಸಾಮಾಜಿಕ–ಮಾನಸಿಕ ಆವಶ್ಯಕತೆಗಳನ್ನು ಅರಿತು ಸಕಾಲಿಕವಾಗಿ ಜಯಪ್ರದವಾಗಿ ಅಧಿಕಾರ ಸೂತ್ರಗಳನ್ನು ಹಿಡಿದು ರಾಜ್ಯವಾಳಬೇಕಾದರೆ ನಾವು ಮೆಕಿಯಾವೆಲ್ಲಿಯ ಮಾನಸ ಶಾಸ್ತ್ರೀಯ ವಿಶ್ಲೇಷಣೆಯನ್ನು ಅರಿಯಬೇಕಾಗಿದೆ. ಸಿಂಹಸ್ವರೂಪ

ಶಕ್ತಿವರ್ಗ ಮತ್ತು ನರಿಸ್ವರೂಪ ಯುಕ್ತಿವರ್ಗಗಳ ಪರಿಚಯುವನ್ನು ಪಡೆಯುಬೇಕಾಗಿದೆ.

ಮಾನಸಶಾಸ್ತ್ರದ ಪ್ರಕಾರ ಆಡಳಿತಗಾರರಿಗೆ ಎರಡುಪ್ರಬಲ ವ್ಯಕ್ತಿತ್ವಗಳಿವೆ. ಇವುಗಳನ್ನು ಸಾಂಕೇತಿಕವಾಗಿ ಸಿಂಹ ಮತ್ತು ನರಿ ಅಥವಾ ಶಕ್ತಿವರ್ಗ ಮತ್ತು ಯುಕ್ತಿವರ್ಗವೆಂದು ಕರೆಯುಬಹುದು. ಇಲ್ಲಿನ ವ್ಯಕ್ತಿತ್ವಗಳು ರಾಜಕೀಯು ಸ್ಥಿತಿಗತಿಗಳಿಗೆ ಅನುಗುಣವಾಗಿ ಭಿನ್ನವ್ಯಕ್ತಿತ್ವಗಳು. ಒಂದು ಕಾಲಕ್ಕೆ ರಾಜ್ಯಕ್ಕೆ ಸಿಂಹವ್ಯಕ್ತಿತ್ವ ಅಗತ್ಯವಿದ್ದರೆ, ಇನ್ನೊಂದು ಕಾಲಕ್ಕೆ ನರಿ ವ್ಯಕ್ತಿತ್ವ ಬೇಕಿರುತ್ತದೆ. ಈ ಅಂಶವನ್ನರಿತ ಆಡಳಿತಗಾರರು ಕಾಲಕೆ ತಕ್ಕಂತೆ ಗೋಮುಖವ್ಯಾಘ್ರರೋ ಅಥವಾ ವ್ಯಾಘ್ರಮುಖ ಗೋವುಗಳೋ ಆಗಬಲ್ಲರು.

ಆಡಳಿತರಂಗದಲ್ಲಿ ದ್ವಿವಿಧ ಹೋರಾಟಗಳಿವೆ. ಒಂದು ಶಾಸನ ಬದ್ಧ ಕಾನೂನಿನ ಹೊರಾಟ; ಇನ್ನೊಂದು ಬಲಕ್ಕನುಸಾರವಾಗಿ ಶಕ್ತಿಗಳ ಸೆಣಸಾಟ. ಮೊದಲನೆಯುದು ಮನುಷ್ಯ ವರ್ಗಕ್ಕೆ ತಕ್ಕುದಾದರೆ, ಎರಡನೆಯುದು ಮೃಗವರ್ಗಕ್ಕೆ ತಕ್ಕುದು. ಮೊದಲನೆಯುದು ವ್ಯರ್ಥವಾದಾಗ ಎರಡನೆಯುದಕ್ಕೆ 'ಅನ್ಯಥಾ ಶರಣಂ ನಾಸ್ತಿ' ಎನ್ನಬೇಕಾಗುತ್ತದೆ. ಆಳುವ ದೊರೆ ಈ ಎರಡು ಬಗೆಯು ಹೋರಾಟಗಳನ್ನು ತಿಳಿದಿರಬೇಕು.

ಸಿಂಹ ಬೋನಿಗೆ ಬಿದ್ದಾಗ ಎಷ್ಟೇ ಶಕ್ತಿಸಾಹಸಗಳನ್ನು ವ್ಯಯಿಸಿದರೂ ವ್ಯರ್ಥವೇ. ತೋಳಗಳ ನಡುವೆ ಸಿಕ್ಕಿಕೊಂಡ ನರಿಯು ಯುಕ್ತಿಯು ಆಟ ಏನೂ ಸಾಗದು. ಇಂತಹ ಸನ್ನಿವೇಶಗಳಿಂದ ಬಿಡುಗಡೆಯಾಗಬೇಕಾದರೆ ಸಿಂಹವು ನರಿಯಾಗಿ ಯುಕ್ತಿಯಿಂದ ಪಾರಾಗಬೇಕು. ನರಿಯೂ ಸಿಂಹವಾಗಿ ಶಕ್ತಿಯಿಂದ ಹೋರಾಡಿ ಗೆಲ್ಲಬೇಕು. ಹಾಗೆಯೇ ರಾಜನಿಗೆ ಶಕ್ತಿಯುಕ್ತಿಗಳೆರಡೂ

ಇರಬೇಕು. ಆಯಾಕಾಲಕ್ಕೆ ತಕ್ಕಂತೆ ಅವುಗಳನ್ನು ಬಳಸಿಕೊಳ್ಳ ಬೇಕು.

ಮನುಷ್ಯ ಮತ್ತು ಮೃಗ, ಸಿಂಹ ಮತ್ತು ನರಿ–ಬಗ್ಗೆ ಹೇಳಿದ ಮಾತುಗಳು ವ್ಯಕ್ತಪಡಿಸಿದ ಶಕ್ತಿ-ಯುಕ್ತಿ ವಿಚಾರಗಳು ವೈಜ್ಞಾನಿಕ ಮನಶ್ಶಾಸ್ತ್ರಕ್ಕಿಂತ ಹೆಚ್ಚಾಗಿ ಕಾವ್ಯದ ಅಲಂಕಾರಿಕ ಭಾಷೆಯಾದರೂ ಈ ಕಾವ್ಯಸಂಕೇತ ಪ್ರತಿಮೆಗಳನ್ನು ಅವಲಂಬಿಸಿ ರಾಜಕೀಯ ಸಿದ್ಧಾಂತಗಳು ಹೇಗೆ ಮುನ್ನಡೆದಿವೆ ಎಂಬುದು ಮಾತ್ರ ಕುತೂಹಲ ಕಾರಿಯಾದ ವಿಚಾರವಾಗಿದೆ.

ಶಕ್ತಿಬಲದಿಂದ ಬಾಳುವುದನ್ನು ಸಿಂಹಕ್ಕೆ ಹೋಲಿಸಿದರೆ ಅದು ರಾಕ್ಷಸೀಬಲವರ್ಗ ಆಗಬಹುದು ಅಥವಾ ವ್ಯಕ್ತಿತ್ವದ ಶಕ್ತಿತ್ವ ಆಗಬಹುದು. ಆ ಬಗೆಯ ಶಕ್ತಿವರ್ಗದ ವ್ಯಕ್ತಿ ತನ್ನ ಮುಖ ಮುದ್ರೆಯಿಂದಲೇ ಅನುಯಾಯಿಗಳನ್ನು ಆಕರ್ಷಿಸಬಲ್ಲ. ಜನ ಅಂಥವರನ್ನು ಬಯಸಿದಾಗ ಅಧಿಕಾರ ಅವರ ಹಸ್ತಗತವಾಗುತ್ತದೆ.

ಯುಕ್ತಿವರ್ಗದ ವ್ಯಕ್ತಿ ಸಮಾಜದಲ್ಲಿ ನಿರ್ದಿಷ್ಟ ಆವಶ್ಯಕತೆಗಳ ಪೂರೈಕೆಗಾಗಿ ದಕ್ಷತೆಯಿಂದ ಧ್ಯೇಯನೀತಿಗಳನ್ನು ನಿರ್ಮಿಸಿ ರೂಪಿಸ ಬೇಕಾಗುತ್ತದೆ.

ಜನತೆ, ಪ್ರಭಾವಶಾಲಿ ನಾಯಕವ್ಯಕ್ತಿ ಚಾಣಾಕ್ಷನೊಬ್ಬನು, ತಮ್ಮನ್ನು ಮುನ್ನಡೆಸಬೇಕೆಂದು 'ಕರುಣಾಳು ಬಾ ಬೆಳಕೆ' ಎಂದು ಹಂಬಲಿಸುವ ಕಾಲವೊಂದಿರುತ್ತದೆ. ಆಗ ನರಿ ರಾಯರಂಥ ಯುಕ್ತಿವರ್ಗ ಕಾರ್ಯಸಾಧನೆಗೆ ಬೇಕಾಗುತ್ತದೆ. ಪಕ್ಷಪ್ರಾಬಲ್ಯ ವನ್ನು ಸಂಘಟಿಸುವುದರ ಮೂಲಕ, ಮೂಲ ಸಾಧನಗಳನ್ನು ಆಕ್ರಮಿಸಿಕೊಳ್ಳುವುದರ ದ್ವಾರಾ ಅಧಿಕಾರದ ಹೋರಾಟವನ್ನು ನಡೆಸಿ, ಯಶಸ್ಸು ಗಳಿಸುವುದು ಹೇಗೆ ಎಂಬುದು ಈ ವರ್ಗದವರ ವಿಚಾರವಾಗಿರುತ್ತದೆ.

ಶಕ್ತಿವರ್ಗ-ಯುಕ್ತಿವರ್ಗಗಳ ವ್ಯಕ್ತಿತ್ವಗಳು ಉತ್ತರಧ್ರುವ ದಕ್ಷಿಣಧ್ರುವಗಳಿದ್ದಂತೆ. ಚಂಚಲಚಿತ್ತ ಜನತೆ ಈ ವಾರ ಯುಕ್ತಿ ವರ್ಗವನ್ನು ಅಪೇಕ್ಷಿಸಿದರೆ, ಮರುವಾರವೇ ಶಕ್ತಿವರ್ಗವನ್ನು ಅಪೇಕ್ಷಿಸಬಹುದು. ಆದಕಾರಣ, ಯಾರಾದರೂ ಬಹುಕಾಲ ಆಡಳಿತದಲ್ಲಿ ಇರಬಯಸಿದಲ್ಲಿ ಅವರಿಗೆ ಈ ದ್ವಂದ್ವ ವ್ಯಕ್ತಿತ್ವಗಳೂ ಇರಬೇಕು. ಅನೇಕ ವರ್ಷಗಳ ಕಾಲ ಅಧಿಕಾರ ಚಲಾಯಿಸಿದವರು ತಮ್ಮ ಅಧಿಕಾರವನ್ನು ಕಳೆದುಕೊಂಡರೆ, ಅದಕ್ಕಾಗಿ ವಿಧಿಯನ್ನು ಶಪಿಸುವುದಕ್ಕಿಂತ ತಮ್ಮ ಅಲಕ್ಷ್ಯ ಅಸಡ್ಡೆಗಳನ್ನು ನಿಂದಿಸಿಕೊಳ್ಳ ಬೇಕು.

ಈ ರೀತಿಯಲ್ಲಿ, ದ್ವಂದ್ವವ್ಯಕ್ತಿತ್ವದಲ್ಲಿ ರಾಜ್ಯರಥವನ್ನು ಸಂದರ್ಭಕ್ಕೆ ತಕ್ಕ ಮಾರ್ಗಗಳಲ್ಲಿ ಒಯ್ಯಬಲ್ಲ, ತಿರುಗಿಸಬಲ್ಲ ರಾಜರು ಕೆಲವೇ ಮಂದಿ ಎಂಬುದು ಮೆಕಿಯಾವೆಲ್ಲಿಯ ಅಭಿಪ್ರಾಯ.

ಅದೃಷ್ಟವನ್ನೇ ನಂಬಿ ಕೈಕಟ್ಟಿ ಕುಳಿತ ಜನ ಅದೃಷ್ಟದ ಕಾರಣ ದಿಂದ ಅಧಿಕಾರವೇರಿದ ಮೇಲೆ ಮತ್ತರಾಗಿ ಕುಳಿತು, ಅದೃಷ್ಟವು ಬದಲಿಸಿದ ಕೂಡಲೇ ಅದೇ ಕಾರಣಕ್ಕಾಗಿಯೇ ಕೆಳಗಿಳಿಯುತ್ತಾರೆ. ಆದ್ದರಿಂದ ಅದೃಷ್ಟದ ಬೆನ್ನಟ್ಟದೆ ಶಕ್ತಿ-ಯುಕ್ತಿವಂತರಾದಲ್ಲಿ ಬಹು ಕಾಲ ಅಧಿಕಾರದ ಚಾವಟಿಯನ್ನು ಹಿಡಿಯಬಲ್ಲರು. ಯಾರೊ ಬ್ಬರೂ ಎಲ್ಲ ಕಾಲಗಳಲ್ಲೂ ಬರಿ ಸಿಂಹವಾಗಿ ಶಕ್ತಿವಂತರಾಗಿ. ಇಲ್ಲವೇ ನರಿಯಾಗಿ ಯುಕ್ತಿವಂತರಾಗಿಯೇ ಇದ್ದರೆ ಪ್ರಯೋಜನ ವಿಲ್ಲ. ಸನ್ನಿವೇಶ ಬದಲಾಯಿಸಿದಂತೆಲ್ಲಾ ವ್ಯಕ್ತಿತ್ವದ ಮಾರ್ಪಾಟೂ ಅತ್ಯಗತ್ಯ.

ಕ್ರಾಂತಿಕಾಲದಲ್ಲಿ ಸಮರಭೇರಿ ಹೊಡೆದು, ಆಂದೋಲನವನ್ನು ಸಂಚಾಲಿಸಿ ಜಡಜನರನ್ನು ಬಡಿದೆಬ್ಬಿಸಿ ಪುನಶ್ಚೇತನಗೊಳಿಸಿ. ಹಿಂಸೆ

ಕ್ರೌರ್ಯಗಳ ಕಾಳ್ಗಿಚ್ಚನ್ನೆಬ್ಬಿಸಲು ಸಿಂಹನಾಯಕನು ಬೇಕಾಗುತ್ತಾನೆ. ಒಮ್ಮೆ ಕ್ರಾಂತಿಯುಜ್ಞ ಜಯಪ್ರದವಾದರೆ, ಬಗಲಿಗೇ ಜನತೆಯನ್ನು ಪೋಷಿಸುವ ಶಾಂತಿಕ್ರಮಗಳನ್ನು ಬರಿಸುವ ಹೊಣೆ ಬರುತ್ತದೆ. ಹೊಸ ಆರ್ಥಿಕ ನೀತಿ ನಿರೂಪಣೆ ಮೊದಲಾದ ಸರ್ವವಿಧ ಪ್ರಯತ್ನಗಳೂ ಜರುಗಬೇಕಾಗುತ್ತದೆ. ಆಗ ನರಿರಾಯರಂಥ ಯುಕ್ತಿವರ್ಗದ ನೇತಾರನಿಗೆ ಆರತಿತಟ್ಟೆ ಸಿದ್ಧವಾಗಿರುತ್ತದೆ.

ಮೆಕಿಯಾವೆಲ್ಲಿಯ ಸಿದ್ಧಾಂತದ ಸತ್ವಪರೀಕ್ಷೆ, ಹಿಂಸೆಯ ಕಾರ್ಯ ಮುಗಿದು ಹೊಸರಾಜ್ಯ ತಹಬಂದಿಗೆ ಬಂದು ಶಾಂತಿಸ್ಥಾಪನೆ ಆಗುವಲ್ಲಿಗೆ ಶಕ್ತಿ-ಯುಕ್ತಿ ವರ್ಗಗಳೆರಡರ ಪ್ರದರ್ಶನವಾದ ಮೇಲೆ, ಅದರ ಅಗ್ನಿ ಪರೀಕ್ಷೆ ಪೂರೈಸುತ್ತದೆ.

ಕೇವಲ ಶಕ್ತಿವರ್ಗವು ಯುಕ್ತಿವರ್ಗದ ಆಡಳಿತದ ತಂತ್ರ ಕೌಶಲಗಳನ್ನು ಕಲಿಯುವುದು ಕಷ್ಟವಿದೆ. ಅಂತೆಯೇ ಯುಕ್ತಿವರ್ಗವು, ಶಕ್ತಿವರ್ಗವನ್ನು ಬಯಸಿದಾಗ ಉತ್ತರ ನೀಡಲು ಸಾಧ್ಯವಿಲ್ಲ. ಅದಕ್ಕೆ ನಿದರ್ಶನವೆಂದರೆ, ಕುಶಲ ಆಡಳಿತಗಾರರಾಗಿದ್ದ ಹರ್ಬರ್ಟ್ ಹೂವರರು ೧೯೩೨ ರಲ್ಲಿ ಅಮೆರಿಕೆಯ ಚುನಾವಣಾರಂಗದಲ್ಲಿ ಜನ ಬಯಸಿದ ವ್ಯಕ್ತಿತ್ವವನ್ನು ಪ್ರದರ್ಶಿಸಲಾರದೇ ಹೋದರು. ಹಾಗೆನ್ನುವ ಬದಲು ಆ ಕಾಲಕ್ಕೆ ತಕ್ಕಂಥ ಇನ್ನೊಬ್ಬ ವ್ಯಕ್ತಿಯ ಶಿರದಮೇಲೆ ಅದೃಷ್ಟದೇವಿ ತನ್ನ ಮುಕುಟವನ್ನಿಡಬೇಕೆಂದಿದ್ದಳು ಎನ್ನೋಣವೆ!

ಆದರೂ ಮೆಕಿಯಾವೆಲ್ಲಿ ಹೇಳುತ್ತಾನೆ: "ಅದೃಷ್ಟದೇವಿಯೇ ಕಗ್ಗತ್ತಲಿನಲ್ಲಿ, ಕವಲೊಡೆದ ಹಾದಿಗಳಲ್ಲಿ ಅಂಧಳಾಗಿ ಅಲೆದಾಡುವಾಗ ನಾವೇಕೆ ನಿರಾಶೆಗೆ ಬಲಿಯಾಗಬೇಕು. ನಾವೂ ಆಶಾವಾದಿಗಳಾಗಿರೋಣ" ಎಂದು.

ಸಮಾಜದಲ್ಲಿ ಸನ್ನಿವೇಶಗಳನ್ನು ಅನುಕೂಲಿಸಿದಂತೆ, ಅದೃಷ್ಟ ದೇವಿ ಕರುಣಿಸಿದಂತೆ, ಶಕ್ತಿವರ್ಗದ ಕಾಲ ಬಂದಾಗ ಯುಕ್ತಿ ವರ್ಗದ ಜನ ತೆರೆಮರೆಯಲ್ಲಿರಬೇಕು. ಅಂತೆಯೇ ಯುಕ್ತಿವರ್ಗ ದವರ ಕಾಲಬಂದಾಗ ಶಕ್ತಿವರ್ಗದವರು ತೆರೆಮರೆಯಲ್ಲಿರಬೇಕು. ಈ ಆವರ್ತನ ಚಕ್ರಗತಿ ಇತಿಹಾಸದುದ್ದಕ್ಕೂ ಸಾಗುತ್ತಲೇ ಇರುತ್ತದೆ. ಈ ಬದಲಾವಣೆಗಳು ಚುನಾವಣೆ ವಿಧಾನ-ಕ್ರಾಂತಿ ವಿಧಾನ, ಅಥವಾ ಇವೆರಡರ ನಡುವಣಮಾರ್ಗದಲ್ಲಿ ಉಂಟಾಗು ತ್ತಿರುತ್ತದೆ.

ಇತಿಹಾಸದ ಸಿದ್ಧಾಂತಗಳನ್ನು ಇತರ ಲೇಖಕರೂ, ಮುಖ್ಯ ವಾಗಿ ಹೆಗೆಲ್ ಮತ್ತು ಮಾರ್ಕ್ಸರು ಮುಂದಿಟ್ಟಿದ್ದಾರೆ. ಆದರೆ ಯಾರೊಬ್ಬರೂ ಮನಶ್ಶಾಸ್ತ್ರದೃಷ್ಟಿಯಿಂದ ಮೆಕಿಯಾವೆಲ್ಲಿಯು ಹಾಗೆ ವಿವೇಚನಾಮಂಥನ ಮಾಡಿಲ್ಲ.

೨೦. ಸಮಾಪ್ತಿ

ಮೆಕಿಯಾವೆಲ್ಲಿಯು ದ್ವಂದ್ವ ವ್ಯಕ್ತಿತ್ವದ (Dual personality) ವ್ಯಕ್ತಿ. ಅವನ ಬಗ್ಗೆ ಇರುವ ಪರ-ವಿರೋಧವಾದಗಳೇ ಇದಕ್ಕೆ ಸಾಕ್ಷಿಯಾಗಿವೆ. "ರಾಜಕೀಯ ಒಳಸಂಚುಗಾರ-ಉದ್ರಿಕ್ತ ದೇಶ ಭಕ್ತ," "ನಿರಂಕುಶಾಧಿಕಾರದ ಆರಾಧಕ-ಪ್ರಜಾಪ್ರಭುತ್ವದ ವಿಶ್ವಾಸಿ." ಇತ್ಯಾದಿ ಆರೋಪಣಾ ಅಸ್ತ್ರಗಳನ್ನು ಇತಿಹಾಸ ಕಾರರೂ, ಕೃತಿವಿಮರ್ಶಕರೂ ಅವನ ಮೇಲೆ ಝಳಪಿಸಿದ್ದಾರೆ. ಅಮೆರಿಕನ್ ಜನತೆ ಮೆಫಿಸ್ಟೋಫೇಲಿಯನ್‌ಗೆ 'ಮೆಕಿಯಾವೆಲ್ಲಿ ಯನ್' ಪದವನ್ನು ಸಮಾನಿಸುತ್ತಾರೆ.

ಈ ರೀತಿಯ ಆರೋಪಣೆಗಳಿಗೆ ಕಾರಣ. ಅವನು ತಾತ್ವಿಕ

ದೃಷ್ಟಿಗಿಂತ ವ್ಯಾವಹಾರಿಕ ದೃಷ್ಟಿಯನ್ನು ಹೊಂದಿದ್ದುದು. ಧಾರ್ಮಿಕ, ಆರ್ಥಿಕ ವಿಚಾರಗಳನ್ನು ರಾಜಕೀಯ ಮಾನದಂಡ ದಿಂದ ಅಳೆದನು. ಅಧಿಕಾರದ ಬಳಕೆ ರಾಜ್ಯಪರಿಪಾಲನೆಗಳತ್ತ ಅವನ ದೃಷ್ಟಿಯೆಲ್ಲಾ ಕೇಂದ್ರೀಕೃತವಾದ ಕಾರಣ ಅವನ ವಿಶಾಲ ದೃಷ್ಟಿ ಸೂಕ್ಷ್ಮಪ್ರಶ್ನೆಗಳಿಗೆ, ನಾವು ಇಂದು ಪ್ರಾಶಸ್ತ್ಯಕೊಡುವ ವಿಚಾರದೃಷ್ಟಿಗಳಿಗೆ ಆದ್ಯ ಗಮನ ಕೊಡಲಿಲ್ಲ. ರಾಜ್ಯ–ರಾಜ್ಯಗಳ ನಡುವಣ ವಿಚಾರವಾಗಿ ನಡೆಸಿದ ವಿಚಾರಮಂಥನದಿಂದ ಅವನಲ್ಲಿ ರಾಷ್ಟ್ರಕಲ್ಪನೆ ಮೂಡಿರಬೇಕು.

"ಮೆಕಿಯಾವೆಲ್ಲಿಯ ತತ್ವ–ವಾದ ಸ್ಫುಟವಾಗಿದ್ದರೂ, ದೂರಾ ಲೋಚನೆಯದಲ್ಲ. ಅವನು ರಾಜತಂತ್ರವನ್ನು ಕಪಟತಂತ್ರವಾಗಿ ತಿಳಿದನು" ಎನ್ನುತ್ತಾರೆ, ಡಾ॥ ಮುರ್ರೆ.

ಸಿ.ಎಸ್. ಫಾಕ್ಸರು, "ನೈತಿಕ ದೃಷ್ಟಿಯಿಂದ ತಪ್ಪಾದದ್ದು ರಾಜಕೀಯ ದೃಷ್ಟಿಯಿಂದ ಸರಿಯಾಗಿರಲಾರದು" ಎಂದು ಮೆಕಿಯಾವೆಲ್ಲಿಯನ್ನು ಖಂಡಿಸಿದ್ದಾರೆ.

ಪ್ರೊ. ಜಾಸ್ಕಿ ಹೇಳುತ್ತಾರೆ, "ಅವನೊಬ್ಬ ಅತ್ಯುನ್ನತ ರಾಷ್ಟ್ರ ಪ್ರೇಮಿ. ಅವನ ಸಿದ್ಧಾಂತಗಳೆಲ್ಲಾ, ಅಸತ್ಯಪೂರ್ಣ, ಹಾಗೂ ಅನೈತಿಕಮಯ" ಎಂದು.

ಈ ವಿರೋಧ ವಾದಗಳು ಮೆಕಿಯಾವೆಲ್ಲಿಯನ್ನು ಕೆಳಗಿಳಿಸು ವುದಕ್ಕಿಂತ, ಅವನ ವ್ಯಕ್ತಿತ್ವದ ಇನ್ನೊಂದು ಮುಖವನ್ನು ಪರಿಚಯ ಮಾಡಿಕೊಡುತ್ತವಷ್ಟೆ. ಈ ವಿರೋಧಗಳ ಜೊತೆಗೆ ಮೆಕಿಯಾ ವೆಲ್ಲಿಯ ಪರವಾಗಿಯೂ ಸಾಕಷ್ಟು ವಾದಗಳಿವೆ. ಫ್ರಾನ್ಸಿಸ್ ಬೇಕನ್ನನು ಮೆಕಿಯಾವೆಲ್ಲಿಯ ಅಧಿಕರಣಾಂಶವನ್ನು, ಅದರ ವಾಸ್ತವಿಕ ಗ್ರಹಣ ವಿಧಾನವನ್ನೂ ಚೆನ್ನಾಗಿ ತಿಳಿಸಿದ್ದಾನೆ. ಫ್ರಾನ್ಸಿಸ್ ಡೆಕಾರ್ಟೆಯೂ ಅವನನ್ನು ಅನುಮೋದಿಸಿದ್ದಾನೆ.

ನಮ್ಮ ದೇಶದ ಕೌಟಿಲ್ಯನ ವಾಪಸರಣಿಗೂ ಗಾಂಧೀಜಿಯ ರಾಜನೀತಿಗೂ ಮತ್ತು ಪಾಶ್ಚಿಮಾತ್ಯ ದೇಶದ ಮೆಕಿಯಾವೆಲ್ಲಿಯ ರಾಜನೀತಿಗೂ ಸಾಕಷ್ಟು ಗಮನಾರ್ಹವಾದ ಸಾಮ್ಯ ವೈಷಮ್ಯ ಗಳಿವೆ.

ಕ್ರಿ.ಶ. ೧೮೬೯ ರಲ್ಲಿ ನಡೆದ ಮೆಕಿಯಾವೆಲ್ಲಿಯ ಚತುರ್ಥ ಶತಾಬ್ದಿ ಸಮಾರಂಭದಲ್ಲಿ, ಫ್ಲಾರೆನ್ಸಿನ ಅವನ ಸಮಾಧಿಯ ಮೇಲೆ ಕೆತ್ತಿಸಿದ ವಾಕ್ಯವು ಮಹತ್ವ ಪೂರ್ಣವಾಗಿಯೂ ಅರ್ಥಗರ್ಭಿತ ವಾಗಿಯೂ ಇದೆ. ಈ ವಾಕ್ಯವು ಮೆಕಿಯಾವೆಲ್ಲಿಯ ಗ್ರಂಥ ಸಮುದಾಯಗಳ, ಹಾಗೂ ಅವನ ತತ್ವ ಸಿದ್ಧಾಂತಗಳ ಮಹತ್ವದ ಕಡೆಗೆ ನಮ್ಮ ಗಮನವನ್ನು ಸೆಳೆದಿದೆ.

ಆ ಶಿಲಾಲೇಖವನ್ನು ಮತ್ತೆ ಸ್ಮರಿಸೋಣ:—

"ಅಂಥ ಮಹತ್ತರ ವ್ಯಕ್ತಿಗೆ ಎಂಥ ಪ್ರಶಂಸೆಯಾದರೂ ಅತ್ಯಲ್ಪವೇ ಸರಿ."

ಪ್ರಮಾಣ ಗ್ರಂಥಗಳು

೧. "Political philosophies"–Maxey.

೨. "A History of Political theory"–Sabine.

೩. "Thoughts on Machiavelli"–Leo Strauss.

೪. "The living thoughts of Machiavelli"-Count. Carlo Sforza

೫. "Political Theory"–Hawker.

೬. "Machiavelli"–Christian Gauss.

೭. "ಮೆಕಿಯಾವೆಲ್ಲಿ"–ನವರತ್ನ ರಾಮರಾವ್.

೮. ಪಾಶ್ಚಾತ್ಯ ರಾಜಕೀಯ ಸಿದ್ಧಾಂತಗಳು"– ಹೆಚ್. ಕೃಷ್ಣರಾವ್

೯. "Kautilya's Arthashastra" M. V. Krishna Rao.

ಕೆ.ಸಂ. ೨೭೪೭೭–ಎಂಯುಪಿಎಂ–ಪ್ರತಿ ೧೦,೦೦೦–೧೦–೧೧–೧೯೮೭

ಕೆಲವು ಸಾಹಿತ್ಯ ಕೃತಿಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ. ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ. ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ. ಹಿರಣ್ಮಯ
೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ. ಎಚ್. ತಿಪ್ಪೇರುದ್ರಸ್ವಾಮಿ

೨೯. ಅಲ್ಲಮಪ್ರಭು—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ. ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—
ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ
೩೪. ಜನ್ನ—ಡಾ. ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ. ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ. ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀ ಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ. ಹಿರಣ್ಮಯ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ. ಆರ್. ಎಸ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ
೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ
೫೮. ಭಾರತೀಯ ಮಹಿಳಾ ಪರಂಪರೆ—ಬಿ. ಪಿ. ಚಂದ್ರಾಬಾಯಿ
೫೯. ಬಂಧುವರ್ಮ—ಬಿ. ಎಸ್. ಸಣ್ಣಯ್ಯ
೬೦. ಶ್ರೀರಾಮಾಯಣದರ್ಶನಂ—ಒಂದು ಸಮೀಕ್ಷೆ—ಡಾ. ಸಿ.ಪಿ.
ಕೃಷ್ಣಕುಮಾರ್